ಬೆಲೆ: ಎರಡು ಆಣೆ

ಕರ್ಮವೀರ

ಸಂಪಾದಕರು:
ಹ. ರಾ. ಪುರೋಹಿತ ಎಂ. ಎ.

——ಅಖಿಲ ಕರ್ನಾಟಕದಲ್ಲಿ ಅತ್ಯಂತ ಜನಪ್ರಿಯ ವಾರಪತ್ರಿಕೆ——

Editor:
H. R. Purohit, M. A.

—(ಸಂಪುಟ ೧೯)— ಹುಬ್ಬಳ್ಳಿ ಸೋಮವಾರ ತಾರೀಖು ೪—೮—೧೯೪೭ —(ಸಂಚಿಕೆ ೧೮)—

ಭಾರತಕ್ಕೊಂದು ಪಂಚವಾರ್ಷಿಕ ಯೋಜನೆ ಅಗತ್ಯ

ಭಾರತದ ಆರ್ಥಿಕ ದುರ್ದಶೆ- ಸಾಮ್ಯವಾದಿಗಳ ಸಲಹೆ- ಧ್ಯೇಯ ವಿರೋಧದ ಬಗ್ಗೆ ಎಚ್ಚರ- ಸರ್ವರ ಸಹಕಾರದ ಆವಶ್ಯಕತೆ. . . .

ಉಧ್ವಸ್ತ ಆರ್ಥಿಕ ದಶೆಯನ್ನು ಸರಿಪಡಿಸಲು ಭಾರತದ ಪುನರ್ರಚನೆ ಮತ್ತು ಅಭಿವೃದ್ಧಿಗಳ ಬಗ್ಗೆ ಸರದಾರ ಪಟೇಲರೆಂದಂತೆ ಒಂದು ಪಂಚವಾರ್ಷಿಕ ಕಾರ್ಯಕ್ರಮವು ಅತ್ಯಗತ್ಯವೆಂದೂ ಧ್ಯೇಯ ಘರ್ಷಣದಿಂದ ಪ್ರಗತಿಗೆ ತಡೆ ಬರದಂತೆ ವಾಸ್ತವತೆಯ ಕಡೆ ಲಕ್ಷ್ಯವಿಟ್ಟು ಸಮಸ್ಯೆಯನ್ನು ಬಗೆಹರಿಸಬೇಕೆಂದೂ ರಾಜಕೀಯ ಧುರೀಣರು, ಬಂಡವಾಲಿಗರು, ಕೂಲಿಕಾರರು ಮತ್ತು ಸಾರ್ವಜನಿಕರು— ಈ ಎಲ್ಲರೂ ಮೇಲಿನ ಯೋಜನೆಯನ್ನು ಯಶಸ್ವಿಯಾಗಿ ಮಾಡಲು ಸಹಕರಿಸಬೇಕೆಂದೂ ಹೇಳುವುದಲ್ಲದೆ ಉಕ್ತ ಧುರೀಣರು ರಾಷ್ಟ್ರೀಕರಣವನ್ನು ಒಂದೇ ಸಲ ಅತಿ ಪ್ರಮಾಣದಲ್ಲಿ ಮಾಡಹೋಗಕೂಡದು, ಬಂಡವಾಲಿಗರು ಕೂಲಿಕಾರರನ್ನು ಔದಾರ್ಯದಿಂದ ನಡೆಸಿಕೊಳ್ಳಬೇಕು ಮತ್ತು ಕೂಲಿಕಾರರು ನಿವಾರ್ಯವಾದ ಸಂಪುಗಳನ್ನು ಹೂಡಕೂಡದು ಎಂದು ಅ. ಭಾ. ಕಾಂ. ಕಮಿಟಿಯ ಆರ್ಥಿಕ ಶಾಖೆಯ ಕಾರ್ಯದರ್ಶಿಗಳಾದ ಪ್ರೊ. ಕೆ. ಮಿತ್ರರು ಅಭಿಪ್ರಾಯಪಡುತ್ತಾರೆ.

ಕಳೆದ ಅ. ಭಾ. ಕಾಂ. ಕಮಿಟಿಯ ಸಭೆಯು ಈ ದೇಶದ ರಾಜ್ಯಘಟನೆಯ ಪ್ರಶ್ನೆಯನ್ನು ಇತ್ಯರ್ಥಪಡಿಸಿತು ಹಾಗೂ ಭಾರತದ ರಾಜಕೀಯ ಹೋರಾಟದ ಅಧ್ಯಾಯವನ್ನು ಕೊನೆಗಾಣಿಸಿತು. ಚರ್ಚೆಯ ಕಾಲದಲ್ಲಿ ಸರದಾರ ವಲ್ಲಭಭಾಯಿ ಪಟೇಲರು ದೇಶದ ಆರ್ಥಿಕ ಪುನರ್ರಚನೆ ಮತ್ತು ಏಳಿಗೆಗಾಗಿ ಪಂಚವಾರ್ಷಿಕ ಯೋಜನೆಯೊಂದರ ಅಗತ್ಯವನ್ನು ಒತ್ತಿ ಹೇಳಿದರು ಮತ್ತು ಅಲ್ಪೋತ್ಪಾದನೆ ಹಾಗೂ ಅಸಮಂಜಸ ವಿತರಣಗಳ ವಿರುದ್ಧವಾಗಿ ಹೊಸ ಹೋರಾಟವನ್ನು ಪ್ರಾರಂಭಿಸಬೇಕೆಂದು ಎಲ್ಲ ಭಾರತೀಯರಿಗೂ ನೆನಪು ಮಾಡಿಕೊಟ್ಟರು.

ಪಾಶ್ಚಾತ್ಯ ದೇಶಗಳಲ್ಲಿ ಆರ್ಥಿಕ ಪುನರುಜ್ಜೀವನ

ಅಮೇರಿಕದ ದೇಶಗಳಲ್ಲಿ ಆರ್ಥಿಕ ಚಟುವಟಿಕೆಗಳ ಮಟ್ಟವು ಯುದ್ಧಪೂರ್ವಕ್ಕಿಂತ ಮೇಲೇರಿದೆ ಮತ್ತು ನೇರವಾಗಿ ಯುದ್ಧದ ಪರಿಣಾಮಗಳನ್ನುಣ್ಣುತ್ತಿರುವ ಯುರೋಪಿನ ಮತ್ತು ಇತರ ಖಂಡದ ದೇಶಗಳಲ್ಲಿ ಅದು ಹೆಜ್ಜೆ ಹೆಜ್ಜೆಗೂ ಮೇಲೆ ಸಾಗುತ್ತಿದೆ. ೧೯೩೯ ರ ನಂತರ ಅಮೇರಿಕದಲ್ಲಿ ಉತ್ಪಾದನದ ಪ್ರಮಾಣವು ನೂರಕ್ಕೆ ೬೦ ರಷ್ಟು, ಕೆನಡದಲ್ಲಿ ೭೦ ರಷ್ಟು, ಚಿಲಿಯಲ್ಲಿ ೬೫ ರಷ್ಟು ಮತ್ತು ಮೆಕ್ಸಿಕೋದಲ್ಲಿ ೪೮ ರಷ್ಟು ಹೆಚ್ಚಿದೆ. ಸ್ವೀಡನ್ನಿನ ಕೈಗಾರಿಕೆಯ ಉತ್ಪಾದನವು ಯುದ್ಧಪೂರ್ವಕ್ಕಿಂತ ಈಗ ಹೆಚ್ಚಾಗಿದೆ, ಡೆನ್ಮಾರ್ಕಿನಲ್ಲಿ ಯುದ್ಧಪೂರ್ವದ ಪ್ರಮಾಣಕ್ಕೆ ಅದನ್ನು ತರಲಾಗಿದೆ ಮತ್ತು ಕಳೆದ ವರ್ಷ ಯುದ್ಧಪೂರ್ವಕ್ಕಿಂತ ನೂರಕ್ಕೆ ೫೦ರಷ್ಟು ಇಳಿದು ಹೋದ ಉತ್ಪಾದನ ಪ್ರಮಾಣವನ್ನು ಬೆಲ್ಜಿಯಂ ಮತ್ತು ಫ್ರಾನ್ಸ್ ದೇಶಗಳು ಈಗ ಯುದ್ಧಪೂರ್ವದ ಪ್ರಮಾಣಕ್ಕೆ ತಂದು ಮುಟ್ಟಿಸಲು ಶಕ್ತವಾಗಿವೆ.

ಮೇಲೆ ಹೇಳಿದ ದೇಶಗಳು ಒಂದು ಜಾಗತಿಕ ಯುದ್ಧಾನಂತರ ಉಂಟಾಗುವ ಎಲ್ಲ ವಿಧದ ಬಂಡವಾಲ ಮತ್ತು ಕೂಲಿಕಾರರ ಕೊರತೆಯನ್ನೂ ಎದುರಿಸಬೇಕಾಗಿತ್ತು. ಅವುಗಳಲ್ಲಿ ಕೆಲವು ದೇಶಗಳಂತೂ ಶತ್ರುಗಳ ವಿಮಾನ ದಾಳಿಯಿಂದ ಸಂಪೂರ್ಣ ನಾಶಮಾಡಲ್ಪಟ್ಟಂಥವುಗಳಾಗಿವೆ. ಆದರೂ ಅವು ಉತ್ಪಾದನದಲ್ಲಿ ಮುನ್ನಡೆಯಿಡಲು ಶಕ್ತವಾದವು. ಭಾರತದಲ್ಲಿ ಉತ್ಪಾದನದ ನ್ಯೂನತೆಗೆ ದೊಡ್ಡ ಯಂತ್ರಸಾಮಗ್ರಿಗಳ ಅಭಾವ ಮತ್ತು ಕೂಲಿಕಾರರ ಗಲಭೆಗಳೇ ಕಾರಣವೆಂದು ಹೇಳಿ ತಣ್ಣಗೆ ಕುಳಿತುಕೊಳ್ಳುವುದು ರೂಢಿಯಾಗಿ ಹೋಗಿದೆ. ಈ ವಿವರಣವು ಇನ್ನು ಮುಂದೆ ಅಪ್ರಯೋಜಕವೇ ಸರಿ. ಅಧಿಕಾರಹಸ್ತಾಂತರವಾದ ಕೂಡಲೆ ಪುನರ್ರಚನೆ ಮತ್ತು ಅಭಿವೃದ್ಧಿ ಕಾರ್ಯಗಳು ಹೊಸ ಹಾದಿಯಿಂದ ಮುಂದೆ ಸಾಗಬೇಕು. ಜನರ ಸಹನೆಯು ಅಳಿದು ಆಯಾಸದ ರೂಪ ತಾಳುತ್ತಿದೆ; ಅದು ಕೇವಲ ನಿಷ್ಕಾರಣದಿಂದಲ್ಲ.

ಭಾರತದ ಪರಿಸ್ಥಿತಿಯ ಅಧೋಗತಿ

ಕೆಲವು ಹೆಚ್ಚು ಉತ್ಪಾದನ ಮಾಡುವ ಪ್ರಾಂತಗಳನ್ನು ಬಿಟ್ಟು ಉಳಿದಲ್ಲೆಲ್ಲ ಸೀದಾ ಪ್ರಮಾಣವು ಕಡಿಮೆಯಾಗುತ್ತ ಹೋಗಿದೆ. ತಲಾ ೧೭ ಗಜ ಕೊಡಲಾಗುತಿದ್ದ ಬಟ್ಟೆಯ ಪ್ರಮಾಣವನ್ನು ೧೦ ಗಜಕ್ಕೆ ಇಳಿಸಲಾಗಿದೆ. ಅದು ಸಹ ಹಳ್ಳಿ ಪಳ್ಳಿಗಳಲ್ಲಿ ಸರಿಯಾಗಿ ಸಿಕ್ಕುವುದಿಲ್ಲ. ಮನೆಗಳ ಅಭಾವ ಹಾಗೇ ಸಾಗಿದೆ. ೧೦೦೦ ರೂಪಾಯಿಗಳನ್ನು ಪಗಡಿ ಕೊಡದೆ ಎರಡು ಕೋಣೆಗಳ ಒಂದು ಮನೆಯಾಕಾರದ ಕಟ್ಟಡವನ್ನು ಮುಂಬಯಿಯಲ್ಲಿ ಬಾಡಿಗೆಗೆ ಪಡೆಯಲಸಾಧ್ಯ. ಲಂಚನಿರ್ಮೂಲನ ಶಾಖೆಯವರು ಎಷ್ಟೇ ಕಾರ್ಯಕ್ರಮಗಳನ್ನು ಕೈಗೊಂಡರೂ ಕಳ್ಳಪೇಟೆಯ ವ್ಯಾಪಾರ ದಿನೇ ದಿನೇ ವೃದ್ಧಿಯಾಗುತ್ತಿದೆ. ಅತಿಪ್ರಸರಣವು ಏನೂ ಕಡಿಮೆಯಾಗಿಲ್ಲ. ಭಾರತದಲ್ಲಿ ಯುದ್ಧಾನಂತರ ಸಾಮಾನುಗಳ ಬೆಲೆ ದಶಾಂಶ ಹೆಚ್ಚಿದುದು ಮಾರ್ಚ ೧೯೪೭ ರಲ್ಲಿ ನಿಯಂತ್ರಣವಿದ್ದೂ ೩೬೯ ಕ್ಕೇರಿದೆ. ನಿಜವಾಗಿಯೂ ಭಾರತದ ಜನರು ಯುದ್ಧದಿಂದ ಆಘಾತಪಟ್ಟದ್ದಕ್ಕಿಂತ ಹೆಚ್ಚಾಗಿ ಶಾಂತಿಯಿಂದಲೇ ಸಾಕು ಸಾಕಾಗಿ ಹೋಗಿದ್ದಾರೆ!

ಸಾಮ್ಯವಾದಿಗಳ ತರಣೋಪಾಯ

ಕೊರತೆಯ ಪ್ರಶ್ನೆಯನ್ನು ಉತ್ತರಿಸಲು ಏಳಮುಖರಾಗಿ ಹಿಂದೀಯರು ಹೆಣಗಬೇಕೆಂಬ ಸರದಾರರ ಮಾತನ್ನು ಮನನ ಮಾಡಿ ಡಾ. ರಾಮಮನೋಹರ ಲೋಹಿಯರವರು ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ. ಲಾಭದ ಪರಮಾವಧಿ ನಿರ್ಣಯ, ಕೂಲಿಕಾರರು ಲಾಭದಲ್ಲಿ ಪಾಲು ಪಡೆವಂತೆ ಮಾಡುವುದು, ಹೊಟ್ಟೆಬಟ್ಟೆಗ ಬೇಕಾದಷ್ಟು ವೇತನ ಅವರಿಗೆ ದೊರೆವಂತೆ ಮಾಡುವುದು, ಕಾರಖಾನೆಗಳ ವ್ಯವಸ್ಥೆಯ ಕಾರ್ಯದಲ್ಲಿ ಅವರು ಭಾಗವಹಿಸಲನುಗೊಳಿಸುವುದು ಮತ್ತು ಅಭಿಪ್ರಾಯಭೇದವುಂಟಾದಾಗ ಶೀಘ್ರವಾಗಿ ನಿಷ್ಪಕ್ಷಪಾತವಾಗಿ ನಿರ್ಣಯಿಸಿಕೊಡುವ ಪಂಚಾಯತರನ್ನು ನಿಯಮಿಸುವುದು- ಇವುಗಳನ್ನೊಳಗೊಂಡ ಧೋರಣವನ್ನು ಸರಕಾರವು ತಳೆಯುವುದೇ ತರಣೋಪಾಯವೆಂದು ಅವರ ಮತ. ಇದರಿಂದ ಉತ್ಪಾದನಕ್ಕಡ್ಡ ಬರುವ ವಿಘ್ನಗಳ ಪರಿಹಾರವಾಗುತ್ತದೆ. ಸದ್ಯಕ್ಕೆ ಪುನರ್ರಚನಾ ಯೋಜನೆಗಳಿಗೆ ಸಂಬಂಧಿಸಿದ ಹೊಸ ಕೈಗಾರಿಕೆಗಳನ್ನು ಮಾತ್ರ ರಾಷ್ಟ್ರೀಕರಣ ಮಾಡಿದರೆ ಸಾಕೆಂದು ಡಾ. ಲೋಹಿಯರವರು ಹೇಳುತ್ತಾರೆ. ಹಳ್ಳಿಗಳಲ್ಲಿ ಸಹಕಾರ ಚಟುವಟಿಕೆಗಳನ್ನು ಪ್ರೋತ್ಸಾಹಿಸಬೇಕು. ಬಲಾತ್ಕರಿಸದೆ ಅಧಿಕಾರೇತರ ಕಾರ್ಯಕರ್ತರೇ ಮೊದಲು ಅಂತಹ ಚಟುವಟಿಕೆಗಳನ್ನು ಪ್ರಾರಂಭಿಸಬೇಕು; ಅದಕ್ಕೆ ಅಧಿಕಾರಿಗಳು ಬೆಂಬಲ ಕೊಡತಕ್ಕದ್ದು ಅವಶ್ಯ. ಸಹಕಾರ ಕಾರ್ಯಗಳು ಮಾತ್ರ ದಾರಿದ್ರ್ಯ ನಿರಕ್ಷರತೆಗಳನ್ನು ಹೋಗಲಾಡಿಸಲು ಸಮರ್ಥವಾಗುವುವೆಂದು ಅವರು ಅಭಿಪ್ರಾಯಪಡುತ್ತಾರೆ.

ಭಾರತದಲ್ಲಿ ಯೋಜನೆಗಳಿಗೆ ಬರಬಂದಿಲ್ಲ. ೧೦ ಸಾವಿರ ಕೋಟಿಯ ಬಂಡವಾಲಿಗರ ಯೋಜನೆ, ರ್‍ಯಾಡಿಕಲ್ ಡೆಮೊಕ್ರ್ಯಾಟಿಕ್ ಪಕ್ಷದ ಜನತಾ ಯೋಜನೆ, ಎಸ್. ಎನ್. ಅಗರವಾಲರ ಗಾಂಧೀ ಯೋಜನೆ ಮತ್ತು ಡಾ ಜೆ. ಸಿ. ಕುಮಾರಪ್ಪನವರ ಗ್ರಾಮಾಭಿವೃದ್ಧಿ ಯೋಜನೆ— ಈ ಕೆಲವು ನಮಗೆ ಚಿರಪರಿಚಿತವಾದವು. ೧೯೪೬ ನೆಯ ಸೆಪ್ಟಂಬರಿನಲ್ಲಿ ರಾಷ್ಟ್ರೀಯ ಯೋಜನಾ ಸಮಿತಿಯು ಆಹಾರ, ವಿದ್ಯೆ ಮತ್ತು ಮನೆಗಳ ಸಂಬಂಧವಾಗಿ ಹೇಳಿಕೆಯನ್ನು ಪ್ರಕಟಿಸಿತು. ಉಳಿದ ವಿಷಯಗಳ ಮೇಲೂ ಹೇಳಿಕೆಯನ್ನು ಆಗಲೇ ಪ್ರಸಿದ್ಧಿಪಡಿಸಬೇಕಾಗಿತ್ತು. ಇಂದು ಯಾವ ಯೋಜನೆಯೇ ಆಗಲಿ, ಅರಿಯಬೇಕಾಗಿದ್ದ ಪರಿಸ್ಥಿತಿಗಳು ಭಾರತ ವಿಭಜನೆಯಿಂದಲೂ ಸ್ವಾತಂತ್ರ್ಯ ಸಂಪಾದನದಿಂದಲೂ ಬದಲಾಗಿ ಹೋಗಿವೆ. ಆದರೆ ಸಂಗ್ರಹಿಸಿದ ವಿಷಯಜ್ಞಾನ ಮತ್ತು ಅಂಕೆ ಸಂಖ್ಯೆಗಳು ಮುಂದಿನ ಯೋಜನೆಗಾರರಿಗೆ ಬಹಳ ಪ್ರಯೋಜನಕಾರಿಗಳಾಗದಿರವು.

ಭಾರತದಲ್ಲಿ ಯುದ್ಧವು—ಅತಿಪ್ರಸರಣ, ಸಾಮಾನುಗಳ ಅವ್ಯವಸ್ಥಿತವಾದ ಬೆಲೆ, ಲಂಚ ತೆಗೆದುಕೊಳ್ಳುವ ನೌಕರರು, ಕೀಳು ದರ್ಜೆಯ ವ್ಯಾಪಾರನೀತಿ ಮತ್ತು ಸರಕಾರದ ನಿಷ್ಪಕ್ಷಪಾತ ಮತ್ತು ಕಾರ್ಯದಕ್ಷತೆಗಳಲ್ಲಿ ವಿಶ್ವಾಸವನ್ನು ಕಳೆದುಕೊಂಡು ಗ್ಲಾನಿ ಹೊಂದಿದ ಹಾಗೂ ಕಷ್ಟನಷ್ಟಗಳಿಗೆ ಗುರಿಪಡಿಸಲ್ಪಟ್ಟ ಜನ— ಇಷ್ಟನ್ನು ಆಸ್ತಿಯಾಗಿ ಬಿಟ್ಟು ಹೋಗಿದೆ. ಇದರ ಮೇಲೆ ಎಂದೋ ಆಗಬೇಕಾಗಿದ್ದ ಸುಧಾರಣೆಗಳು ಇನ್ನೂ ಆಗದೆ ದೇಶವು ಈಗ ಒಂದು ಸಾಮಾಜಿಕ ಕ್ರಾಂತಿಯನ್ನೇ ಹೂಡಹೊರಡುವುದರಲ್ಲಿದೆ.

ಧ್ಯೇಯಗಳ ಬಗ್ಗೆ ಎಚ್ಚರ!

ಆರ್ಥಿಕ ಪುನರ್ರಚನೆಗಾಗಿ ಒಂದು ಪಂಚವಾರ್ಷಿಕ ಯೋಜನೆಯನ್ನು ತಯಾರಿಸಲು ತಜ್ಞ ಸಮಿತಿಯೊಂದನ್ನು ನಿಯಮಿಸುವದು ಭಾರತ ಕಾಂಗ್ರೆಸ್ಸಿನ ಸದ್ಯದ ಕರ್ತವ್ಯ. ಧ್ಯೇಯಗಳಿಗೆ ಸಂಬಂಧಿಸಿದ ಕಲಹಗಳಿಂದ ರಾಷ್ಟ್ರೀಯ ಪುನರ್ರಚನಾ ಸಮಿತಿಯ ಕಾರ್ಯಗಳು ಬಹುಮಟ್ಟಿಗೆ ವಿಘ್ನಿತವಾದುವೆಂಬುದೊಂದು ಪ್ರಸಿದ್ಧವಾದ ಗುಟ್ಟು. ಅಭಿಪ್ರಾಯಭೇದಗಳಿಗಾಗಿ ಅಖಿಲ ಭಾರತ ಗ್ರಾಮ ಕೈಗಾರಿಕೆಯ ಸಂಘದ ಕಾರ್ಯದರ್ಶಿಗಳಾದ ಡಾ. ಜೆ. ಸಿ. ಕುಮಾರಪ್ಪನವರು ರಾಜೀನಾಮೆ ಕೊಡಬೇಕಾಯಿತು. ಕಾಂಗ್ರೆಸ್ಸು ಒಂದು ತಜ್ಞ ಸಮಿತಿಯನ್ನು ನಿಯಮಿಸಿದರೆ ಧ್ಯೇಯಗಳು ಅಡ್ಡ ಬಂದು ಕಾರ್ಯವನ್ನು ಕುಂಠಿತಗೊಳಿಸದಿರಲಿ, ಕಾರ್ಯಕ್ರಮವನ್ನು ಗೊತ್ತುಪಡಿಸುವ ಕೆಲಸವನ್ನು ಮುಂಬರಿಸುವಂತೆ ಮಾಡದಿರಲಿ. ಜನರಿಗೆ ಅನ್ನ ಬೇಕಲ್ಲದೆ ಧ್ಯೇಯಗಳಲ್ಲ. ಕೈಗಾರಿಕೆಗಳ ರಾಷ್ಟ್ರೀಕರಣವನ್ನು ಕಾರ್ಯಕ್ಷಮತೆ ಮತ್ತು ಅಭಿವೃದ್ಧಿಯ ದೃಷ್ಟಿಯಿಂದ ಪ್ರಾರಂಭಿಸದೆ ಧ್ಯೇಯಸಾಧನೆಗೋಸ್ಕರ ಪ್ರಾರಂಭಿಸಿದರೆ ಅನಿಷ್ಟ ಪರಿಣಾಮಗಳುಂಟಾಗುವುದರಲ್ಲಿ ಸಂದೇಹವಿಲ್ಲ. ಯಾರೇ ಹೇಳಲಿ, ಯುಕ್ತ ಸೂಚನೆಗಳಾಗಿದ್ದರೆ ಅವನ್ನು ಸಮಿತಿಯ ಸದಸ್ಯರು ತೆರೆದ ಮನಸ್ಸಿನಿಂದ ಅಂಗೀಕರಿಸಲು ಹಿಂದೆಮುಂದೆ ನೋಡಬಾರದು.

ಸ್ವಯಂಪೂರ್ಣತೆ ಮತ್ತು ಕೈಗಾರಿಕೆಯ ವಿಕೇಂದ್ರೀಕರಣವೆಂದರೆ ಹೌಹಾರುವ ಜನರು ಕೆಲವರಿದ್ದಾರೆ. ಅತ್ಯಾವಶ್ಯಕ ವಸ್ತುಗಳ ತಯಾರಿಕೆಯಲ್ಲಿ ಒಂದು ದೇಶವು ಸ್ವಯಂಪೂರ್ಣವಿರಬೇಕೆಂಬ ಪಾಠವನ್ನು ಇಂದಿನ ಯುದ್ಧ ಮತ್ತು ಕಳೆದ ಕ್ಷಾಮಗಳು ನಮಗೆ ಕಲಿಸಿವೆ. ಸಮರ್ಥ ಕೇಂದ್ರ ಸರಕಾರಕ್ಕೂ ಸಶಸ್ತ್ರ ರಕ್ಷಣಾಬಲಕ್ಕೂ ಅವಕಾಶ ಮಾಡಿಕೊಡುವ ಘಟನೆಯನುಸಾರವಾಗಿ ಸ್ವಯಂಪೂರ್ಣತೆ ಮತ್ತು ವಿಕೇಂದ್ರೀಕರಣಗಳಿರಬೇಕಲ್ಲದೆ ತದ್ವಿರುದ್ಧವಾಗಿರಬಾರದೆಂಬುದನ್ನೇನೋ ಎಲ್ಲರೂ ಒಪ್ಪಿಕೊಳ್ಳಬೇಕು.

ಸಹಕಾರ ಪದ್ಧತಿ

ಆರ್ಥಿಕ ಕಾರ್ಯಕ್ರಮವನ್ನು ರಚಿಸುವದರಲ್ಲಿ ಕಾರ್ಯಕ್ಷಮವಾಗಿರುವ ವರೆಗೆ, ಆರ್ಥಿಕ ವೈಷಮ್ಯವನ್ನು ಕಡಿಮೆ ಮಾಡಲು ಉತ್ಪಾದನ ಮತ್ತು ವಿತರಣಗಳಲ್ಲಿ ಸಹಕಾರ ಪದ್ಧತಿಯನ್ನು ಅನುಸರಿಸಬೇಕು. ಜ್ಞಾನ ವಿಜ್ಞಾನಗಳ ಹೆಸರಲ್ಲಿ ಕೇವಲ ವೇದಿಕಾ ವ್ಯಾಖ್ಯೆ ಕೊಡುತ್ತ ಕುಳಿತುಕೊಳ್ಳದ, ಆಧುನಿಕತೆಯ ಹೆಸರಲ್ಲಿ ಕಲ್ಪನಾ ಸಾಮ್ರಾಜ್ಯವನ್ನು ಕಟ್ಟುವ ಹವ್ಯಾಸಕ್ಕೆ ಬೀಳದ ಮತ್ತು ಧ್ಯೇಯದ ಹೆಸರಿನಲ್ಲಿ ಅಂಧಾನುಯಾಯಿಗಳಾಗಿರದ ಜನರೇ ಅಂತಹ ಆರ್ಥಿಕ ಕಾರ್ಯಕ್ರಮದ ಕರಡನ್ನು ಸಿದ್ಧ ಮಾಡಲು ಅಗತ್ಯ.

ಕೇವಲ ಕಾರ್ಯಕ್ರಮವೊಂದೇ ಉನ್ನತಿಯನ್ನು ಸಾಧಿಸದು. ಪ್ರಾಂತ ಸರಕಾರಗಳು ಒಂದಲ್ಲ ಒಂದು ಕಾರಣದಿಂದ ಸರಿಯಾಗಿ ಅನುವನ್ನು ದೊರಕಿಸಿಕೊಡದುದರಿಂದ ಡಾ. ರಾಜೇಂದ್ರ ಪ್ರಸಾದರ ಆಹಾರವನ್ನು ಹೆಚ್ಚು ಬೆಳೆಯಿಸುವ ಕಾರ್ಯಕ್ರಮವೇ ನಡೆಯಬೇಕಾದಷ್ಟು ಕಾವಿನಿಂದ ನಡೆಯಲಿಲ್ಲ. ಯೋಜನೆಗಳ ತಯಾರಿಕೆಯ ಅನುಭವದಿಂದ ಹೇಳಬೇಕಾದರೆ ಕಡೆಯ ಪಕ್ಷ ಒಂದು ದಶಕದ ವರೆಗಾದರೂ ಕೈಗಾರಿಕೆ ಮತ್ತು ಒಕ್ಕಲತನಗಳು ಕೇಂದ್ರ ಸರಕಾರದ ಅಧಿಕಾರಕ್ಕೆ ಒಳಪಟ್ಟಿರಬೇಕು.

ಹೊಸ ಕಾರ್ಯಕ್ರಮಕ್ಕೆ ಸರಿಯಾದ ರೂಪ ಕೊಡುವುದರಲ್ಲಿ ಉತ್ಪಾದಕರಾದ ಬಂಡವಾಲಿಗರು ಮತ್ತು ಕೂಲಿಕಾರರು ಮುಖ್ಯ ಪಾತ್ರವನ್ನು ವಹಿಸಬೇಕಾಗಿದೆ. ಇಂದು ಹೊಸ ಯಂತ್ರೋಪಕರಣಗಳು ಸಿಕ್ಕುವುದು ಕಷ್ಟ. ಆದರೆ ಅವು ಸಿಕ್ಕಿದರೆ ಕಾರಖಾನೆಯ ಮಾಲಿಕರು ತಮ್ಮ ಹಳೆಯ ಯಂತ್ರಗಳ ಬದಲು ಅವನ್ನು ಬಳಸಲು ಉತ್ಸುಕರಾಗುವುದಿಲ್ಲ. ಯಂತ್ರಗಳು ಅಸ್ತಿರುವ ವರೆಗೆ ಅವುಗಳಿಂದಲೇ ಕೆಲಸ ಸಾಗಿಸುತ್ತಾರೆ. ಎಷ್ಟೋ ಕಾರಖಾನೆಗಳಲ್ಲಿ ಯಂತ್ರಾದಿಗಳ ಜ್ಞಾನವಿಲ್ಲದ ಅಪರಿಣತರು ಯಾಜಮಾನ್ಯ ವಹಿಸಿ ನಡೆಸುತ್ತಿದ್ದಾರೆ. ಅವರಿಗೆ ಹೊಸ ಕ್ರಮ ಮತ್ತು ರಾಷ್ಟ್ರೀಕರಣ ಪದ್ಧತಿಗಳ ಅರಿವಿಲ್ಲ. ಮತ್ತು ಪಕ್ಷ ನಿಧಿಯನ್ನು ಹೊಸ ಯಂತ್ರೀಕರಣ ವಿಕ್ರಯಕ್ಕಾಗಿ ಬಳಸುವುದಿಲ್ಲ.

ಹಿಂದೀ ಬಂಡವಾಲಿಗರು ಈ ಕೆಟ್ಟ ವಾಣಿಜ್ಯ ಪದ್ಧತಿಗಳನ್ನು ಬಿಡತಕ್ಕದ್ದು. ... ಕಾಯಿದೆಯಿಂದ ಬಿಡುಮಂತೆ ಅವನ್ನು ಒತ್ತಾಯಪಡಿಸಬೇಕು.

ಕೂಲಿಕಾರರ ಹೊಣೆಗಾರಿಕೆ

ದೇಶದ ವೃದ್ಧಿ ಅಭಿಯನ್ನು ಸಾಧಿಸುವುದರಲ್ಲಿ ಮುಕ್ತೊಂದು ಮುಖ್ಯ ಬಲವೆಂದರೆ ಕೂಲಿಕಾರರದು. ಇಂದು ಭಾರತವು ಸಂಪಿನ ಕಲಹಗಳಲ್ಲಿ ಹಾಯ್ದು ಹೋಗುತ್ತಿದೆ. ಕಳೆದ ವರ್ಷ (೧೯೪೬) ೧೯೪೩ ಸಂಪು ೧೨೦೭೬೩೬ ಕೆಲಸಗಾರರು, ೧೨೦೩೬೫೦ ಕೆಲಸದ ದಿನಗಳಲ್ಲಿ ಕೆಲಸ ಮಾಡದೆ ಕುಳಿತರು. ಮಾಸಿಕ ಉತ್ಪಾದನ ಪ್ರಮಾಣಕ್ಕಿಂತ ಆಗಷ್ಟಪವರೆಗೆ ಉತ್ಪಾದನ ಇಳಿಯುತ್ತ ನಡೆದಿರುವುದು ಇಲ್ಲಾಗುತ್ತಿದೆ:—

— ೧೩ ನೇ ಪುಟಕ್ಕೆ

— ೧೩ ನೇ ಪುಟಕ್ಕೆ

ಹಳ್ಳಿಯ ವಾಚನಾಲಯಗಳು

(ಲೇ:— ಶ್ರೀ. ವೆಂಕಟೇಶ, ಸಾಂಗಲಿ)

ಹಳ್ಳಿಗಳ ಪುರೋಭಿವೃದ್ಧಿಯಲ್ಲಿ ಅಸಹ್ಯವಾದ ವರೆಗೆ ಇಂದು ವಾಚನಾಲಯ ಚಳವಳಿಯು ಪ್ರಮುಖ ಕಾರ್ಯಕ್ಷೇತ್ರವಾಗಿದೆ. ಕಳೆದ ತಿಂಗಳು ೨೬ ನೆಯ ತಾರೀಖಿನ ದಿನ ಮುಂಬ ಯಿಯಲ್ಲಿ ಮಧ್ಯವರ್ತಿ ಗ್ರಂಥಾಲಯದ ಉದ್ಘಾಟನೆಯನ್ನು ಮುಖ್ಯ ಮಂತ್ರಿ ಶ್ರೀ ಖೇರರು ನೆರವೇರಿಸಿದರು. ಸರಕಾರವು ತನ್ನ ಕಾರ್ಯವನ್ನು ತೃಪ್ತಿಕರವಾಗಿ ನಿರ್ವಹಿಸಿದ್ದು, ಇನ್ನು ಮುಂದೆ ಜನತೆಯು ತನ್ನ ಹೊಣೆಗಾರಿಕೆಯನ್ನು ಅರಿತು ದುಡಿಯಬೇಕಾಗಿದೆ ಎಂದು ಅಂದಿನ ಸಂದರ್ಭದಲ್ಲಿ ಅವರು ಆಡಿದ ಮಾತುಗಳು ಯಥಾರ್ಥವಾಗಿವೆ. ಲೋಕೋಪಕಾರದ ಯಾವ ಯೋಜನೆಯೇ ಆಗಲಿ ಸಾರ್ವಜನಿಕರ ಸಹಕಾರವಿಲ್ಲದೆ ಯಶಸ್ವಿಯಾಗಲಾರದು.

ಹಳ್ಳಿಗಳು ಮತ್ತು ವಾಚನಾಲಯಗಳು

ಮುಂಬಯಿ ಪ್ರಾಂತದಲ್ಲಿಯ ಒಟ್ಟು ೨೧೯೧೮ ಹಳ್ಳಿಗಳು ಈ ಯೋಜನೆಯ ಲಾಭ ಪಡೆಯಲಿವೆ. ಆದರೆ ಇದು ತೀರ ಕೊನೆಯ ಮೆಟ್ಟಲು. ೨೦೦೦ ದಿಂದ ೫೦೦೦ ದ ವರೆಗೆ ಜನವಸತಿಯುಳ್ಳ ಪ್ರಮುಖ ಗ್ರಾಮಗಳಿಗೆ ಮೊದಲು, ೧೦೦೦ ದಿಂದ ೨೦೦೦ ದ ಜನಸಂಖ್ಯೆಯುಳ್ಳ ಹಳ್ಳಿಗಳಿಗೆ ನಂತರ, ಎಲ್ಲಕ್ಕೂ ಕೊನೆಗೆ ಉಳಿದ ಸಣ್ಣ ಹಳ್ಳಿಗಳಿಗೆ—ಅಂದರೆ ೧೦೦೦ ಕ್ಕಿಂತ ಕಡಿಮೆ ಜನಸಂಖ್ಯೆಯುಳ್ಳ ಎಲ್ಲ ಸ್ಥಳಗಳಲ್ಲೂ ವಾಚನಾಲಯಗಳ ಪ್ರಸಾರ ಆಗಬೇಕೆಂಬುದು ಸರಕಾರದ ಆಕಾಂಕ್ಷೆ;

ಇದರ ಹೊರತು ೨೪೭ ತಾಲೂಕು, ೧೯ ಜಿಲ್ಹೆ, ಮೂರು ಪ್ರಾದೇಶಿಕ ಈ ರೀತಿ ವಾಚನಾಲಯದ ಜಾಳಿಗೆ ಪ್ರಾಂತದ ಎಲ್ಲ ಭಾಗದಲ್ಲಿಯೂ ಹರಡಲಿದೆ. ಕರ್ನಾಟಕದ ಪಾಲು ಇದರಲ್ಲಿ ಮೂರನೆಯ ಒಂದಂಶಕ್ಕಿಂತ ಕಡಿಮೆ. ಬೆಳಗಾವಿ, ಧಾರವಾಡ, ವಿಜಾಪೂರ, ಕಾರವಾರ ಈ ನಾಲ್ಕು ಜಿಲ್ಹೆಗಳಲ್ಲಿ ಒಟ್ಟು ಸುಮಾರು ೪೬೪೭ ಹಳ್ಳಿ, ೪೧ ಪಟ್ಟಣಗಳಿವೆ. ಈಗಾಗಲೇ ಸುಮಾರು ಒಂದುವರೆ ಸಾವಿರ ವಾಚನಾಲಯಗಳು ಮೇಲ್ಕಾಣಿಸಿದ ನಾಲ್ಕು ಜಿಲ್ಹೆಗಳಲ್ಲಿ ನಡೆಯುತ್ತಿವೆ ಎಂದು ಸ್ಥೂಲವಾಗಿ ಹೇಳಬಹುದು. ಅವುಗಳಲ್ಲಿ ಮುಂಬಯಿ ಸರಕಾರದ ಪ್ರೌಢ ಶಿಕ್ಷಣ ಕಾಯದೆಯ ಮೇರೆಗೆ ಸ್ಥಾಪಿತವಾದ ಗ್ರಾಮವಾಚನಾಲಯಗಳೇ ಹೆಚ್ಚು. ಅವುಗಳ ಸಂಖ್ಯೆ ೮೫೭೦ ಈ ಸಂಖ್ಯೆಯೂ ಅಷ್ಟು ಉತ್ಸಾಹಕಾರಿಯಾದುದಲ್ಲ. ಪ್ರಾಥಮಿಕ ಶಾಲೆಯಿದ್ದ ಪ್ರತಿ ಗ್ರಾಮದಲ್ಲಿಯೂ ವಾಚನಾಲಯವನ್ನು ಸ್ಥಾಪಿಸಬೇಕಾದ್ದು ಅವಶ್ಯ. ಹಾಗಾಗಿದ್ದರೆ ನಮ್ಮಲ್ಲಿ ಇಂತಹ ಹಳ್ಳಿಯ ವಾಚನಾಲಯಗಳ ಸಂಖ್ಯೆ ೨೨೮೨ ಇರಬಹುದಾಗಿತ್ತು.

ಈ ಸರಕಾರದ ಮಾನ್ಯ ವಾಚನಾಲಯಗಳನ್ನು ಬಿಟ್ಟರೆ ಉಳಿದವು ಬಹುತರವಾಗಿ ಸಾರ್ವಜನಿಕ ಸಂಸ್ಥೆಗಳು. ಮುನಸಿಪಾಲಟಿ, ಬ್ಯಾಂಕು, ಮತ್ತು ಇತರ ಸಹಕಾರಿ ಸಂಸ್ಥೆಗಳು ಸ್ಥಳೀಯ ವಾಚನಾಲಯಗಳಿಗೆ ವಾರ್ಷಿಕ ದೇಣಿಗೆಯನ್ನು ಕೆಲವು ಕಡೆಗೆ ಕೊಡುತ್ತಿದ್ದರೂ ತಮ್ಮ ಹಣಕಾಸಿನ ವ್ಯವಸ್ಥೆಯನ್ನು ನೋಡಿಕೊಂಡು ಸ್ವತಂತ್ರವಾಗಿ ಅದೆಲ್ಲ ಸಾಗಿಸುವ ಭಾರ ಈ ಸಾರ್ವಜನಿಕ ವಾಚನಾಲಯಗಳ ಮೇಲೆಯೇ ಬಿದ್ದಿರುತ್ತದೆ.

ವಾಚನಾಲಯಗಳನ್ನು ಸ್ಥಾಪಿಸುವುದು, ಬೆಳಸಿಕೊಂಡು ಹೋಗುವದು ಕಠಿಣವಾದ ಕೆಲಸ. ಈ ವಿಷಯವಾಗಿ ಒಂದೆರಡು ಸೂಚನೆಗಳನ್ನು ಸ್ಪಷ್ಟಪಡಿಸುವದು ಅವಶ್ಯವಾಗಿದೆ.

ಹಳ್ಳಿಗರ ಮನರಂಜನೆ

ಹಳ್ಳಿಗರ ಮನಸ್ಸನ್ನು ಪುಸ್ತಕಗಳ ಕಡೆಗೆ ಒಲಿಸುವದು ಸುಲಭ ಸಾಧ್ಯವಲ್ಲ. ತಮ್ಮ ನಿಶ್ಚಿದ ದುಡಿತದಿಂದ ಆದ ದಣಿವನ್ನು ಕಡಿಮೆ ಮಾಡಿ ಮನಸ್ಸಿಗೆ ಸಂತೋಷವನ್ನುಂಟುಮಾಡುವ ಒಂದು ಪ್ರಮು ಪರಿಹಾರ ಸಾಧನವೆಂದು ಅವರಿಗೆ ವಾಚನಾಲಯದ ಪರಿಚಯವನ್ನು ಮಾಡಿಕೊಡಬೇಕಾಗುತ್ತದೆ. ಘನವಾದ ತತ್ವಗಳೂ ಜಟಿಲವಾದ ರಾಜಕೀಯ ಸಮಸ್ಯೆಗಳೂ ಅವರಿಗೆ ಮೊದಮೊದಲು ರುಚಿಸಲಾರವು. ಹಳ್ಳಿಯ ಗ್ರಂಥಾಲಯಗಳಿಗೆ ಪುಸ್ತಕವನ್ನು ಕರಿಸುವಾಗಲೂ ಈ ವಿಷಯವನ್ನು ಗಮನಿಸುವದು ಅಗತ್ಯ. ಓದುಗರ ಮನಸ್ಸಿಗೆ ರುಚಿಸುವ ಬುದ್ಧಿಗೆ ತಿಳಿಯುವ ಪುಸ್ತಕಗಳೇ ಹೆಚ್ಚು ಪ್ರಯೋಜನಕಾರಿ. ಇಂದು ಬೆಳೆಯುತ್ತಿರುವ ವಾಚಕವರ್ಗದಲ್ಲಿ ಸುಮಾರು ನೂರಕ್ಕೆ ೭೦ ಜನರು ಕಥೆ ಕಾದಂಬರಿಗಳನ್ನು ಓದುತ್ತಿರುವರೆಂಬದು ಮೇಜಿನ ಮಾಹಿತಿಗೆ ಸಾಕ್ಷಿ. ಇತರ ಶಾಸ್ತ್ರ, ತತ್ವ, ಕಾವ್ಯಗಳನ್ನು ಬೇಡುವ ಜನರು ಕಡಿಮೆ. ಹಳ್ಳಿಗೆ ಹೋದಂತೆ ಸರಸ ಸುಲಭ ವಾಙ್ಮಯವನ್ನು ಅಪೇಕ್ಷಿಸುವವರ ಸಂಖ್ಯೆ ಹೆಚ್ಚಿದ್ದು ಕಂಡುಬರುತ್ತದೆ. ಹಳ್ಳಿಗರ ಮನರಂಜನೆಗೆ ಬೇಕಾಗುವ ಸಾಹಿತ್ಯವನ್ನು ಒದಗಿಸಿ ಈ ಸಂಸ್ಥೆಯು ನಮ್ಮ ಬದುಕನ್ನು ಸುಖಮಯಮಾಡುವದಕ್ಕೂ ತಿದ್ದುವದಕ್ಕೂ ಅವಶ್ಯವಾಗಿದೆ ಎಂಬ ಭಾವನೆ ಅವರಲ್ಲಿ ಹುಟ್ಟುವಂತೆ ಮಾಡಿದರೆ ಕಾರ್ಯಕರ್ತರ ಹೊಣೆಯು ಅರ್ಧಪಾಲು ಇಳಿದಂತೆ. ವಾಚನಾಲಯದ ಮಹತ್ವ ಹೀಗೆ ಜನಜೀವನದಲ್ಲಿ ಬಿಂಬಿತವಾದರೆ ಸಂಸ್ಥೆಯ ಭವಿತವ್ಯ ಉಜ್ವಲವಾಗುತ್ತದೆ ಎಂಬುದರಲ್ಲಿ ಸಂದೇಹವಿಲ್ಲ. ತಮ್ಮ ಯೋಗ್ಯತಾನುಸಾರವಾಗಿ ಜನರು ವರ್ಗಣಿ ಕೊಡಬಲ್ಲರು. ಅಲ್ಲದೆ ಮನೆಯಲ್ಲಿ ಮಂಗಲಕಾರ್ಯ, ಶುಭಪ್ರಸಂಗ ಬಂದಾಗ ಅಂಥವರಿಂದ ಪ್ರತ್ಯೇಕ ಕಾಣಿಕೆಗಳನ್ನು ಎತ್ತುವದೂ ಸಾಧ್ಯವಿದೆ ಈರೀತಿ ಹಣಕೂಡಿಸಿ ಸಾಮಾಜಿಕ ಸಂಸ್ಥೆಗಳನ್ನು ಕಟ್ಟುವ ರೂಢಿ ನಮಗೆ ಹೊಸದಲ್ಲ. ಹಳೆಯ ರೂಢಿಯನ್ನು ಇಂದಿನ ಸ್ಥಿತಿಗೆ ಒಗ್ಗುವಂತೆ ಸರಿಪಡಿಸಿಕೊಳ್ಳಬೇಕಾಗಿದೆ. ಹಳ್ಳಿಯ ರೈತರಿಂದ ನಾವು ಹೆಚ್ಚು ಧನ ನಿರೀಕ್ಷಿಸುವಂತಿಲ್ಲ. ಅಲ್ಲದೆ ವಾಚನಾಲಯಕ್ಕೆ ಬರುವವರೆಲ್ಲರೂ ವರ್ಗಣಿದಾರರಿರಲೇಬೇಕು ಎಂಬ ನಿಯಮವೂ ಇರಕೂಡದು. ಇಂತಹ ಕಟ್ಟುನಿಟ್ಟುಗಳು ವಾಚನಾಲಯದ ಬೆಳವಣಿಗೆಗೆ ಆತಂಕವಾಗುವವು.

ವಾಚನಾಲಯದ ವ್ಯವಸ್ಥೆ

ಉತ್ಪನ್ನದ ಮೂರನೆಯ ಒಂದಂಶ ಹಣವನ್ನು ಪುಸ್ತಕ ಪತ್ರಿಕೆಗಳಿಗಾಗಿ ಮೀಸಲಿಡಬೇಕು. ಉಳಿದದ್ದರಲ್ಲಿ ಇತರ ಅಡೆತಡ ಖರ್ಚನ್ನು ನಿರ್ವಹಿಸಬಹುದು. ಇದರಲ್ಲಿಯ ಬಹುಭಾಗ ಕಪಾಟು—ಮೇಜಿಗೆ. ಕಾಗದ ಮಸಿ, ಇತರ ಲೇಖನ ಸಾಹಿತ್ಯದ ವೆಚ್ಚವೂ ಲಕ್ಷಿಸಬೇಕಾದುದೇ. ವಾಚನಾಲಯದಲ್ಲಿಯ ಎಲ್ಲ ಪುಸ್ತಕಗಳನ್ನು ವಿಷಯಾನುಕ್ರಮವಾಗಿ ಬರೆದಿಡುವ ಪುಸ್ತಕಗಳ ಪಟ್ಟಿ, ಪುಸ್ತಕಗಳನ್ನು ಸಭಾಸದರಿಗೆ ಕೊಡುವಾಗ ಬರೆದುಕೊಳ್ಳುವ 'ವಿತರಣ ಪಟ್ಟಿ' ಇವುಗಳ ಹೊರತು, ಸಂಸ್ಥೆಯು ಪ್ರಾರಂಭವಾದಂದಿನಿಂದ ಇಂದಿನ ವರೆಗೆ ಕೊಂಡ, ಕಾಣಿಕೆ ಪಡೆದ ಎಲ್ಲ ಪುಸ್ತಕಗಳನ್ನು ಅಚ್ಚುಕಟ್ಟಾಗಿ, ವಿವರ ಪೂರ್ಣವಾಗಿ ನಮೂದಿಸಲು ಸಾಮಾನ್ಯ ಪಟ್ಟಯೊಂದು ಬೇಕು. ಅದರಂತೆ ಸಭಾಸದರ ಹೆಸರು, ಅವರು ಕೊಡಬೇಕಾದ ಚಂದಾಹಣ ಮೊದಲಾದ ವಿಷಯಗಳನ್ನು ಸೂಚಿಸುವ ಒಂದು ಪಟ್ಟಿ, ಸಂಸ್ಥೆಯ ಆದಾಯ ವೆಚ್ಚಗಳನ್ನು ಬರೆದಿಡಲು ಬೇರೊಂದು ವಹಿ— ಹೀಗೆ ಮತ್ತೆರಡು ಪಟ್ಟಿಗಳು ಬೇಕು. ಸಂಸ್ಥೆ ಚಿಕ್ಕದಾಗಿದ್ದರೂ, ಅದು ಬೆಳೆದು ಪ್ರವರ್ಧಮಾನವಾಗಲಿದೆಯೆಂಬ ದೂರದೃಷ್ಟಿಯಿಂದ ಈ ಅಲ್ಪ ವಿಷಯಗಳನ್ನೂ ಅಚ್ಚುಕಟ್ಟಾಗಿ ನೋಡಿಕೊಳ್ಳಬೇಕು. ಪ್ರಾರಂಭದಲ್ಲಿ ಕೆಲಸವು ವ್ಯವಸ್ಥಿತವಾಗಿದ್ದರೆ ಮುಂದಿನ ಆಡಳಿತವೆಲ್ಲವೂ ಸೂತ್ರಬದ್ಧವಾಗಿ ಸಂಸ್ಥೆಯು ಪ್ರಯೋಜನ ಬೆಳೆಯುತ್ತದೆ.

ವಾಚನಾಲಯದ ಮೇಲ್ವಿಚಾರಣೆಗೆ ಒಂದು ಕಾರ್ಯಕಾರಿ ಸಮಿತಿ ಇರಬೇಕು. ಈ ಕಾರ್ಯಕಾರಿ ಸಮಿತಿಗೆ ಅಧ್ಯಕ್ಷ, ಕೋಶಾಧ್ಯಕ್ಷ, ಕಾರ್ಯದರ್ಶಿಗಳೆಂಬ ಮೂವರಂತೂ ಅವಶ್ಯಕ. ಕೆಲವು ಕಡೆಗೆ ಉಪಾಧ್ಯಕ್ಷನ ಬೇರೊಂದು ಗೌರವ ಸ್ಥಾನವನ್ನು ನಿರ್ಮಿಸುವದೂ ಉಂಟು. ಒಮ್ಮೊಮ್ಮೆ ಕಾರ್ಯದರ್ಶಿಯ ಸ್ಥಳಗಳನ್ನು ಹೆಚ್ಚಿಸಬೇಕಾಗಿಯೂ ಬರಬಹುದು. ತಮ್ಮ ಸೌಕರ್ಯದಂತೆ ಇವುಗಳನ್ನು ಮಾರ್ಪಡಿಸಿಕೊಳ್ಳಬಹುದು. ಜನರಿಂದ ವಾಚನಾಲಯಕ್ಕೆ ಬರತಕ್ಕ ಕಾಣಿಕೆ—ವರ್ಗಣಿ ವಸೂಲು ಮಾಡುವದು, ಸಂಸ್ಥೆಗೆ ತರಿಸಬೇಕಾದ ಪತ್ರಿಕೆ-ಪುಸ್ತಕಗಳ ವಿಚಾರ, ಸಂಸ್ಥೆಯ ಸಭೆಗಳ ವರದಿ ವೃತ್ತಾಂತ—ಲೆಕ್ಕಪತ್ರ ಮೊದಲಾದವುಗಳನ್ನು ನೋಡಿಕೊಳ್ಳುವ ಕೆಲಸ ಕಾರ್ಯದರ್ಶಿಯದು. ಸಂಸ್ಥೆಯ ಜೀವ ಈತ. ಸಭಾಸದರಿಗೆ ಪುಸ್ತಕಗಳನ್ನು ಕೊಡುವದು, ಓದುಗರ ಅವಶ್ಯಕತೆಗಳನ್ನು ಪೂರೈಸುವದು ಬೇರೊಬ್ಬನ ಕೆಲಸ. ಆತನೇ ಪುಸ್ತಕ ಭಾಂಡಾರಿ. ಈತನ ಜವಾಬ್ದಾರಿಯೂ ಹೆಚ್ಚಿನದು. ದಾಣಾಕ್ಷ, ಸತ್ಯಪ್ರಿಯ, ನಿಷ್ಪಕ್ಷಪಾತಿಯಾಗಿದ್ದ ಭಾಂಡಾರಿಯು ಇದ್ದರೆ ವಾಚನಾಲಯವು ಬಹುಕಾಲ ಬಾಳಬಲ್ಲದು. ಹಳ್ಳಿಯಲ್ಲಿ ಶಾಲೆಯ ಮಾಸ್ತರರು ಪುಸ್ತಕ ಭಾಂಡಾರಿಗಳಾಗಿರುವದು ಅತ್ಯಂತ ವ್ಯವಹಾರ್ಯ. ಈ ಕೆಲಸದಿಂದ ಅವನಿಗೆ ಹೆಚ್ಚು ಸಂಬಳ ದೊರೆತೀತೆಂದು ನಿರೀಕ್ಷಿಸುವಂತಿಲ್ಲ. (?) ಇದು ಸಂಸ್ಥೆಯ ಆರ್ಥಿಕ ಬಲವನ್ನು ಅವಲಂಬಿಸಿದ ಮಾತಾಗಿದ್ದರೂ, ತೀರ ಕಡಮೆಯೆಂದರೆ ಗ್ರಂಥ ಭಾಂಡಾರಿಗೆ ವರುಷಕ್ಕೆ ಮೂವತ್ತು ರೂಪಾಯಿ ಗೌರವಧನವೆಂದು ಕೊಡಬೇಕು. ಪ್ರತಿಫಲದ ಆಶೆಯಿಲ್ಲದೆ ಕೇವಲ ಜನಸೇವೆಯ ಆಕಾಂಕ್ಷೆಯಿಂದಲೇ ಮುಂದೆ ಬಂದು ಕೆಲಸ ಮಾಡುವದೂ ಒಳ್ಳೆಯದೇ. ಆದರೆ ಇದು ವೈಯಕ್ತಿಕ ವಿಷಯ. ಬಡೋದೆಯಲ್ಲಿ ಪುಸ್ತಕ ಭಾಂಡಾರಿಗಳಾಗಿ ಕೆಲಸಮಾಡಿದ ಹಳ್ಳಿಯ ಉಪಾಧ್ಯಾಯರಿಗೆ ವಿಶಿಷ್ಟ ಸವಲತ್ತುಗಳನ್ನು ಸರಕಾರದವರೇ ಕೊಡುವದುಂಟು. ಉತ್ಸಾಹದಿಂದ ಕೆಲಸ ಮಾಡುವ ಹಳ್ಳಿಯ ಉಪಾಧ್ಯಾಯರಿಗೆ ಇಂತಹ ಕೆಲವು ಸೌಕರ್ಯಗಳನ್ನು ಮುಂಬಯಿ ಸರಕಾರದವರೂ ಒದಗಿಸಿ ಕೊಡಬಹುದಾಗಿದೆ.

ಹಳ್ಳಿಯ ವಾಚನಾಲಯವು ಪ್ರತಿ ದಿನ ಸಂಜೆಗೆ ೬ ರಿಂದ ಎಂಟುಗಂಟೆಯ ವರೆಗೆ ತೆರೆಯಲ್ಪಡಬೇಕು. ವಾರದಲ್ಲಿ ಒಂದು ದಿನ ಬಿಡುವು. ತಮ್ಮ ಇಚ್ಛೆಯ ಮೇರೆಗೆ ಈ ದಿನವನ್ನು ಗೊತ್ತುಮಾಡಿಕೊಳ್ಳಬಹುದು. ವಾಚನಾಲಯದಲ್ಲಿ ಬೀಡಿ ತಂಬಾಕು ಮೊದಲಾದ ಶೀತಿ ಬಾಹ್ಯ ವಸ್ತುಗಳ ಸೇವನೆ ನಡೆಯಕೂಡದು. ಹರಟೆ ಹೊಡೆಯುವದು, ನಿರುದ್ಯೋಗಿಗಳು ಬಂದು ವ್ಯರ್ಥ ವೇಳೆಗಳೆಯುವದೇ ಮೊದಲಾದ ಅಶಿಷ್ಟ ವ್ಯವಹಾರಗಳು ನಡೆಯದಂತೆ ದಕ್ಷತೆ ವಹಿಸಬೇಕು. ವಾಚನಾಲಯವೆಂದರೆ ಓದುವದಕ್ಕಾಗಿ; ಶಿಕ್ಷಾರ್ಜನೆಗೆ ಮಾತ್ರ ಅಲ್ಲಿ ಅಸ್ಪದ.

ಇಂಥ ಒಂದು ಸುವ್ಯವಸ್ಥಿತ ತಳಹದಿಯ ಮೇಲೆ ಕಟ್ಟಲ್ಪಟ್ಟ ಸಂಸ್ಥೆಗಳು ಬಹುಕಾಲ ಬಾಳಿ ಜನತೆಯ ಶಿಕ್ಷಣವನ್ನೂ ಸಂಸ್ಕೃತಿಯನ್ನೂ ಬೆಳಗಿಸಬಲ್ಲವು.

ಕೊನೆಯಲ್ಲಿ ಪರಿಷತ್ತಿನ ಗ್ರಂಥ ಪ್ರಕಟನೆಯ ಕಾರ್ಯವು ಅಪೇಕ್ಷೆಯ ಷ್ಟಾಗಿ ಬೆಳಸಿಲ್ಲವೆಂದೂ ಆ ಕಾರ್ಯದಲ್ಲಿ ಅದು ಹೆಚ್ಚು ಉತ್ಸಾಹ ತಾಳಬೇಕೆಂದೂ ಹೇಳಿ ಶ್ರೀ ಮಿರ್ಜಿಯವರು ತಮ್ಮ ಭಾಷಣವನ್ನು ಉಪಸಂಹರಿಸಿದರು.

ಕನ್ನಡ ಸಂಘಗಳ ಕರ್ತವ್ಯ

ಬೆಂಗಳೂರಲ್ಲಿ ಶ್ರೀ ಗುರುಸಿದ್ದಪ್ಪ ಮಿರ್ಜಿಯವರ ಉಜ್ವಲ ಭಾಷಣ

"ಚಿನ್ನ ಬಣ್ಣದಂತೆ ಸಾಹಿತ್ಯಕ್ಕೆ ಜೀವನದ ನಿಕಟ ಸಂಬಂಧ ವಿರುವದರಿಂದ ಕನ್ನಡ ಸಂಘಗಳು ಪ್ರಧಾನವಾಗಿ ಸಾಹಿತ್ಯ ಪ್ರಚಾರ ಯೋಜಕ ವ್ಯಕ್ತಿ ಆಗಿರುತ್ತದೆ. ಹಾಗಿದ್ದರೂ ಅದಕ್ಕೆ ಪೋಷಕವಾಗುವಂತೆ ಸಾಮಾಜಿಕ ವ್ಯಕ್ತಿಕ ಮೊದಲಾದ ವಿಚಾರಗಳ ಕಡೆಗೂ ಹೆಚ್ಚು ಲಕ್ಷ್ಯ ಹರಿಯಿಸಲು ಕನ್ನಡ ಸಂಘಗಳು ಅವಶ್ಯವಾಗಿ ಗಮನ ಕೊಡಬೇಕಾಗಿದೆ" ಎಂಬುದಾಗಿ ಮುಂಬೈಯ ಪ್ರಸಿದ್ಧ ವಕೀಲರಾದ ಶ್ರೀ ಗುರುಸಿದ್ಧಪ್ಪ ಮಹಾಲಿಂಗಪ್ಪ ಮಿರ್ಜಿಯವರು ಜುಲೈ ೧೯ರಲ್ಲಿ ಆರಂಭವಾದ ಬೆಂಗಳೂರು ನಗರದ ಪ್ರದೇಶ ಸಮಿತಿಯ ವಿಶೇಷ ಸಾಹಿತ್ಯೋತ್ಸವದ ಅಂಗವಾಗಿ ನೆರೆದ ಕನ್ನಡ ಸಂಘಗಳ ಗೋಷ್ಠಿಯ ಅಧ್ಯಕ್ಷ ಪೀಠದಿಂದ ಭಾಷಣಮಾಡುತ್ತ ಹೇಳಿದರು.

ತಮ್ಮನ್ನು ಅಧ್ಯಕ್ಷರನ್ನಾಗಿ ಆರಿಸಿದ್ದಕ್ಕೆ ಕೃತಜ್ಞತೆ ಸಲ್ಲಿಸಿ ಅನಂತರ ಶ್ರೀ ಮಿರ್ಜಿಯವರು ಈ ಕೆಳಗೆ ಕೊಡಲಾದ ಅಭಿಪ್ರಾಯಗಳನ್ನು ತಮ್ಮ ಭಾಷಣದಲ್ಲಿ ಹೇಳಿದರು —

ಕನ್ನಡ ಸಂಘಗಳ ಕರ್ತವ್ಯ

ಕನ್ನಡ ಸಂಘಗಳು ಮುಖ್ಯವಾಗಿ ಉಪನ್ಯಾಸದ ಮೂಲಕ ಪ್ರಾಚೀನ ಸಾಹಿತ್ಯದ ಪರಿಚಯ ಮಾಡಿಕೊಡಬೇಕು; ಭಾಷಣಗಳ ಮೂಲಕ ಆಧುನಿಕ ಸಾಹಿತ್ಯದ ಧಾಟಿಯನ್ನು ಪ್ರೋತ್ಸಾಹಿಸಬೇಕು; ಪ್ರಚಾರ ಸಾಹಿತ್ಯ ಪುಸ್ತಕ ಪ್ರಕಟನೆ ಮುಂತಾದುವನ್ನು ನಡೆಸಬೇಕು; ಪುಸ್ತಕ ಭಾಂಡಾರಗಳನ್ನು ತೆರೆಯಬೇಕು; ಗಮಕ ಕಲೆಯನ್ನು ಪ್ರಸರಿಸಬೇಕು.

ಪರಿಷತ್ತಿನೊಡನೆ ಕನ್ನಡ ಸಂಘಗಳ ಸಂಬಂಧ

ಪರಿಷತ್ತು ಕನ್ನಡ ಸಂಘಗಳ ಮೂಲಕ ತರುಣರಲ್ಲಿ ಕನ್ನಡದ ಅರಿವನ್ನೂ ಅಭಿಮಾನವನ್ನೂ ಹುಟ್ಟಿಸಬೇಕು. ಸಾಮಾನ್ಯರಲ್ಲಿ ಅದು ಜಾಗ್ರತಿ ಹುಟ್ಟಿಸಲು ಪ್ರಯತ್ನಿಸಬೇಕು. ಪರಿಷತ್ತಿನಿಂದ ಧೈರ್ಯದ ನುಡಿ ಬಂದರೆ ಕನ್ನಡ ಸಂಘಗಳು ಚೇತನ ಹೊಂದುವದರಲ್ಲಿ ಸಂದೇಹವಿಲ್ಲ. ಪರಿಷತ್ತು ಹೀಗೆ ಬೆಂಬಲವಿತ್ತರೆ ಅದರ ಸ್ಥಾನಮಾನಗಳು ಉನ್ನತವಾಗುವವೆಂಬುದರಲ್ಲಿ ಸಂಪೂರ್ಣ ಭರವಸೆ ಇಡಬಹುದು.

ಏಕೀಕರಣ ಮತ್ತು ಗಡಿನಾಡು

ಸಾಹಿತ್ಯ ಪರಿಷತ್ತು ಈವರೆಗೆ ತನ್ನ ವಿವಿಧ ಚಟುವಟಿಕೆಗಳಿಂದ ಕನ್ನಡ ನಾಡಿನ ಮೂಲೆ ಮೂಲೆಗಳಲ್ಲಿ ತನ್ನ ಸಂಸ್ಕೃತಿಯನ್ನು ಬೀರಿ ಕನ್ನಡಿಗರನ್ನು ಐಕ್ಯಗೊಳಿಸಿ ಏಕೀಕರಣೋನ್ಮುಖರನ್ನಾಗಿ ಮಾಡಿದೆ. ಸ್ವಾತಂತ್ರ್ಯ ದೊರೆವ ಈ ಸಂಧಿಕಾಲದಲ್ಲಿ ಮೇಧಾವಿಗಳೂ ಚತುರರೂ ಆದ ಮೈಸೂರಿನವರು ಕೇವಲ ಮೈಸೂರಿನವರಾಗಿ ಉಳಿಯದೆ ಉಳಿದ ಕನ್ನಡಿಗರೊಡನೆ ಬೆರೆತು ವಿಶಾಲ ಭಾವನೆಯಿಂದ ಕೂಡಿಕೊಂಡು ಹೋಗಬೇಕು. ಇನ್ನು ಗಡಿನಾಡಿನ ಸಂಬಂಧದಲ್ಲಿ ಮಾಡಬೇಕಾದ ಕಾರ್ಯಗಳು ಇಷ್ಟಿವೆ—

೧. ಗಡಿನಾಡಿಗರಿಗೆ ತಾವು ಕನ್ನಡಿಗರೆಂಬ ಆತ್ಮಜ್ಞಾನವನ್ನುಂಟುಮಾಡಲು ಸಮರ್ಥರಾದ ಭಾಷಣಕಾರರು, ಕೀರ್ತನಕಾರರು, ಪ್ರಚಾರಕರು ಮುಂತಾದವರನ್ನು ಕಳಿಸುವ ವ್ಯವಸ್ಥೆಯನ್ನು ಪರಿಷತ್ತು ಹಾಗೂ ಕನ್ನಡ ಸಂಘಗಳು ಕೂಡಲೆ ಮಾಡಬೇಕು.

೨. ಗಡಿನಾಡಿನ ಪ್ರದೇಶಗಳಲ್ಲಿ ಉಕ್ತ ಉದ್ದೇಶ ಸಾಧನೆಗಾಗಿ ಸಭೆ, ಸಮ್ಮೇಲನ, ಉತ್ಸವ, ಜಾತ್ರೆಗಳನ್ನು ನಡೆಸುವ ಏರ್ಪಾಡು ಮಾಡಬೇಕು.

೩. ಕನ್ನಡ ಸಂಸ್ಕೃತಿ, ಏಕೀಕರಣ, ಇತಿಹಾಸ ಇವುಗಳ ಅರಿವನ್ನುಂಟುಮಾಡಲು ಐತಿಹಾಸಿಕ ಚಿತ್ರಪಟ ಪ್ರದರ್ಶನ ನಡೆಸಬೇಕು. ಇದಕ್ಕಾಗಿ ವಿಶೇಷ ಚಿತ್ರಗಳನ್ನು (Slides) ಪರಿಷತ್ತು ಒದಗಿಸಿ ಕೊಡಬೇಕು.

೪. ಮೇಲಿನ ಕಾರ್ಯಗಳು ನಡೆದುದನ್ನು ಕನ್ನಡ ಲೋಕಕ್ಕರುಹಲು ಕನ್ನಡ ವೃತ್ತಪತ್ರಿಕೆಗಳು ನೆರವಾಗಬೇಕು.

ಕನ್ನಡ ವಿಶ್ವವಿದ್ಯಾಲಯ

ಮೈಸೂರು ವಿಶ್ವವಿದ್ಯಾಲಯದ ಇದುವರೆಗಿನ ಅನುಭವ ಶಕ್ತಿಯೂ ನೂತನವಾಗಿ ಸ್ಥಾಪಿತವಾಗಲಿರುವ ಕರ್ನಾಟಕ ವಿಶ್ವವಿದ್ಯಾಲಯದ ಆದರ್ಶ ಉತ್ಸಾಹ ಶಕ್ತಿಯೂ ಬೆರೆತು ಕನ್ನಡಿಗತನವನ್ನು ಪೋಷಿಸಬೇಕು. ಇದಕ್ಕಾಗಿ ಪರಿಷತ್ತು ಮತ್ತು ಕನ್ನಡ ಸಂಘಗಳು ಹೆಚ್ಚು ಪ್ರಯತ್ನ ನಡೆಸತಕ್ಕದ್ದು ಅವಶ್ಯಕ. ಉಭಯ ವಿಶ್ವವಿದ್ಯಾಲಯಗಳಲ್ಲಿ ಕನ್ನಡದ ಸ್ಥಾನವು ಪ್ರಧಾನವಾಗಿರುವಂತೆಯೂ ಕನ್ನಡವೇ ಬೋಧಕ ಭಾಷೆಯಾಗುವಂತೆಯೂ ಪ್ರಯತ್ನಿಸಬೇಕು.

ಸಾದರ ಸ್ವೀಕಾರ

೧. **Cultural History of Karnataka**
By. A. P. Karmarkar
M. A, LL. B., Ph. D.
ಪ್ರಕಾಶಕರು:— ಕರ್ನಾಟಕ ವಿದ್ಯಾವರ್ಧಕ ಸಂಘ ಧಾರವಾಡ.
ಪುಟಗಳು ೧೪೦ ಬೆಲೆ ೫—೦—೦

೨) ಸಾಮ್ಯವಾದವೇ ಏಕೆ
(ಎರಡನೇ ಮುದ್ರಣ)
ಮೂಲ ಲೇಖಕರು— ಜಯಪ್ರಕಾಶ ನಾರಾಯಣ. ಕನ್ನಡಿಸಿದವರು— ಶ್ರೀ ಮಳೆಯ ಗೋವರ್ಧನರಾಯರು. ಪ್ರಕಾಶಕರು— ಸಾಹಿತ್ಯಭಾಂಡಾರ ಹುಬ್ಬಳ್ಳಿ.
ಪುಟಗಳು ೩೦ ಬೆಲೆ ೦—೪—೦

೩) ಮಾಂಗಲ್ಯ
ಲೇಖಕರು— ಶ್ರೀ ಸೈಲಂ. ಪ್ರಕಾಶಕರು— ಓ. ಎಸ್. ಲಿಂಗಣ್ಣಯ್ಯ ಬಿ. ಎ. (ಆನರ್ಸ್) ನಂ. ೨೦೬ ಶ್ರೀಗೌರಿ ವಿಹಾರ ಶಂಕರಪುರಂ ಬಸವನಗುಡಿ ಬೆಂಗಳೂರು ಸಿಟಿ.
ಪುಟಗಳು ೩೦ ಬೆಲೆ ೦—೪—೦

೪) ಕನ್ನಡ ಕುಮಾರ ಸಂಭವ
(ಪ್ರಥಮ ಭಾಗ)
ಲೇಖಕರು— ಅಮ್ಮೆಂಬಳ ಶಂಕರ ನಾರಾಯಣ ವಿದ್ವಾನ್ ಪ್ರಕಾಶಕರು— ಸಾಹಿತ್ಯಾಂಜಲಿ ಗ್ರಂಥಮಾಲೆ. ಮಂಗಳಾದೇವಿ ಸ್ಥಾನ ಬೋಗಾರ ಮಂಗಳೂರು.
ಪುಟಗಳು ೭೦ ಬೆಲೆ ೧—೪—೦

೫) ದಿಲ್ಲಿಯಿಂದ-ಹಳ್ಳಿಗೆ
ಲೇಖಕರು— ಕೈವಾರ ರಾಜಾರಾವ. ಪ್ರಕಾಶಕರು— ಶರತ ಎಜನ್ಸೀಸ ಬಸವನಗುಡಿ ಬೆಂಗಳೂರು ನಗರ.
ಪುಟಗಳು ೧೪೦ ಬೆಲೆ ೧—೮—೦

೬) ಮಹಿಳೆಯರ ಉಡುಪು
(ಭಾಗ ೧ ಮತ್ತು ಭಾಗ ೨)
ಲೇಖಕರು— ಎಸ್. ಶ್ರೀನಿವಾಸಾಚಾರ್ಯ ಎಫ್. ಸಿ. ಡಿ. (ಲಂಡನ್) ಪ್ರಕಾಶಕರು— ಆರ್. ಎಸ್. ನಾರಾಯಣ. 'ಕೇಸರಿ ಪ್ರೆಸ್' ಚಾಮರಾಜ ಪೇಟೆ ಬೆಂಗಳೂರು ಸಿಟಿ.
ಪುಟಗಳು ಭಾಗ ೧-೨೦ ಬೆಲೆ ಭಾಗ ೧ ೦-೧೦-೦
" ೨-೪೦ " " ೨ ೧-೦-೦

ಸಂಪಾದಕೀಯ ಟೀಕೆ ಟಿಪ್ಪಣಿಗಳು

ಗೋದಿಯನ್ನು ತರಿಸಿಕೊಡಿರಿ

ಸ್ವಾತಂತ್ರ್ಯೋತ್ಸವದ ಹಬ್ಬಕ್ಕೆಂದು ಸೀದಾ ಅಂಗಡಿಗಳಲ್ಲೆಲ್ಲ ಗೋದಿಯನ್ನು ಕೊಡಿರೆಂದು ಪತ್ರಿಕೆಯಲ್ಲಿ ಓಡಾಡಿಕೊಂಡ ಬಿನ್ನಹಕ್ಕೆ ಜಿಲ್ಹಾ ಕಲೆಕ್ಟರರು 'ಎಲ್ಲ ಕಾರ್ಡಧಾರಕರಿಗೆ ಕೊಡುವಷ್ಟು ಗೋದಿಯ ಸಂಗ್ರಹವಿರದ್ದರಿಂದ ಗೋದಿ ಸಂಗ್ರಹ ದೊರೆತೊಡನೆ ಅದನ್ನು ಹಂಚಲಾಗುವದೆಂದು' ಪ್ರಕಟಿಸಿದ್ದಾರೆ. ವಿಜಾಪುರ, ಬೆಳಗಾವಿ ಉತ್ತರ ಕನ್ನಡ ಜಿಲ್ಲೆಗಳಲ್ಲೆಲ್ಲ ಸೀದಾ ಅಂಗಡಿಗಳಲ್ಲಿ ಗೋದಿಯನ್ನು ಕೊಡಲಾಗುತಿದೆಂದು ಕೇಳುತ್ತೇವೆ. ಧಾರವಾಡ ಜಿಲ್ಹೆಯಲ್ಲಿ ಮಾತ್ರ ಕಳೆದ ಮೂರು ತಿಂಗಳುಗಳಿಂದ ಗೋದಿಯನ್ನು ಕೊಟ್ಟಿರುವದಿಲ್ಲ. ಧಾರವಾಡ ಜಿಲ್ಹೆಯವರು ಅದಾವ ಪಾಪ ಮಾಡಿರುವರೊ ತಿಳಿಯದು. ಇಡೀ ಪ್ರಾಂತವನ್ನು ಘಟಕವೆಂದು ತಿಳಿದುಕೊಂಡು ಆಯಾ ಭಾಗದ ಬೇಡಿಕೆಗಳಂತೆ ಸಮಾನವಾಗಿ ಸೀದಾ ಧಾನ್ಯ ಪೂರೈಸಲಾಗುತಿದೆಂದು ಹೇಳಲಾಗುತಿದ್ದರೂ ಈ ನಿಯಮು ಕೃತಿಯಲ್ಲಿ ಮಾತ್ರ ಇಳಿದಿಲ್ಲೆಂದು ವಿಷಾದದಿಂದ ಹೇಳಬೇಕಾಗುತಿದೆ. ಅದೇನೇ ಇದ್ದರೂ ಸ್ವಾತಂತ್ರ್ಯೋತ್ಸವದ ಹಬ್ಬಕ್ಕಾಗಿ ಎಲ್ಲ ಕಾರ್ಡಧಾರಕರಿಗೆ ಬೇಕಾಗುವಷ್ಟು ಗೋದಿಯನ್ನು ಸಮೀಪದ ಜಿಲ್ಹೆಗಳಿಂದ ಇಲ್ಲವೆ ಮುಂಬಯಿಯಿಂದ ಆದಷ್ಟು ಬೇಗ ತರಿಸಿ ಕೊಡುವದು ಕಲೆಕ್ಟರರ ಕರ್ತವ್ಯವೆಂದು ನಾವು ಆಗ್ರಹದಿಂದ ಹೇಳಬಯಸುತ್ತೇವೆ. ಮುಂಬಯಿಗೆ ಬೇಕಾದಷ್ಟು ಗೋದಿ ಸಂಗ್ರಹ ಬಂದಿದೆಂದು ಅಲ್ಲಿನ ಗೋದಿ ಸೀದಾವನ್ನು ಹೆಚ್ಚಿಸಲಾಗುತ್ತದೆಂದು ಸುದ್ದಿ ಬಂದಿದೆ. ಜಿಲ್ಹಾ ಕಲೆಕ್ಟರರು ಮುಂಬಯಿ ಸರಕಾರಕ್ಕೆ ಸ್ವಾತಂತ್ರ್ಯೋತ್ಸವಕ್ಕಾಗಿ ಗೋದಿ ಬೇಕೆಂದು ಧಾರವಾಡ ಜಿಲ್ಹೆಯ ಜನರು ಒತ್ತಾಯ ಪಡಿಸುತಿರುವರೆಂದು ಬರೆದುಕೊಂಡರೆ, ಇಲ್ಲವೆ ಯಾರನ್ನಾದರೂ ಇದಕ್ಕಾಗಿ ಮುಂಬಯಿ ವರೆಗೆ ಕಳಿಸಿದರೆ ಈ ಜಿಲ್ಹೆಯ ಕಾರ್ಡುಧಾರಕರಿಗೆ ಸಾಕಾಗುವಷ್ಟು ಗೋದಿ ಸಿಕ್ಕುತ್ತದೆಂದು ನಮಗೆ ವಿಶ್ವಾಸವಿದೆ. ಇಷ್ಟೊಂದು ಉಬ್ಬಿನಿಂದ ಸ್ವಾತಂತ್ರ್ಯೋತ್ಸವ ಮಾಡಬಯಸುವ ನಾಗರಿಕರಿಗೆ ಗೋದಿ ಇಲ್ಲೆಂದು ಲೋಕಪ್ರಿಯ ಸರಕಾರ ಹೇಳಲಾರದೆಂದು ನಮಗೆ ಬಲವಾದ ನಂಬುಗೆ ಇದೆ. ಅದುದರಿಂದ ಜಿಲ್ಹಾ ಕಲೆಕ್ಟರರು ಸರ್ವರೀತಿಯಿಂದ ಪ್ರಯತ್ನ ಮಾಡಿ ಸ್ವಾತಂತ್ರ್ಯೋತ್ಸವದಹೊತ್ತಿಗೆ ಜಿಲ್ಹೆಯ ಎಲ್ಲ ಸೀದಾ ಅಂಗಡಿಗಳಲ್ಲಿ ಗೋದಿಯನ್ನು ಪೂರೈಸುವ ಏರ್ಪಾಡು ಮಾಡಬೇಕೆಂದು ಕೇಳಿಕೊಳ್ಳುತ್ತೇವೆ.

ಸ್ವಾಗತಾರ್ಹ ನಿರ್ಧಾರ

ಸಂಸ್ಥಾನಗಳ ಸಮಸ್ಯೆಯೊಂದು ಎಲ್ಲರ ತಲೆ ತಿನ್ನುತಲಿದ್ದಿತು. ಬ್ರಿಟಿಶ ಸರಕಾರದವರು ಈ ಸಂಬಂಧದಲ್ಲಿ ದ್ರಾವಿಡೀ ಪ್ರಾಣಾಯಾಮ ಮಾರ್ಗವನ್ನು ಕೈಕೊಂಡದ್ದರಿಂದ ಪರಿಸ್ಥಿತಿ ಮತ್ತಷ್ಟು ಹದಗೆಟ್ಟಿತ್ತು. ಅದಕ್ಕಾಗಿಯೆ ಗವರ್ನರ ಜನರಲ್‌ರಾದ ಲಾರ್ಡ ಲುಯಿ ಮೌಂಟಬ್ಯಾಟನ್‌ರು ನರೇಂದ್ರರ ಪರಿಷತ್ತನ್ನು ಸೇರಿಸಿ ಸಾಮಂತ ಸರಕಾರಗಳಲ್ಲಿ ಸೇರದೆ ಗತ್ಯಂತರವಿಲ್ಲೆಂದು ಸ್ಪಷ್ಟವಾಗಿ ಹೇಳಬೇಕಾಯಿತು. ಮಹಾತ್ಮಾ ಗಾಂಧಿಯವರೂ ತಮ್ಮ ವರ್ಚಸ್ಸನ್ನು ಉಪಯೋಗಿಸಿ ಸದ್ಯದ ಪ್ರಸಂಗದಲ್ಲಿ ನರೇಂದ್ರರು ಸಾಮಂತ ಸರಕಾರಗಳಲ್ಲಿ ಸೇರುವದೆ ಕರ್ತವ್ಯವೆಂದು ಉಪದೇಶಿಸಬೇಕಾಯಿತು. ಸಂಸ್ಥಾನ ಶಾಖೆಯ ಮಂತ್ರಿಗಳಾದ ಸರದಾರ ವಲ್ಲಭಭಾಯರು ಸಂಸ್ಥಾನಿಕರು ಸಾಮಂತ ಸರಕಾರಗಳಲ್ಲಿ ಸೇರಿ ಪರರಾಷ್ಟ್ರ ರಾಜಕಾರಣ, ಸಂರಕ್ಷಣ ಮತ್ತು ಸಂಪರ್ಕ ಈ ಮೂರು ವಿಷಯಗಳನ್ನು ಹೊರತುಪಡಿಸಿ ಉಳಿದೆಲ್ಲ ವಿಷಯಗಳಲ್ಲಿ ಸ್ವತಂತ್ರರಿರಬಹುದೆಂದು ಸ್ಪಷ್ಟೀಕರಿಸಬೇಕಾಯಿತು. ಇವೆಲ್ಲ ಪ್ರಯತ್ನಗಳ ಫಲವಾಗಿ ಇಂದು ಹೈದ್ರಾಬಾದ ತಿರುವಾಂಕೂರು ಮೊದಲಾದ ಸಂಸ್ಥಾನಗಳೂ ಸಾಮಂತ ಸರಕಾರಗಳಲ್ಲಿ ಸೇರಲು ನಿರ್ಧರಿಸಿದವೆಂದು ಅಧಿಕೃತವಾಗಿ ತಿಳಿಯುತ್ತದೆ. ಹಿಂದೀ ಸಾಮಂತ ಸರಕಾರದ ಗೂಡ ಈ ಬಗ್ಗೆ ಪ್ರತ್ಯೇಕ ಒಡಂಬಡಿಕೆಯನ್ನು ಮಾಡಿಕೊಳ್ಳಲಾಗುತಿದೆಂದೂ ಕೆಲ ಕರಾರುಗಳನ್ನು ಹಾಕಿಯೆ ಹಿಂದೀ ಸಾಮಂತ ಸರಕಾರದಲ್ಲಿ ಸೇರಲು ಈ ಸಂಸ್ಥಾನಗಳು ಒಪ್ಪಿವೆಯೆಂದೂ ತಿಳಿಯುತ್ತದೆ. ಏನೇ ಆದರೂ ಈ ಮೊದಲು ವಹಿಸಿದ ಸಿಡಿದು ನಿಲ್ಲುವ ಧೋರಣವನ್ನು ಬಿಟ್ಟುಗೊಟ್ಟು ಈ ಸಂಸ್ಥಾನಗಳು ಹಿಂದೀ ಒಕ್ಕೂಟದಲ್ಲಿ ಸೇರಲು ನಿರ್ಧರಿಸಿದ್ದು ಸಂತೋಷದ ಸಂಗತಿ. ಸಂಸ್ಥಾನಗಳ ಸಮಸ್ಯೆಯಿಂತು ಬಗೆಹರಿದದ್ದರಿಂದ ಹಿಂದುಸ್ತಾನ ಮತ್ತು ಪಾಕಿಸ್ತಾನ ಈ ಎರಡೂ ಸಾಮಂತ ಸರಕಾರಗಳು ಅಂತರಿಕ ಶಾಂತಿಯನ್ನು ಪ್ರಸ್ಥಾಪಿಸಿಕೊಂಡು ಸರ್ವವಿಧ ಅಭಿವೃದ್ಧಿಯನ್ನು ಪಡೆಯಬಹುದೆಂದು ಆಶಿಸಲಾಗಿದೆ. ಸಾಮಂತ ಸರಕಾರಗಳನ್ನು ಸೇರುವ ಸಮಂಜಸ ನಿರ್ಧಾರವನ್ನು ನರೇಂದ್ರರು ಕೈಗೊಂಡಂತೆ ಸಂಸ್ಥಾನಗಳಲ್ಲೆಲ್ಲ ಬೇಗನೆ ಹೊಣೆಗಾರ ರಾಜ್ಯಪದ್ಧತಿಯನ್ನು ಸ್ಥಾಪಿಸಿ ಪ್ರಜೆಗಳಿಗೆ ಆಡಳಿತದಲ್ಲಿ ಮಹತ್ವದ ಸ್ಥಾನ ಕೊಟ್ಟರೆ ಈ ಸಮಸ್ಯೆ ಪೂರ್ಣವಾಗಿ ಪರಿಹಾರವಾದಂತಾಗುವುದು. ಸಂಸ್ಥಾನಗಳಲ್ಲಿ ಈ ವರೆಗೆ ಸ್ವಚ್ಛಂದ ಆಡಳಿತ ನಡೆಯುತಿದ್ದಿತೆಂದೇ ಸಂಸ್ಥಾನಗಳನ್ನು ನಿರ್ಮೂಲನ ಮಾಡಬೇಕೆಂಬ ಚಳವಳಿ ದೇಶದಲ್ಲಿ ಪ್ರಬಲವಾಗಿದೆ. ಮಹಾತ್ಮರು ಹೇಳುತಿರುವಂತೆ ಸಂಸ್ಥಾನಿಕರು ಪ್ರಜೆಗಳ ವಿಶ್ವಸ್ತರೆಂಬ ಧೋರಣೆಯನ್ನಿಟ್ಟುಕೊಂಡು ನಡೆದದ್ದಾದರೆ ಎಲ್ಲ ಚಳವಳಿಗಳು ಮಾಯವಾಗಿ ಸಂಸ್ಥಾನಗಳಲ್ಲಿ ಸುಖಶಾಂತಿ ಸಮೃದ್ಧಿಯುಂಟಾಗಿ ಸಂಸ್ಥಾನಿಕರಿಗೂ ಅಕ್ಕ ಮನ್ನಣೆ ದೊರೆವುದು. ಸಂಸ್ಥಾನಿಕರು ಇವೆಲ್ಲವನ್ನು ವಿಚಾರಿಸಿ ಸೂಕ್ತ ಧೋರಣವನ್ನು ವಹಿಸುವರೇ. ?

ಶಿಸ್ತಿನ ಸ್ವಯಂಸೇವಕರು

ದಿಲ್ಲಿಯಲ್ಲಿ ತೆರೆಯಲ್ಪಟ್ಟಿದ್ದ ಕಾಂಗ್ರೆಸ ಸೇವಾದಲದ ಕಾರ್ಯಕರ್ತರ ಶಿಕ್ಷಣ ಶಿಬಿರದ ಮುಕ್ತಾಯದ ಕಾಲಕ್ಕೆ ಪಂಡಿತ ಜವಾಹರಲಾಲರು ಮಾಡಿದ ಭಾಷಣವು ಅತ್ಯಂತ ಮಹತ್ವದ್ದಾಗಿದೆ. ಹಿಂದುಸ್ತಾನದ ಸ್ವಾತಂತ್ರ್ಯ ಸಂಗ್ರಾಮವೀಗ ಮುಗಿದು ಹೋದದ್ದರಿಂದ ಇನ್ನೇಕೆ ಸ್ವಯಂಸೇವಕರ ಅವಶ್ಯಕತೆಯೆಂದು ಅನೇಕರು ಕೇಳುತಿರುವರು. ಅವರಿಗೆ ಹೊರಗಿನ ಶತ್ರುಗಳೊಡನೆ ಯಶಸ್ವಿಯಾಗಿ ಹೋರಾಡಿದ್ದು ಇನ್ನು ಅಂತರಿಕ ಶತ್ರುಗಳೊಡನೆ ಹೋರಾಡಬೇಕಾದ್ದರಿಂದ ಈ ಸಂಘಟನೆಯನ್ನು ಶಿಥಿಲ ಮಾಡುವದು ಸರಿಯಾಗಿಲ್ಲೆಂದು ಪಂಡಿತ ಜವಾಹರಲಾಲರು ಹೇಳಿದ್ದು ಯಥೋಚಿತವಾಗಿದೆ. ಜಾತೀಯತೆಯನ್ನು ಇಲ್ಲವೆ ಸದ್ಯದಲ್ಲಿ ತಾಂಡವನೃತ್ಯ ಮಾಡುತಿದ್ದ ಹಿಂಸೆಯನ್ನು ಹೊಡೆದು ಹಾಕಲು ಶಿಸ್ತಿನ ಸ್ವಯಂಸೇವಕರ ಅವಶ್ಯಕತೆ ಇದ್ದೇ ಇದೆ. ಇಂಥ ಶಿಸ್ತಿನ ಅವಶ್ಯಕತೆಯನ್ನು ಜನಸಾಮಾನ್ಯದಲ್ಲಿ ಹೆಚ್ಚಿಸುವದೇ ಸೇವಾದಲದ ಕಾರ್ಯಕರ್ತರ ಕರ್ತವ್ಯವೆಂದು ಜವಾಹರಲಾಲರು ಹೇಳಿದ್ದಾರೆ. ಹಳೆಯ ರಾಜ್ಯ ಬದಲಾಗಿ ಹೊಸ ರಾಜ್ಯ ಅಸ್ತಿತ್ವದಲ್ಲಿ ಬರುವ ಸಮಯದಲ್ಲಿ ಅನೇಕ ಸಮಸ್ಯೆಗಳು ಎದುರಿಸುವುದುಂಟು. ಕೆಲ ಸಮಸ್ಯೆಗಳ ಪರಿಹಾರವನ್ನು ಕೆಲದಿನಗಳ ವರೆಗೆ ತಡೆಹಿಡಿಯಬಹುದಾದರೂ ಕೆಲವನ್ನು ಕೂಡಲೆ ಬಿಡಿಸಬೇಕಾಗಿದೆ, ಇದು ಸಾಧ್ಯವಾಗಬೇಕಾದರೆ ಸರಕಾರ ಹೆಚ್ಚು ಬಲಿಷ್ಠವಾಗಬೇಕಾದುದು ಅವಶ್ಯವೆಂದು ಪಂಡಿತರು ಹೇಳಿದ್ದಾರೆ. ಸರಕಾರ ಬಲಿಷ್ಠವಾಗಬೇಕಾದರೆ ಅದರ ಅಂಗಾಂಗಗಳೆಲ್ಲ ಬಲಿಷ್ಠವಾಗಬೇಕು. ಶಿಸ್ತಿನ ಸ್ವಯಂಸೇವಕರು ಹಳ್ಳಿ ನಗರಗಳಲ್ಲೆಲ್ಲ ಸಂಚರಿಸಿ ರಾಷ್ಟ್ರವನ್ನೆದುರಿಸುತಿರುವ ಅನೇಕ ಸಮಸ್ಯೆಗಳನ್ನು ತಿಳಿಸಿಕೊಟ್ಟು ಅವುಗಳ ಪರಿಹಾರ ಕಾರ್ಯದಲ್ಲಿ ಅವರ ಸಹಾಯ ಪಡೆಯಬೇಕಾಗುವದು. ಹದಿನೈದು ಪ್ರಾಂತಗಳಿಂದ ಬಂದಿದ್ದ ಸೇವಾದಲದ ಈ ಕಾರ್ಯಕರ್ತರು ತಮ್ಮ ತಮ್ಮ ಪ್ರಾಂತಗಳಲ್ಲಿ ಸೇವಾದಲ ಕಾರ್ಯಕರ್ತರನ್ನು ತರಬೇತಿ ಮಾಡಲಿರುವರು. ಕಾಂಗ್ರೆಸ್ಸಿನ ನೇತೃತ್ವದಲ್ಲಿ ಸೇವಾದಲದ ಈ ಕಾರ್ಯವೆಲ್ಲ ನಡೆಯುತಿರುವದು ಸಂತೋಷಪ್ರದವೂ ಉಚಿತವೂ ಆಗಿದೆ.

ಸಮಯೋಚಿತ ಸಲಹೆ

ಭಾರತ ಸ್ವಾತಂತ್ರ್ಯ ಪಡೆವ ಈ ಸಮಯದಲ್ಲಿ ಅದನ್ನು ಸರಾಗವಾಗಿ ಸಾಗಿಸಿಕೊಂಡು ಹೋಗುವಲ್ಲಿ ಭಾರತೀಯರೆಲ್ಲ ಕೈಕೊಡುವದು ಅವಶ್ಯವಾಗಿದೆ. ಯಾವದೇ ಕಾರಣದಿಂದ ಆಡಳಿತದಲ್ಲಿ ವ್ಯತ್ಯಯವನ್ನುಂಟು ಮಾಡುವದೆಂದರೆ ರಾಷ್ಟ್ರದ್ರೋಹ ಮಾಡಿದಂತೆಯೆ ಸೈ. ವಿಶೇಷತಃ ಸರಕಾರೀ ನೌಕರರು ಈ ಸಮಯದಲ್ಲಿ ಹೆಚ್ಚು ಪಾತ್ರ ವಹಿಸಬೇಕಾಗಿದೆ. ತಮ್ಮ ಬೇಡಿಕೆಗಳೇನಾದರೂ ಇದ್ದರೆ ಕ್ರಮೇಣ ಅವನ್ನು ತಮ್ಮ ಜನರಿಂದಲೆ ಪೂರಯಿಸಿಕೊಳ್ಳುವದು ಇಷ್ಟವಾಗಿದೆ. ಸಂಪು ಮೊದಲಾದವುಗಳನ್ನು ಹೂಡಿ ಅಧಿಕಾರದ ಹಸ್ತಾಂತರದಿಂದ ಉಂಟಾಗಬಹುದಾದ ಅಡಚಣೆಯಲ್ಲಿ ಮತ್ತಷ್ಟು ಅವ್ಯವಸ್ಥೆಯಾಗದಂತೆ ನೋಡಿಕೊಳ್ಳುವದು ಅವಶ್ಯವಾಗಿದೆ. ಕೇಂದ್ರ ಸರಕಾರದವರು ಸಂಬಳ ಸಮಿತಿಯನ್ನು ನೇಮಿಸಿ ಅದರ ಶಿಫಾರಸುಗಳನ್ನು ಪಡೆದಿರುವರು. ಅವುಗಳನ್ನು ಜಾರಿಯಲ್ಲಿ ತರಲೂ ಅವರು ಪ್ರಯತ್ನಿಸುತಿರುವರು. ಈ ಸೂಚನೆಗಳು ಕವಾಚಿತ್ ನೌಕರರ ಬೇಡಿಕೆಗಳನ್ನು ಸಮಾಧಾನ ಪಡಿಸಲು ಸಮರ್ಥವಾಗಿರಲಿಕ್ಕಿಲ್ಲ. ಆದರೂ ಸರಕಾರಿ ನವಕರರು ಹೊಸ ಸಾಮಂತ ಸರಕಾರಗಳಿಗೆ ಕೆಲ ಸಮಯವನ್ನಾದರೂ ಕೊಡಬೇಕು. ಒಮ್ಮೆಲೆ ಸಂಪು ಹೂಡುವದರಿಂದ ಆಡಳಿತಕ್ರಮವೆಲ್ಲ ಸ್ಥಗಿತವಾಗಿ ಒಂದು ಬಗೆಯ ಅವ್ಯವಸ್ಥೆ ದೇಶದಲ್ಲಿ ಉಂಟಾಗುವದು. ಇದು ಯಾವ ರೀತಿಯಿಂದಲೂ ಅಪೇಕ್ಷಣೀಯವಲ್ಲ. ಕಲಕತ್ತೆಯ ಅಕೌಂಟಂಟ್ಸ ಕಚೇರಿಯ ಕೆಲಸಗಾರರ ಸಂಪಿನ ಸಂಬಂಧದಲ್ಲಿ ಅಭಿಪ್ರಾಯಪಡುತ್ತ ಮಹಾತ್ಮರು ಮುತ್ತಿನಂತಹ ಮಾತುಗಳನ್ನು ಹೇಳಿದ್ದಾರೆ. ಎಲ್ಲರಿಗೂ ಸಮಾನ ಸಂಬಳ ಸಿಕ್ಕಬೇಕೆಂಬುದು ತಮ್ಮ ಅಭಿಪ್ರಾಯವಾಗಿದ್ದರೂ ಆ ಬಗೆಯ ಆದರ್ಶ ಒಮ್ಮೆಲೆ ಕೈಗೂಡದು ಕ್ರಮೇಣ ಅದನ್ನು ಕೈವಶ ಮಾಡಿಕೊಳ್ಳಬೇಕೆಂದು ಅವರು ಅಭಿಪ್ರಾಯಪಟ್ಟಿದ್ದಾರೆ. ಬಂಗಾರದ ತತ್ತಿಯನ್ನು ಹಾಕುವ ಕೋಳಿಯನ್ನೆ ಕೊಯ್ಯಲು ಕೈಹಾಕಬಾರದೆಂದೂ ಅವರು ಬೋಧಿಸಿದ್ದಾರೆ. ಸಾರ್ವಜನಿಕ ಉಪಯೋಗದ ಕೆಲಸಗಳಲ್ಲಿಯಂತೂ ಈ ಬಗೆಯ ಸಂಪು ಎಂದಿಗೂ ತರವಲ್ಲವೆಂದು ಗಾಂಧೀಜಿ ಸ್ಪಷ್ಟಪಡಿಸಿದ್ದಾರೆ. ಆದುದರಿಂದ ಸಂಬಂಧಿಸಿದವರೆಲ್ಲ ಪರಿಸ್ಥಿತಿಯನ್ನು ಚೆನ್ನಾಗಿ ತಿಳಿದುಕೊಂಡು ಸೂಕ್ತ ಕ್ರಮಗಳನ್ನು ಕೈಕೊಳ್ಳಲು ಅವಕಾಶ ಕೊಡಬೇಕಲ್ಲದೆ ಸಂಪು ಮೊದಲಾದದ್ದನ್ನು ಹೂಡಿ ಪರಿಸ್ಥಿತಿಯನ್ನು ಮತ್ತಷ್ಟು ಹದಗೆಡಿಸಬಾರದೆಂದು ಕೇಳಿಕೊಳ್ಳುತ್ತೇವೆ.

ಮತಪ್ರದರ್ಶನಕ್ಕೆ ನಿರ್ಬಂಧವೇಕೆ?

ಪಂಜಾಬಿನಲ್ಲಿಯ ಗಡಿಯ ಸಂಬಂಧದಲ್ಲಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುವದಕ್ಕಾಗಿ ಶೀಖರು ನಾನಕಾನ ಸಾಹೇಬದಲ್ಲಿ ಪರಿಷತ್ತನ್ನು ಸೇರಿಸುವವರಿದ್ದರು. ಈ ಪರಿಷತ್ತನ್ನು ಸೇರಿಸಲು ಪಂಜಾಬದ ಗವರ್ನರರು ನಿರ್ಬಂಧ ಹಾಕಿ ಪರಿಸ್ಥಿತಿಯನ್ನು ಹದಗೆಡಿಸಿದರೆಂದು ಹೇಳಬೇಕಾಗುವದು. ಪರಿಷತ್ತನ್ನು ಸೇರಿಸಗೊಡಬಾರದೆಂದು ರೇಲ್ವೆ ತಿಕೀಟುಗಳನ್ನು ಕೂಡ ಕೊಡಬಾರದೆಂದು ವಿಧಿಸಲಾಗಿತ್ತು. ಆದರೂ ಹತ್ತು ಸಾವಿರದಷ್ಟು ಜನ ಅಲ್ಲಿ ಪರಿಷತ್ತು ಸೇರಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ದಿಲೀಪಸಿಂಗರು ಅಧ್ಯಕ್ಷತೆ ವಹಿಸಿದ್ದರು. ಗಡಿನಿರ್ಣಾಯಕ ಸಮಿತಿಯವರು ಕೊಡಬಹುದಾದ ನಿರ್ಣಯದಂತೆ ಎಲ್ಲರೂ ನಡೆಯುವದು ಅವಶ್ಯವಾಗಿದ್ದರೂ ಆ ಸಮಿತಿಯವರು ಯೋಗ್ಯ ನಿರ್ಣಯ ಕೊಡುವಂತೆ ಎಲ್ಲ ರೀತಿಯಿಂದ ನೋಡಿಕೊಳ್ಳುವದು ಭಾರತೀಯರೆಲ್ಲರ ಕರ್ತವ್ಯವೆಂದು ಬೇರೆ ಹೇಳಬೇಕಿಲ್ಲ. ಯಾರ ಅಭಿಪ್ರಾಯವೆಂತಿದೆ, ಗಡಿ ನಿರ್ಣಯಿಸುವಾಗ. ಯಾವಾವ ವಿಷಯಗಳನ್ನು ಗ್ರಹಿಸಬೇಕು ಮುಂತಾದ್ದನ್ನೆಲ್ಲ ವಿಚಾರಿಸುವದು ಕ್ರಮಪ್ರಾಪ್ತವಾಗಿದೆ. ಜನತೆಯ ಅಭಿಪ್ರಾಯವನ್ನು, ಆಯಾ ಭಾಗದ ಪರಿಸ್ಥಿತಿಯನ್ನು, ಭಾಷೆ ಸಂಸ್ಕೃತಿ, ಪರಂಪರೆ ಮೊದಲಾದವುಗಳನ್ನು ತಿಳಿದುಕೊಳ್ಳದೆ ಗಡಿನಿರ್ಣಾಯಕ ಸಮಿತಿಯವರು ತಮ್ಮ ನಿರ್ಣಯವನ್ನು ಕೊಡಲಾರರು. ಈ ಪರಿಸ್ಥಿತಿಯಲ್ಲಿ ಶೀಖರು ಅನಿರ್ಬಂಧವಾಗಿ ನಾನಕಾನ ಸಾಹೇಬದಲ್ಲಿ ಸಭೆ ಸೇರಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದರೆ ಅದಾವ ಹಾನಿಯಾಗುತಿತ್ತು ? ಪಂಜಾಬ ಗವರ್ನರರು ನಿರರ್ಥಕವಾಗಿ ಆ ಪರಿಷತ್ತನ್ನು ನಿರ್ಬಂಧಿಸಿ ಪ್ರಾಂತದಲ್ಲಿ ಪ್ರಕ್ಷುಬ್ಧ ಪರಿಸ್ಥಿತಿಯನ್ನುಂಟು ಮಾಡಿದರು. ಪರಿಷತ್ತು ಕೂಡಿದಾಕ್ಷಣ ಶಾಂತತಾ ಭಂಗವೇನು ಆಗುತಿರಲಿಲ್ಲ. ಬೇರೆ ಅನೇಕ ಕಾರಣಗಳಿಗಾಗಿ ಪಂಜಾಬದಲ್ಲಿ ಶಾಂತಿಯು ಈಗಲೂ ಪ್ರಸ್ಥಾಪಿತವಾಗಿಲ್ಲ. ಇಂಥ ನಿರ್ಬಂಧಗಳಿಂದ ಅಶಾಂತಿ ಮತ್ತಷ್ಟು ಹೆಚ್ಚಾಗುವುದಲ್ಲದೆ ಶಾಂತಿ ಪ್ರಸ್ಥಾಪಿತವಾಗಲಾರದು. ಇದನ್ನು ಮನದಂದು ಪಂಜಾಬದ ಗವರ್ನರರು ತಮ್ಮ ಧೋರಣವನ್ನು ಸರಿಪಡಿಸಿಕೊಳ್ಳಬೇಕೆಂದು ಒತ್ತಾಯ ಪಡಿಸುತ್ತೇವೆ.

ಅಲ್ಪಸಂಖ್ಯಾಕರ ರಕ್ಷಣೆ

ಹಿಂದುಸ್ತಾನ ಪಾಕಿಸ್ತಾನ ಸಾಮಂತ ಸರಕಾರಗಳಲ್ಲಿ ಅಲ್ಪ ಸಂಖ್ಯಾಕರ ಹಕ್ಕುಬಾಧ್ಯತೆಗಳು ಸಂರಕ್ಷಿಸಲ್ಪಡುವವೆಂದು ಅಸ್ತಿ ವಿಭಜನಾ ಸಮಿತಿಯವರು ಆಶ್ವಾಸನಕೊಟ್ಟಿದ್ದು ಸಮಯೋಚಿತವಾಗಿದೆ. ಪಾಕಿಸ್ತಾನದ ಗವರ್ನರಜನರಲ್‌ರಾಗಿ ನೇಮಕಹೊಂದಿದ ಡಾ. ಜಿನ್ನಾರು ವೈಯುಕ್ತಿಕವಾಗಿ ಈ ಬಗೆಯ ಆಶ್ವಾಸನ ಈ ಮೊದಲು ಕೊಟ್ಟಿದ್ದರು. ಆದರೀಗ ಅಧಿಕೃತವಾಗಿ ವಿಭಜನಾಸಮಿತಿಯವರು ಆಶ್ವಾಸಿಸಿದ್ದು ಹೆಚ್ಚು ಮಹತ್ವದ್ದಾಗಿದೆ. ಪಾಕಿಸ್ತಾನ ಸ್ಥಾಪಿತವಾಗುವ ಮೊದಲೆ ಸಿಂಧ ಬಂಗಾಲಗಳಲ್ಲಿ ಅಲ್ಪ ಸಂಖ್ಯಾಕರ ಹಕ್ಕುಬಾಧ್ಯತೆಗಳ ಮೇಲೆ ಮಾಡಲ್ಪಡಲಾಗುತಿದ್ದ ಪ್ರಹಾರದಿಂದ ಜನ ಭಯಭೀತರಾಗಿದ್ದುದು ಸ್ವಾಭಾವಿಕ. ಬಹುಸಂಖ್ಯಾಕ ಜಾತಿಯವರ ಆಡಳಿತದಲ್ಲಿ ತಮ್ಮ ಗತಿಯೇನೆಂದು ಅವರು ವಿಮಂಚನೆಗೊಳಗಾಗಿದ್ದು, ಲೀಗಿನವರು ತಮ್ಮ ಸರ್ವತಂತ್ರಸ್ವತಂತ್ರ ಪಾಕಿಸ್ತಾನ ಸರಕಾರವನ್ನು ಸ್ಥಾಪಿಸಿಕೊಳ್ಳುವುದಕ್ಕಾಗಿ ಉಪಯೋಗಿಸಿದ ಸಾಧನಗಳು ನಿರ್ದುಷ್ಟವಾಗಿದ್ದಿಲ್ಲವಾದ್ದರಿಂದ ಅಲ್ಲಿನ ಅಲ್ಪ ಸಂಖ್ಯಾಕರು ಹೆಚ್ಚು ಭೀತರಾಗುವದು ಸಹಜ. ಆದರೀಗ ವಿಭಜನಾಮಂಡಳದವರ ಆಶ್ವಾಸನದಿಂದ ಅವರು ಸ್ವಲ್ಪ ಸಮಾಧಾನ ಹೊಂದಬಹುದು, ಆದರೂ ಪಾಕಿಸ್ತಾನದ ಭಾವೀ ಗವರ್ನರಜನರಲ್‌ರ ಕಡೆಗೆ ಅಲ್ಪಸಂಖ್ಯಾಕರ ಶಿಷ್ಟಮಂಡಳವೊಂದನ್ನೊಯ್ಯಬೇಕೆಂದು ಯೋಜಿಸಲಾಗಿದೆ. ಅಗಸ್ಟ ೧೫ ರೊಳಗೆ ಉತ್ತರ ಮತ್ತು ಪೂರ್ವ ಬಂಗಾಲ ಭಾಗಕ್ಕೆ ಭೆಟ್ಟಿಕೊಟ್ಟು ಪೂರ್ವ ಬಂಗಾಲದಲ್ಲಿಯ ಹಿಂದುಗಳಿಗೆ ಸಂರಕ್ಷಣೆಯ ಆಶ್ವಾಸನವನ್ನು ಕೊಡಬೇಕೆಂದು ಸರ್ ಯದುನಾಥ ಸರಕಾರರ ಅಧ್ಯಕ್ಷತೆಯಲ್ಲಿ ಕಲಕತ್ತೆಯಲ್ಲಿ ಸೇರಿದ ಸಭೆಯೊಂದರಲ್ಲಿ ನಿರ್ಣಯಿಸಲಾಯಿತು. ವಿಭಜನಾ ಸಮಿತಿಯ ಈ ಘೋಷಣೆಯನ್ನು ಕಾರ್ಯಕಾರಿ ಮಾಡಲು ಪಾಕಿಸ್ತಾನ ಸರಕಾರದೊಡನೆ ಹಿಂದುಸ್ತಾನ ಸರಕಾರ ಒಡಂಬಡಿಕೆ ಮಾಡಿಕೊಳ್ಳಲು ಒತ್ತಾಯಪಡಿಸಬೇಕೆಂದೂ ಕೇಳಿಕೊಳ್ಳಲಾಯಿತು. ವಿಭಜನಾ ಸಮಿತಿಯ ಘೋಷಣೆಯಂತೆ ಅಲ್ಪ ಸಂಖ್ಯಾಕರ ಹಕ್ಕುಬಾಧ್ಯತೆಗಳ ರಕ್ಷಣೆಯ ಸಂಬಂಧದಲ್ಲಿ ಎರಡೂ ಸಾಮಂತ ಸರಕಾರಗಳಲ್ಲಿ ಒಡಂಬಡಿಕೆಯಾಗಿ ಅದು ಕಾರ್ಯರೂಪದಲ್ಲಿ ಬಂದುದಾದರೆ ಅಲ್ಪ ಸಂಖ್ಯಾಕರು ಸುಖಸಮಾಧಾನಗಳಿಂದ ಬಾಳಲು ಅನುಕೂಲವಾಗುವದೆಂಬಲ್ಲಿ ಸಂದೇಹವಿಲ್ಲ.

ಇಂಡೋನೇಶಿಯ

ಇಂಡೋನೇಶಿಯದಲ್ಲಿ ಡಚ್ಚರು ನಡೆಸಿದ ಹತ್ಯಾಕಾಂಡದ ವಿವರಗಳನ್ನು ಇದೇ ಸಂಚಿಕೆಯಲ್ಲಿ ಬೇರೆ ಕಡೆ ಚರ್ಚಿಸಲಾಗಿದೆ. ಈ ಬಗೆಯ ಅಮಾನುಷ ಕೃತ್ಯಗಳನ್ನು ಎಷ್ಟು ಖಂಡಿಸಿದರೂ ಕಡಿಮೆಯೆ. ಹಿಂದುಸ್ತಾನದ ವಿದೇಶ ಮಂತ್ರಿಗಳಾದ ಪಂಡಿತ ಜವಾಹರಲಾಲರು ಪತ್ರಿಕಾ ಪರಿಷತ್ತನ್ನು ಸೇರಿಸಿ ಇಂಡೋನೇಶಿಯದಲ್ಲಿಯ ಹೋರಾಟದ ಬಗ್ಗೆ ಹಿಂದುಸ್ತಾನ ಸರಕಾರದ ಧೋರಣವನ್ನು ಸ್ಪಷ್ಟಪಡಿಸಿದ್ದಾರೆ. ಪ್ರತ್ಯಕ್ಷ ಯುದ್ಧವನ್ನು ಹೊಂತುಪಡಿಸಿ ಉಳಿದೆಲ್ಲ ಬಗೆಯ ಸಹಾಯದ ಆಶ್ವಾಸನವನ್ನು ಪಂಡಿತ ಜವಾಹರಲಾಲರು ಕೊಟ್ಟಿದ್ದಾರೆ. ಏಶಿಯಖಂಡದಲ್ಲಿ ಯುರೋಪಿನವರ ಕೈವಾಡವೇಕೆಂದು ಅವರು ಕೇಳಿದ್ದಕ್ಕೆ ಅಮೇರಿಕೆಯ ಬೆಂಬಲವೂ ಸಿಕ್ಕಿದೆ. ಇಂಡೋನೇಶಿಯ ಭಾರತದ ನೆರೆಯ ರಾಷ್ಟ್ರ. ಭಾರತಕ್ಕೂ ಇಂಡೋನೇಶಿಯಕ್ಕೂ ಪ್ರಾಚೀನ ಕಾಲದಿಂದಲೂ ಸಂಬಂಧವಿದೆ. ಹಿಂದುಸ್ತಾನಕ್ಕೆ ಆಹಾರ ಪದಾರ್ಥಗಳನ್ನು ಪೂರೈಸುವದರಲ್ಲಿಯೂ ಇಂಡೋನೇಶಿಯ ಬಹಳಮಟ್ಟಿಗೆ ಸಹಾಯ ಸಲ್ಲಿಸಿದ್ದುಂಟು. ಡಚ್ಚರು ಇಂಡೋನೇಶಿಯದ ಮೇಲೆ ನಡೆಸಿದ ಘೋರ ಸಂಗ್ರಾಮಕ್ಕೆ ತಡೆಹಾಕುವದು ಅತ್ಯವಶ್ಯವಾಗಿರುವದು. ಬ್ರಿಟಿಶ ಸರಕಾರದವರು ಈ ಸಂದರ್ಭದಲ್ಲಿ ಜಾಗ್ರತರಾಗಿ ಡಚ್ಚರಿಗೆ ಸೈನಿಕ ಸಾಹಿತ್ಯ ಸಲ್ಲಿಸುವದನ್ನು ನಿಲ್ಲಿಸಲಾಗುವದೆಂದು ಸಾರಿದ್ದು ಸಂತೋಷದ ಸಂಗತಿಯಾಗಿದೆ. ಯುಕ್ತರಾಷ್ಟ್ರಸಂಘದ ಭದ್ರತಾ ಮಂಡಳಕ್ಕೂ ದೂರಿಕೊಳ್ಳಲಾಗಿದೆ. ಇಂಥ ಸಮಸ್ಯೆಗಳನ್ನು ಯುಕ್ತ ರಾಷ್ಟ್ರಸಂಘದವರು ಅಲಕ್ಷ್ಯ ಮಾಡುವದರಿಂದ ಪರಿಸ್ಥಿತಿ ಹದಗೆಟ್ಟು ಘೋರ ಸಂಗ್ರಾಮದಲ್ಲಿ ಪರಿವರ್ತನಹೊಂದಿದ ಅನುಭವ ಇದೆ. ಮುಂದೆಯೂ ಹೀಗಾಗಬಾರದೆಂದಿದ್ದರೆ ಭದ್ರತಾ ಮಂಡಲದವರು ಕೂಡಲೆ ಇದರಲ್ಲಿ ಕೈಹಾಕಿ ಡಚ್ಚರು ನಡೆಸಿದ ಈ ಆಕ್ರಮಕ ಯುದ್ಧವನ್ನು ಕೂಡಲೆ ನಿಲ್ಲಿಸಬೇಕು. ಹಿಂದುಸ್ತಾನದ ವಿಮಾನವನ್ನು ಡಚ್ಚರು ಕೆಡಹಿದ್ದೂ ಅಪರಾಧವಾಗಿದೆ. ಇದರ ನಷ್ಟ ಪರಿಹಾರವೆಂದು ಡಚ್ಚ ಸರಕಾರ ಒಂದುಕೋಟಿರೂಪಾಯಿ ತುಂಬಿಕೊಡಬೇಕೆಂದು ಪಾಟನಾಯಕರು ಅಭಿಪ್ರಾಯಪಟ್ಟಿದ್ದಾರೆ. ವೈಮಾನಿಕ ಪಾಟನಾಯಕರು ಸೂಚಿಸಿದಂತೆ ನಷ್ಟ ಪರಿಹಾರವನ್ನು ಕೇಳುವದು ನ್ಯಾಯ್ಯ ಮತ್ತು ಸಮಂಜಸವಾಗಿದೆ. ಡಚ್ಚ ಸರಕಾರದವರು ಕೂಡಲೆ ಪರಿಸ್ಥಿತಿಯನ್ನೆಲ್ಲ ವಿಚಾರಿಸಿ ಯುದ್ಧವನ್ನು ನಿಲ್ಲಿಸಿ ನಿರರ್ಥಕ ಹತ್ಯಾಕಾಂಡವನ್ನು ತಪ್ಪಿಸಬೇಕೆಂದು ಆಗ್ರಹಪಡಿಸುತ್ತೇವೆ.

ಅಗಸ್ಟ್ ೧೪ರ ಮಧ್ಯರಾತ್ರಿಗೆ ಬ್ರಿಟಿಶ ಸತ್ತೆಯ ಕೊನೆ

ಹೊಸ ಗವರ್ನರ ಪದವಿಗಳಿಗೆ "ವರಸಂಶೋಧನ"! ತಿರ್ವಾಂಕೂರು ಹೈದರಾಬಾದುಗಳು ಒಕ್ಕೂಟ ಸೇರುವವು? ಹಿಂದುಸ್ತಾನ—ಪಾಕಿಸ್ತಾನಗಳ ನಡುವೆ ಪಾಸಪೋರ್ಟ ಬೇಕಿಲ್ಲ.

ಅಧಿಕಾರ ವರ್ಗೀಕರಣದ ಆ ಮಹಾದಿನ ಸಮೀಪಿಸಿದಂತೆ ಸ್ವಾತಂತ್ರ್ಯೋತ್ಸವಕ್ಕಾಗಿ ಎರಡೂ ಸಾಮಂತ ರಾಜ್ಯಗಳಲ್ಲಿ ಸಿದ್ಧತೆಗಳು ಪೂರ್ಣವಾಗತೊಡಗಿವೆ. ಅಗಸ್ಟ್ ೧೪ ಮಧ್ಯರಾತ್ರಿಗೆ ವೈಸರಾಯ ಲಾರ್ಡ ಲುಯಿ ಮೌಂಟಬ್ಯಾಟನ್ನರು ಅಧಿಕಾರ ತ್ಯಾಗ ಮಾಡುವರು. ಮರುದಿನ ಮುಂಜಾನೆ ಅವರೇ ತಿರುಗಿ ಘಟನಾಬದ್ಧ ಗವರ್ನರ ಜನರಲ್ಲರಾಗಿ ಪದವಿಯನ್ನು ಸ್ವೀಕರಿಸುವರು. ಪಂಡಿತ ಜವಾಹರಲಾಲರ ನೇತೃತ್ವದಲ್ಲಿ ರಚಿಸಲ್ಪಡುವ ಸಾಮಂತ ಮಂತ್ರಿಮಂಡಲದ ಪ್ರತಿಜ್ಞಾವಿಧಿ ಅವರ ಮುಂದೆ ನೆರವೇರುವದು. ದಿಲ್ಲಿಯಲ್ಲಿ ಈ ಸಂಬಂಧದಲ್ಲಿ ಜರಗತಕ್ಕ ಉತ್ಸವ ಸಮಾರಂಭಗಳ ವಿವರಗಳೂ ಪ್ರಕಟವಾಗಿವೆ. ಮಂತ್ರಿಗಳು ಗವರ್ನರ ಜನರಲ್ಲರನ್ನು ಮೆರವಣಿಗೆಯಲ್ಲಿ ಎದುಗೊಳ್ಳುವರು. ಹಿಂದೀ ಸೈನ್ಯಪಡೆಯ ಒಂದು ದಲ ಅವರಿಗೆ ಗೌರವ ರಕ್ಷೆ ಸಲ್ಲಿಸುವದು. ಮೌಂಟಬ್ಯಾಟನ್ನರು ಘಟನಾ ಸಮಿತಿಯಲ್ಲಿ ಭಾಷಣ ಮಾಡುವರು. ಅಧಿಕಾರ ವರ್ಗೀಕರಣದ ಔಪಚಾರಿಕ ವಿಧಿ ನಡೆದು ಕೌನ್ಸಿಲ ಭವನದ ಮೇಲೆ ರಾಷ್ಟ್ರಧ್ವಜಾರೋಹಣವಾಗುವದು. ಇಂತು ಹೊಸ ಸಾಮಂತ ಸ್ವರಾಜ್ಯದ ಜನ್ಮವಾಗುವದು. ಸಂಜೆ ಯುದ್ಧಸ್ಮಾರಕದ ಅವರಣದಲ್ಲಿ ಹಿಂದೀ ಸೈನ್ಯ ಹೊಸ ರಾಷ್ಟ್ರಧ್ವಜಕ್ಕೆ ಕಲೆವಾಗಿ ಗೌರವ ಸಲ್ಲಿಸುವದು. ರಾತ್ರಿ ದೀಪೋತ್ಸವ ಪಟಾಕ್ಷಿಗಳ ಹಾರಾಟ, ಗವರ್ನರ ಜನರಲ್ಲರ ಭೋಜನ ಸಮಾರಂಭ...... ಅಗಸ್ಟ ೧೫ ಸರಕಾರಿ ರಜಾದಿನ.

ವಿಶೇಷವಾಗಿ, ವಿಭಕ್ತ ಸ್ವಾತಂತ್ರ್ಯದಿಂದ ವಿಷಣ್ಣರಾಗಿದ್ದರೂ ಮಹಾತ್ಮಾ ಗಾಂಧಿಯವರು ಸ್ವಾತಂತ್ರ್ಯೋತ್ಸವ ಕಾಲಕ್ಕೆ ತಮ್ಮ ಕಾಶ್ಮೀರ ಪ್ರವಾಸದಿಂದ ಮರಳಿ ದಿಲ್ಲಿಯಲ್ಲಿದ್ದು ಉತ್ಸವದ ಕಳೆಯೇರಿಸುವರು.

ಪಾಕಿಸ್ತಾನದ ಜನ್ಮೋತ್ಸವವೂ ಅಂದು ಕರಾಚಿಯಲ್ಲಿ ನಡೆಯಲಿದೆ.

ಹೊಸ ಚೌಕಟ್ಟು

ಅಗಸ್ಟ ೧೫ ರ ದಿನ ಹಿಂದುಸ್ತಾನದ ಆಡಳಿತದ ಚೌಕಟ್ಟೇ ಪೂರ್ತ ಬದಲಾಗುವದು. ಕೇಂದ್ರದಲ್ಲಿ ಪಾಕಿಸ್ತಾನೇತರ ಭಾಗಗಳ ಮೇಲೆ ಪೂರ್ಣಾಧಿಕಾರವುಳ್ಳ ಮಂತ್ರಿಮಂಡಲ, ಹೊಸ ಗವರ್ನರರು, ಘಟನಾ ಸಮಿತಿಯು ವರಿಷ್ಠಾಧಿಕಾರಕ್ಕೋಸ್ಕರ ಕೆಲಸ ಮಾಡುವರು. ಸಾಮಂತ ಮಂತ್ರಿಮಂಡಲದಲ್ಲಿ ಕೆಲ ಬದಲಾವಣೆಗಳಾಗಬಹುದಾದರೂ ಪಂಡಿತ ಜವಾಹರಲಾಲರೇ ಮುಖ್ಯ ಮಂತ್ರಿಗಳಾಗುವರು. "ಬಲಿಷ್ಠ" ಮತ್ತು ಕಠೋರ ಮನುಷ್ಯನೇ ಈ ಪ್ರಸಂಗದಲ್ಲಿ ಮುಖ್ಯಮಂತ್ರಿಯಾಗಿರುವದು ಯೋಗ್ಯವೆಂದು ಸರದಾರ ಪಟೇಲರನ್ನು ಸಾಮಂತ ಮಂತ್ರಿಮಂಡಲದ ನಾಯಕತ್ವಕ್ಕೆ ನೇಮಿಸುವ ವಿಚಾರವಿದ್ದರೂ ಕೆಲವೊಂದು ವಿಶಿಷ್ಟ ಕಾರ್ಯಕ್ಕಾಗಿ ಜವಾಹರರಿಗೇ ನೇತೃತ್ವದ ವೀಳೆಯ ಕೊಡಲಾಯಿತಂತೆ. ಪ್ರಾಂತಿಕ ಗವರ್ನರರ ನೇಮಕದ ವಿಷಯದಲ್ಲಿ ಮಾತ್ರ ಒಳ್ಳೆ ಸಮಸ್ಯೆಯೇ ಉತ್ಪನ್ನವಾಗಿದೆಯೆಂದು ತೋರುತ್ತದೆ. ಮೌ. ಅಬುಲ ಕಲಮ ಅಝಾದ, ಆಚಾರ್ಯ ಕೃಪಲಾನಿ, ಪಂ. ಪಂತ, ಕೆ. ಎಂ. ಮುನಶಿ ರಾಜಾಜಿ, ಗೋಪಾಲಸ್ವಾಮಿ ಅಯಂಗಾರ ಮೊದಲಾದವರ ಹೆಸರು ಹೊಸ ಪ್ರಾಂತಿಕ ಗವರ್ನರುಗಳ ಪದಕ್ಕೆ ಸೂಚಿಸಲ್ಪಟ್ಟಿದ್ದರೂ ಅವರಲ್ಲಿ ಅಧಿಕಾಂಶ ಜನರು ಈ ಪದಗಳನ್ನು ಸ್ವೀಕರಿಸಲೊಪ್ಪಿಲ್ಲವಂತೆ. ಡಾ. ಅಂಬೇಡಕರರ ಹೆಸರು ಮಾತ್ರ ಕೇಳಿಬರುತ್ತಲೇ ಇಲ್ಲ. ಕಾಂಗ್ರೆಸ್ಸಿನಲ್ಲಿ ಬೆಳೆಯುತಿರುವ ಅಧಿಕಾರಲಾಲಸೆಯನ್ನು ಕುರಿತ ಟೀಕೆಗಳು ಈಚೆಗೆ ಗಾಂಧೀಜಿಯಂಥವರ ಬಾಯಿಂದ ಕೇಳಬರುತಿರುವದು ಕಾಂಗ್ರೆಸಿಗರ ಸಂಕೋಚಕ್ಕೆ ಕಾರಣವಿರಬಹುದು. ಅಂತೂ ಕೆಲ ಪ್ರಮುಖರ ಮೇಲೆ ಒತ್ತಾಯದಿಂದಾದರೂ ಈ ಹೊರೆಯನ್ನು ಹೊರಿಸಬೇಕಾದೀತು. ಪಾಕಿಸ್ತಾನಕ್ಕೂ ಗವರ್ನರರನ್ನು ಹುಡುಕುವ ಕೆಲಸ ಕಠಿಣವಾಗಿದೆ. ಲಾರ್ಡ ಕಿಲರ್ನರಿಗೆ ಪೂರ್ವಪಾಕಿಸ್ತಾನದ ಗವರ್ನರ ಪದವಿಯನ್ನು ಕೊಡಮಾಡಲಾಗಿತ್ತು. ಆದರೆ ಬಡ ಪಾಕಿಸ್ತಾನ ೨೦೦೦ ರೂಪಾಯಿಗಿಂತ ಹೆಚ್ಚು ಸಂಬಳ ಕೊಡಲಾರದೆಂದು ಜಿನ್ನಾಸಾಹೇಬರು ಹೇಳಿದ್ದರಿಂದ ೬೦೦೦ ರೂಪಾಯಿಯನ್ನು ಅಪೇಕ್ಷಿಸಿದ ಕಿಲರ್ನರು ವರದಕ್ಷಿಣೆ ಸಾಲದೆಂದು ಸಿಟ್ಟಿನಿಂದ ಹೊರಟು ಹೋದರು!

ಅಧಿಕಾರಿ ವರ್ಗದಲ್ಲಿ ಒದಗುವ ಇನ್ನೊಂದು ಅವಾಂತರವೆಂದರೆ ಸುಮಾರು ೪೦೦ ಯುರೋಪಿಯನ್ ಆಯ. ಸಿ. ಎಸ್. ಅಧಿಕಾರಿಗಳು ಸಾಮೂಹಿಕ ರಾಜೀನಾಮೆ ಕೊಟ್ಟು ವಿರಾಮ ಹೊಂದುವದು. ಅಲ್ಲದೆ ೩೦ ಯುರೋಪಿಯನ್ ಮತ್ತು ೭೮ ಮುಸ್ಲಿಂ ಅಧಿಕಾರಿಗಳು ಪಾಕಿಸ್ತಾನಕ್ಕೆ ಹೋಗುವರು. ಹಿಂದುಸ್ತಾನದಲ್ಲಿ ಕೆಲಸಮಾಡಲೊಪ್ಪಿದ ಮುಸ್ಲಿಂ ಅಧಿಕಾರಿಗಳು ಸುಮಾರು ೧೨ ಜನ. ಯುರೋಪಿಯನ್ ಆಯ. ಸಿ. ಎಸ್. ಜನರಲ್ಲಿ ಅರ್ಧಕ್ಕರ್ಧ ಜನರು ಸಂಧಿ ಕಾಲದಲ್ಲಿ ವಿರಾಮ ಹೊಂದಿ ಹಿಂದೀ ಸ್ವಾತಂತ್ರ್ಯದ ಮೇಲೆ ತಮ್ಮ ಕೊನೆಯ ಏಟನ್ನು ಬೀಸುವರು! ಇದಲ್ಲದೆ ಮುಂಬಯಿ ಪ್ರಾಂತದಲ್ಲೆ ೨೨ ಯುರೋಪಿಯನ ಪೋಲೀಸ ಅಧಿಕಾರಿಗಳು ಸೇವಾನಿವೃತ್ತರಾಗುವರು.

ಉಚ್ಚ ವರ್ಗಗಳಲ್ಲಿ ಆಗಲಿರುವ ಇನ್ನೊಂದು ಬದಲಾವಣೆಯೆಂದರೆ ಸಶಸ್ತ್ರ ಬಲಗಳ ಮೇಲಧಿಕಾರಿಗಳದು. ಹಿಂದುಸ್ತಾನದ ಸೈನ್ಯಕ್ಕೆ ಲೆಫ್ಟಿನಂಟ ಜನರಲ್ ಸರ್ ರಾಬ ಲಾಕಹಾರ್ಟರೂ ನೌಕಾಪಡೆಗೆ ಕ್ಯಾ. ಜೆ. ಟಿ. ಎಸ್. ಹಾಲರೂ ವಿಮಾನ ದಲಕ್ಕೆ ಸರ್. ಥಾಮಸ್ ಎಲ್ಮಹರ್ಸ್ಟರೂ ಕಮಾಂಡರರಾಗಿ ನೇಮಿಸಲ್ಪಟ್ಟಿದ್ದಾರೆ. ಪಾಕಿಸ್ತಾನದ ಸಶಸ್ತ್ರ ಬಲಗಳಿಗೂ ಇದೇ ಪ್ರಕಾರ ಬೇರೆ ಬೇರೆ ಅಧಿಕಾರಿಗಳನ್ನು ನೇಮಿಸಲಾಗಿದೆ.

ಚಲನ ಇತ್ಯಾದಿ

ಅಗಸ್ಟ ೧೫ ರ ನಂತರ ಹಿಂದುಸ್ತಾನ ಪಾಕಿಸ್ತಾನಗಳ ವ್ಯವಹಾರದ ಸಂಬಂಧದಲ್ಲಿ ಕೆಲ ವಿವರಗಳು ಪ್ರಕಟವಾಗಿವೆ. ಮೊದಲನೆಯದಾಗಿ ಯಾವುದಾದರೊಂದು ಸರಕಾರ ತದ್ವಿರುದ್ಧ ನಿರ್ಣಯ ಮಾಡುವ ವರೆಗೆ ಉಭಯ ರಾಜ್ಯಗಳಲ್ಲಿ ಹೋಗಿಬರಲು ಪಾಸಪೋರ್ಟ ಬೇಕಾಗುವದಿಲ್ಲ. (ಅದುದರಿಂದ ನೌಖಾಲಿಗೆ ಅಗಸ್ಟ ೧೫ ರ ನಂತರ ಹೋಗಬೇಕೆಂದಿರುವ ಗಾಂಧೀಜಿ ಪಾಸ್ ಪೋರ್ಟ ಅಧಿಕಾರಿಗಳ ಕಡೆ ಎಡತಾಕಬೇಕಾಗುವದಿಲ್ಲ!) ಅಲ್ಲದೆ ಮಾರ್ಚ ೧೯೪೮ ರ ವರೆಗೆ ಇಲ್ಲಿಯ ನೋಟು ನಾಣ್ಯಗಳೇ ಅಲ್ಲಿಯೂ ಚಲಾವಣೆಯಲ್ಲಿರುವವು. ಆ ಮೇಲೆ ೬ ತಿಂಗಳು ಎರಡೂ ಕಡೆ ಇದು "ಪಾಕಿಸ್ತಾನ ಚಲಾವಣಿ" ಎಂಬ ಮುದ್ರೆ ಸಹಿತ ಅವು ಚಲಾವಣೆಯಲ್ಲಿದ್ದು ಆಯಾ ರಾಜ್ಯದ ಹಣ ಅಲ್ಲಿಗೆ ಮರಳಲು ಅವಕಾಶ ದೊರೆಯುವದು. ಆ ಮೇಲೆ ಪಾಕಿಸ್ತಾನ ತನ್ನದೇ ನೋಟು ನಾಣ್ಯಗಳ ವ್ಯವಸ್ಥೆ ಮಾಡಿಕೊಳ್ಳುವದು.

ಪಾಕಿಸ್ತಾನ ಘಟನಾ ಸಮಿತಿಯ ಸದಸ್ಯರ ಹೆಸರುಗಳು ಪ್ರಸಿದ್ಧವಾಗಿದ್ದು ಘಟನಾ ಸಮಿತಿ ಅಗಸ್ಟ ೧೭ ಕ್ಕೆ ಸೇರುವದು. ಮುನ್ನಾದಿನ ಸಮಿತಿಯ ಲೀಗ ಸದಸ್ಯರ ಸಭೆ ಜರಗುವದು.

ಸೀಖರ ಚಳವಳಿ

ಇಷ್ಟೆಲ್ಲ ನಡೆದಿರುವಾಗ ವಿಶೇಷ ಅಸಂತುಷ್ಟಿಯಲ್ಲಿರುವವರೆಂದರೆ ಪಂಜಾಬದ ಸೀಖರು. ಅವರ ಪರಿಸ್ಥಿತಿ ನಿಜವಾಗಿ ಚಿಂತಾಜನಕವಾಗಿದೆಯೆಂದು ಗಾಂಧೀಜಿಯೆ ಒಪ್ಪಿದ್ದಾರೆ. ಅವರು ಹಿಂದುಸ್ತಾನದಲ್ಲರ್ಧ ಪಾಕಿಸ್ತಾನದಲ್ಲರ್ಧ ಹಂಚಿಹೋಗುತ್ತಾರೆ. ಅದರಿಂದಾಗುವ ದುಷ್ಪರಿಣಾಮವನ್ನು ಸಕಾಲದಲ್ಲೆ ತಡೆಯಲು ಅವರು ಆಕಾಶಪಾತಾಳ ಒಂದು ಮಾಡುತಿದ್ದಾರೆ. ಮೊನ್ನೆ ನಾನಕಾನಾದಲ್ಲಿ ಅವರು ಅಧಿಕಾರಿಗಳ ಆಜ್ಞೆ, ಸರ್ಪಗಾವಲುಗಳನ್ನುಲ್ಲಂಘಿಸಿ ಅಖಿಲ ಪಂಜಾಬ ಸೀಖ ಪರಿಷತ್ತನ್ನು ಸೇರಿಸಿ ತಮ್ಮ ಬೇಡಿಕೆಗಳನ್ನು ಮುಂಡಿಸಿದರು. ಗಡಿ ನಿರ್ಧಾರಯಕ ಸಮಿತಿಗಳ ನಿರ್ಣಯವನ್ನು ಎರಡೂ ಸಾಮಂತ ಸರಕಾರಗಳು ಒಪ್ಪಿದರೂ ಅದು ತಮಗೆ ಅನ್ಯಾಯ ಮಾಡಿದರೆ ಅದನ್ನೆಂದೂ ತಾವೊಪ್ಪಲಾರೆವೆಂದೂ ಶಿರೋಮಣಿ ಅಕಾಲಿ ದಲದ ಅಧ್ಯಕ್ಷರು ಸಾರಿದ್ದಾರೆ. ಅವರ ಬೇಡಿಕೆಗಳು ಇಂತಿವೆ: ಸೀಖರ ವಸತಿ ಹೆಚ್ಚಾಗಿರುವ ಭಾಗಗಳು ಅದಷ್ಟು ಹೆಚ್ಚು ಹಿಂದೀ ಒಕ್ಕೂಟದಲ್ಲಿ ಸೇರಿಸಲ್ಪಡಬೇಕು; ಸೀಖರ ಗುರುದ್ವಾರಗಳಲ್ಲಿ ಅಧಿಕಾಂಶವೂ ಗುರುನಾನಕರ ಜನ್ಮಕ್ಷೇತ್ರವೂ ತಮಗೆ ದೊರೆಯಬೇಕು; ಅರ್ಥಾತ್ ಸೀಖರ ಜನಸಂಖ್ಯೆಯಲ್ಲಿ ಅದಷ್ಟು ಹೆಚ್ಚು ಜನ ಒಕ್ಕೂಟದಲ್ಲಿ ಬರುವಂತೆ ಗಡಿ ಎಳೆಯಬೇಕು. ನಾನಕಾನಾದಲ್ಲಿ ಪ್ರಕ್ಷುಬ್ಧ ಪರಿಸ್ಥಿತಿಯುಂಟು.

ಸಂಸ್ಥಾನಗಳ ನಿರ್ಣಯ

ಜುಲೈ ೨೫ ರಿಂದ ದಿಲ್ಲಿಯಲ್ಲಿ ನಡೆದ ಸಂಸ್ಥಾನಿಕರ ಪರಿಷತ್ತಿನಲ್ಲಿ ಲಾರ್ಡ ಲುಯಿ ಮೌಂಟಬ್ಯಾಟನ್ನರು ನರೇಂದ್ರರಿಗೆ ಹೇಳಿದ ಅನೇಕ ಕಿವಿಮಾತುಗಳು ಇಚ್ಛಿತ ಪರಿಣಾಮ ಮಾಡಿವೆಯೆಂದು ತೋರುತ್ತವೆ. ಈಗ ಹಿಂದೀ ಒಕ್ಕೂಟದಲ್ಲಿ ಸೇರದಿದ್ದ ೮ ನರೇಂದ್ರರು ಮೋಸ ಹೋದವರೆಂದು ಅವರು ಮನವರಿಕೆ ಮಾಡಿಕೊಳ್ಳಬೇಕು. ಪರಿಣಾಮವಾಗಿ ತಿರ್ವಾಂಕೂರು, ಹೈದರಾಬಾದಗಳ ನಿಲುವೆ ಸ್ವಲ್ಪ ಮಿದುವಾಗಿದೆ. ತಿರ್ವಾಂಕೂರು ಮಹಾರಾಜರು ಕೆಲವೊಂದು ಕರಾರು ಹಾಕಿ ಹಿಂದೀ ಒಕ್ಕೂಟದಲ್ಲಿ ಸೇರಲು ಒಪ್ಪಿದ್ದಾರೆಂದು ವಿಶ್ವಸನೀಯವಾಗಿ ತಿಳಿಯುತ್ತದೆ. ವಿದೇಶ, ಸಂಪರ್ಕ ಮತ್ತು ಸಂರಕ್ಷಣೆಯ ಅಧಿಕಾರಗಳನ್ನು ಕೆಲವೊಂದು ಕರಾರುಗಳಿಗೊಳಪಟ್ಟು ಅವರು ಒಕ್ಕೂಟಕ್ಕೆ ಬಿಟ್ಟುಕೊಡಲು ಸಿದ್ಧರಾಗಿದ್ದಾರೆ. ಆದರೆ ಬ್ರಿಟನ ಮೊದಲಾದವುಗಳೊಡನೆ ವ್ಯಾಪಾರಿ ಸಂಬಂಧವಿಡಲು ಹಾಗು ಹಿಂದುಸ್ತಾನ ಸರಕಾರದ ಮೂಲಕ ಪಾಕಿಸ್ತಾನದಲ್ಲಿ ಪ್ರತಿನಿಧಿಗಳನ್ನಿಡಲು ಅವರಿಗೆ ಹಕ್ಕು ಬೇಕಂತೆ. ಹೈದರಾಬಾದಾದರೂ ಹೆಚ್ಚು ಕಡಿಮೆ ಇವೇ ಕರಾರುಗಳ ಮೇಲೆ ಒಕ್ಕೂಟದಲ್ಲಿ ಸೇರಲು ಒಪ್ಪಿದೆಯಂತೆ. ಆದರೆ ಅಲ್ಲಿ ಈ ಬಗ್ಗೆ ಮಂತ್ರಿಮಂಡಲದಲ್ಲಿ ಒಡಕುಂಟಾಗಿದೆಯೆಂದು ಸುದ್ದಿ. ಮುಖ್ಯ ಮಂತ್ರಿ ಛತ್ತಾರಿ ನವಾಬರು ದಿಲ್ಲಿಯಿಂದ ಹೈದರಾಬಾದಿಗೆ ಬಂದು ನಿಜಾಮರನ್ನು ಕಂಡು ತಿರುಗಿ ದಿಲ್ಲಿಗೆ ಹೋದರು. ನಿಜಾಮರು ಹಾಕಿದ ಕರಾರುಗಳಲ್ಲಿ ವರ್ಹಾಡ ತಿರುಗಿ ಕೊಡಬೇಕೆಂಬದೊಂದಿರಬಹುದೆಂದು ಸಂದೇಹವುಂಟಾಗಿದೆ. ನಿಜಾಮರನ್ನು ಮನವೊಲಿಸಲು ಮೌಂಟಬ್ಯಾಟನ್ನರು ಅಗಸ್ಟ ಆರಂಭದಲ್ಲಿ ಹೈದರಾಬಾದಿಗೆ ಬರುವವರಿದ್ದಾರೆ. ಆದರೆ ಹೈದರಾಬಾದ ಮುಸ್ಲಿಮರ ಸಂಸ್ಥೆಯಾದ ಇತ್ತಿಹಾದುಲ್ ಮುಸ್ಲಿಮೀನ್ ಮುಂದಾಳುಗಳು ನಿಜಾಮರು ಒಕ್ಕೂಟ ಸೇರಿದರೆ ತಾವು ಹಿಂಸಾತ್ಮಕ ಹೋರಾಟವನ್ನು ಪ್ರಾರಂಭಿಸುವ ಬೆದರಿಕೆ ಹಾಕಿದ್ದಾರೆ.

ಘಟನಾ ಸಮಿತಿಯ ಮುನ್ನಡೆ

ಘಟನಾ ಸಮಿತಿಯ ಜುಲೈ ಅಧಿವೇಶನ ಈ ಸಂಚಿಕೆ ಹೊರಬೀಳುವ ಮೊದಲೆ ಮುಗಿದು ಹೋಗುವದು. ಅಗಸ್ಟ ೧೪ ಕ್ಕೆ ಅದು ಸ್ವಾತಂತ್ರ್ಯೋತ್ಸವಕ್ಕೋಸ್ಕರ ಸೇರಿ ಆ ಮೇಲೆ ಈ ನಿಮಿತ್ತ ಸೂಟಿ ತೆಗೆದುಕೊಂಡು ತಾ. ೨೦ ಕ್ಕೆ ಸೇರಿ ಮುಂದಿನ ಕಾರ್ಯಗಳನ್ನು ನಡೆಸುವದು. ಸಾಧಾರಣ ೧೦ ದಿನಗಳಲ್ಲಿ ಆ ಅಧಿವೇಶನ ಮುಗಿಯಬಹುದೆಂದು ಅಧ್ಯಕ್ಷ ಡಾ. ರಾಜೇಂದ್ರಪ್ರಸಾದರು ತಿಳಿಸಿದ್ದಾರೆ.

ಈ ವಾರದಲ್ಲಿ ಘಟನಾ ಸಮಿತಿಯ ಈ ವಾರದ ಕಾರ್ಯಕಲಾಪಗಳನ್ನು ಸಂಕ್ಷಿಪ್ತವಾಗಿ ಹೀಗೆ ರೇಖಿಸಬಹುದು.

● ಒಕ್ಕೂಟದ ಅಧ್ಯಕ್ಷರ ಆಯ್ಕೆಯ ಕ್ರಮ: ಕೇಂದ್ರ ಪಾರ್ಲಿಮೆಂಟಿನ ಮೇಲ್ಮನೆ ಮತ್ತು ಕೆಳಮನೆಗಳ ಸದಸ್ಯರಿಂದ ಮತ್ತು ಒಕ್ಕೂಟದ ವಿವಿಧ ಘಟಕಗಳ ಶಾಸನ ಸಭೆಗಳ ಸದಸ್ಯರಿಂದ ಕೂಡಿದ ಮತದಾರ ಸಂಘದಿಂದ ಅಧ್ಯಕ್ಷರ ಆಯ್ಕೆಯಾಗಬೇಕು. ಆದರೆ ಮತಾಧಿಕಾರ ಲೋಕನಿಯುಕ್ತ ಸದಸ್ಯರಿಗೆ ಮಾತ್ರ ಇರಬೇಕಲ್ಲದೆ ನಾಮಕರಣ ಸದಸ್ಯರಿಗೆ ಇರತಕ್ಕದ್ದಲ್ಲ.

ಕೊನೆಯ ನಿಯಮವನ್ನು ಮೈಸೂರಿನ ಶ್ರೀ ಚಂಗಲರಾಯ ರೆಡ್ಡಿಯವರ ಸೂಚನೆಯ ಮೇರೆಗೆ ಸೇರಿಸಲಾಯಿತು. ಕೇಂದ್ರ ಮೇಲ್ಮನೆಗೆ ಆದಷ್ಟು ಮಟ್ಟಿಗೆ ಲೋಕನಿಯುಕ್ತ ಸದಸ್ಯರನ್ನೇ ಕಳಿಸುವಂತೆ ನರೇಂದ್ರರಿಗೆ ಒತ್ತಾಯ ಮಾಡುವದೇ ಅದರ ಉದ್ದೇಶ.

ಒಕ್ಕೂಟ ಅಧ್ಯಕ್ಷರನ್ನು ಸಾರ್ವತ್ರಿಕ ಪ್ರೌಢ ಮತದಾನದಿಂದ ಆರಿಸಬೇಕು, ಒಮ್ಮೆ ದಕ್ಷಿಣ ಹಿಂದುಸ್ತಾನದಿಂದ ಇನ್ನೊಮ್ಮೆ ಉತ್ತರದಿಂದ ಮತ್ತೊಮ್ಮೆ ಸಂಸ್ಥಾನಗಳಿಂದ ಅಧ್ಯಕ್ಷರ ಆಯ್ಕೆಯಾಗಬೇಕೆಂದಿತ್ಯಾದಿಯಾಗಿ ಸೂಚಿಸುವ ತಿದ್ದುಪಡಿಗಳು ನಿರಾಕರಿಸಲ್ಪಟ್ಟವು.

● ರಾಷ್ಟ್ರಪತಿ ಎರಡು ಸಾರೆ ಮಾತ್ರ ಆಯ್ಕೆಗೆ ಅರ್ಹನಾಗಿದ್ದಾನೆ. ಅವನ ಅಧಿಕಾರಾವಧಿ ೫ ವರ್ಷ. ಅವನು ಯಾವದೇ ಸಂಬಳ ಪಡೆಯುವ ಸರಕಾರಿ ಅಥವಾ ಇತರ ನೌಕರಿಯಲ್ಲಿರಕೂಡದು. ಒಕ್ಕೂಟ ಅಥವಾ ಪ್ರಾಂತಿಕ ಶಾಸನ ಸಭೆಯ ಸದಸ್ಯನಿರಕೂಡದು. ಇದ್ದರೆ ಆಯ್ಕೆಯಾದೊಡನೆ ಆ ಸದಸ್ಯತ್ವಕ್ಕೆ ರಾಜೀನಾಮೆ ಕೊಡಬೇಕು.

ಅಧ್ಯಕ್ಷರ ಅಧಿಕಾರಗಳ ವಿಚಾರ ಮುಂದೆ ಹಾಕಲಾಗಿದೆ. ಆದರೆ ಗಂಡಾಂತರದಲ್ಲಿ ಸುಗ್ರೀವಾಜ್ಞೆ ಹೊರಡಿಸುವ ಅಧಿಕಾರ ಕೊಡಲಾಯಿತು.

● ಒಕ್ಕೂಟಕ್ಕೆ ಒಪ್ಪಿಸಲ್ಪಟ್ಟ ಅಧಿಕಾರಗಳನ್ನು ಸಂಸ್ಥಾನಗಳಲ್ಲಿ ಸಾಮಾನ್ಯವಾಗಿ ಸಂಸ್ಥಾನಿಕರೇ ಸಾಗಿಸತಕ್ಕದ್ದು. ಆದರೆ ಅವಶ್ಯ ತೋರಿದರೆ ಒಕ್ಕೂಟ ಸರಕಾರ ಈ ಅಧಿಕಾರಗಳನ್ನು ನಡೆಸಲು ತಾನೇ ಬೇರೆ ವ್ಯವಸ್ಥೆ



ಸ್ವತಂತ್ರ ಭಾರತದ ರಾಷ್ಟ್ರಧ್ವಜ

ಪಂ. ನೆಹರೂ ಅವರು ಘಟನಾ ಸಮಿತಿಯಲ್ಲಿ ಹೊಸ ರಾಷ್ಟ್ರಧ್ವಜವನ್ನು ಪ್ರದರ್ಶಿಸಿದ್ದು (೨೨—೭—೪೭)

ಅಂತರರಾಷ್ಟ್ರೀಯ

ಇಂಡೋನೇಶಿಯಾದ ಕಾಳಗ

ಕಳೆದ ವಾರ ಒಮ್ಮಿಂದೊಮ್ಮೆ ಇಂಡೋನೇಶಿಯಾದ ಪ್ರಜಾರಾಜ್ಯದ ಮೇಲೆ ಡಚ್ಚರು ಹೂಡಿದ ಹೋರಾಟ ಇನ್ನೂ ಅವ್ಯಾಹತ ನಡೆದಿದೆ. ಎರಡೂ ಪಕ್ಷಗಳು ತಂತಮ್ಮ ವಿಜಯದ ಕತೆಗಳನ್ನೆ ಹೇಳುತಿದ್ದರೂ ಪರಿಸ್ಥಿತಿ ಇನ್ನೂ ಗೊಂದಲದಲ್ಲಿಯೆ ಇದೆ. ಡಚ್ಚರು ಬಲಿಷ್ಠ ಭೂದಲಗಳನ್ನೂ ಟ್ಯಾಂಕ್ ವಿಮಾನ ಮೊದಲಾದವುಗಳನ್ನೂ ಉಪಯೋಗಿಸುತಿರುವರಲ್ಲದೆ ಸ್ವಾತಂತ್ರ್ಯವಾದಿಗಳ ಹಿನ್ನೆಲದಲ್ಲಿ ಕೊಡೆ ವೈಮಾನಿಕರನ್ನೂ ಇಳಿಸುತಿದ್ದಾರೆ. ಉತ್ತರ ಮತ್ತು ಪೂರ್ವ ಜಾವಾದಲ್ಲಿ ಡಚ್ ಪಡೆಗಳು ಅನೇಕ ಮೈಲು ಮುನ್ನುಗ್ಗಿದ್ದರೂ ಇಂಡೋನೇಶಿಯನ್ ಸರಕಾರದ ರಾಜಧಾನಿಯಾದ ಜೋಗಜಕಾರ್ತಾದ ಮೇಲಿನ ಅವರ ಲಗ್ಗೆಯನ್ನು ತಡೆಹಿಡಿಯಲಾಗಿದೆಯೆಂದು ತಿಳಿಯುತ್ತದೆ. ಪ್ರಾರಂಭಿಕ ಸೋಲಿನ ನಂತರ ಪ್ರಜಾರಾಜ್ಯಾಧ್ಯಕ್ಷ ಡಾ ಸೊಕರ್ನೊ ಅವರ ಹುರಿಕಟ್ಟಿನ ಆಕಾಶವಾಣಿಯಿಂದ ಉತ್ತೇಜಿತರಾದ ಸ್ವಾತಂತ್ರ್ಯ ಪ್ರೇಮಿ ಸೈನಿಕರು ಪ್ರತಿದಾಳಿಯನ್ನು ಕೈಕೊಂಡು ಮಹತ್ವದ ನಗರವಾದ ಮೊಜಕಾರ್ತೊವನ್ನು ಪುನಃ ಸಂಪಾದಿಸಿದರೆಂದು ಹೇಳಲಾಗಿದೆ. ಆದರೆ ಚೆರಿಬಾನ ಮೊದಲಾದ ಕೆಲ ಪಟ್ಟಣಗಳು ಡಚ್ಚರ ವಶವಾಗಿವೆ. ಉತ್ತರ ಕರಾವಳಿಯಲ್ಲಿ ತಮಗೆ ವಿಜಯ ದೊರೆತಿದೆಯೆಂದು ಡಚ್ಚರು ಹೇಳುತಿದ್ದರೂ ಸ್ವಾತಂತ್ರ್ಯವಾದಿಗಳ ಪ್ರತಿಭಟನೆ ತೀಕ್ಷ್ಣವಾಗುತಿದೆಯೆಂದೊಪ್ಪಿಕೊಂಡಿದ್ದಾರೆ. ಒಂದು ಮಾತಿನಲ್ಲಿ ಇಂಡೋನೇಶಿಯಾದ ಮಿಲಿಟರಿ ಪರಿಸ್ಥಿತಿಯನ್ನು ಬಣ್ಣಿಸಬೇಕಾದರೆ, ಜಾವಾದಲ್ಲಿ ಡಚ್ಚರ ಕೈಮೇಲಾಗುತಿದ್ದರೆ ಸುಮಾತ್ರದಲ್ಲಿ ಸ್ವಾತಂತ್ರ್ಯವಾದಿಗಳು ಪ್ರಾಬಲ್ಯ ತೋರುತಿದ್ದಾರೆ. ಅಲ್ಲಿ ತಾವು ಡಚ್ಚರ ಯುದ್ಧಪೂರ್ವ ರಾಜಧಾನಿಯಾದ ಮೈದಾನ ನಗರವನ್ನು ಕಸಿದುಕೊಂಡಿರುವದಾಗಿ ಸ್ವಾತಂತ್ರ್ಯವಾದಿಗಳು ಹೇಳುತ್ತಾರೆ.

ಡಚ್ಚರ ಉದ್ದೇಶವೇನು?

"ಪ್ರಜಾರಾಜ್ಯ ಸರಕಾರವನ್ನು ನಿರ್ನಾಮ ಮಾಡುವದೇ ಡಚ್ಚರ ಉದ್ದೇಶ"ವೆಂದು ಹಿಂದಿನ ಇಂಡೋನೇಶಿಯನ್ ಮುಖ್ಯಮಂತ್ರಿ ಡಾ. ಸುಲ್ತಾನ ಶಹರೀರರು ದಿಲ್ಲಿಯಲ್ಲಿ-ದೂರಿದರು. "ಇಂಡೋನೇಶಿಯಾದ ಪ್ರಜೆಗಳ ಮೇಲೆ ನಾವು ಯುದ್ಧ ಹೂಡಿಲ್ಲ" ಎಂದು ಡಚ್ಚರು ಹೇಳಿಕೊಂಡು ಬಡಪ್ರಜೆಗಳ ಸಂರಕ್ಷಕರೆಂಬ ಸೋಗು ಹಾಕಿದ್ದಾರೆ. ಸಾಮ್ಯವಾದಿ ರಾಷ್ಟ್ರೀಯರ ಪ್ರಾಬಲ್ಯವುಳ್ಳ ಸದ್ಯದ ಪ್ರಜಾರಾಜ್ಯ ಸರಕಾರದ ಮೇಲೆ ಡಚ್ಚರಿಗೆ ನಂಬಿಕೆಯಿಲ್ಲ. ನೂರುಗಟ್ಲೆ ಕೋಟಿ ರೂಪಾಯಿಗಳನ್ನು ರಬ್ಬರ್, ಕಾಫಿ, ಚಹಾ, ಸಿಂಕೋನಾ ತೋಟಗಳಲ್ಲಿಯೂ ಟಿನ್ ಮೊದಲಾದ ಖನಿಜಗಳ ಗಣಿಗಳಲ್ಲಿಯೂ ಸಕ್ಕರೆ ಮೊದಲಾದ ಕಾರಖಾನೆಗಳಲ್ಲಿಯೂ ತೊಡಗಿಸಿರುವ ಡಚ್ಚರು, ತಮ್ಮ ಬಂಡವಲಕ್ಕೆ ಎಷ್ಟೆ ರಕ್ಷಣೆಯನ್ನು ಕೊಡಲು ಪ್ರಜಾರಾಜ್ಯ ಸರಕಾರ ಸಿದ್ಧವಾದರೂ ಸಂತುಷ್ಟರಾಗುವಂತಿಲ್ಲ. ಪೋಲೀಸ ಪಡೆಯ ಮೇಲೂ ತಮ್ಮ ಹಿಡಿತ ಬೇಕೆಂದು ಅವರು ಹಟ ಹಿಡಿದಿದ್ದರ ಅರ್ಥ ಅಪ್ಪಟ ಕೈಗೊಂಬೆಗಳ ಸರಕಾರವನ್ನು ಸ್ಥಾಪಿಸಲು ಅವರು ಈಗಾಗಲೆ ಎಲ್ಲ ಸಿದ್ಧತೆಯನ್ನಿಟ್ಟಿದ್ದಾರೆಂದು ನಂಬಲಾಗಿದೆ. ಅಲ್ಲದೆ ಎಲ್ಲ ಬಗೆಯ ಪ್ರತ್ಯೇಕತಾಪ್ರವೃತ್ತಿಗೆ ಪ್ರೋತ್ಸಾಹ ಕೊಟ್ಟು ಇಂಡೋನೇಶಿಯಾವನ್ನು ಅನೈಕ್ಯಸಹೊದರಾಗಿ ಮಾಡಲು ಅವರು ಹವಣಿಸುತ್ತಿದ್ದಾರೆ. ಹಿಂದುಸ್ತಾನದಲ್ಲಿ ಮೊನ್ನೆ ಮೊನ್ನೆ ಬಂದಿಳಿದ ಡಚ್ ರಾಯಭಾರಿ ಇನ್ನೊಂದು ವಾರದಲ್ಲಿ ಇಂಡೋನೇಶಿಯಾದ ಯುದ್ಧ ಮುಗಿಯುವದೆಂದೂ ಆ ಮೇಲೆ ಮಾತುಕತೆ ನಡೆಸಬಹುದೆಂದೂ ಹೇಳಿದ್ದರ ಅರ್ಥ ರಹಸ್ಯಪೂರ್ಣವಾಗಿದೆ. ಅಂದ ಮೇಲೆ ಡಚ್ಚರು ಪೂರ್ಣ ಜಾವಾ, ಸುಮಾತ್ರಗಳನ್ನು ಆಕ್ರಮಿಸುವ ವಿಚಾರದಲ್ಲಿಲ್ಲವೆಂದಾಯಿತು. "ಮಿತವಾದ ಪೋಲೀಸ ಕ್ರಮ" ಎಂದು ಅವರು ಈ ಯುದ್ಧಕ್ಕೆ ಹೆಸರಿಟ್ಟಿದ್ದಾರೆ! ಬಹಳವಾಗಿ ಡಚ್ಚರು ಮೊದಲು ಪ್ರಮುಖ ಆಯಕಟ್ಟಿನ ಸ್ಥಳಗಳನ್ನೂ ಔದ್ಯೋಗಿಕ ಪ್ರದೇಶಗಳನ್ನೂ ತೋಟಗಳುಳ್ಳ ಭಾಗಗಳನ್ನೂ ಆಕ್ರಮಿಸಿಕೊಂಡು ತಮ್ಮ ಬಂಡವಲವನ್ನು ಭದ್ರಪಡಿಸಿ ಆ ಮೇಲೆ ದುರ್ಬಲ ಪ್ರಜಾರಾಜ್ಯದ ಮೇಲೆ ತಮ್ಮ ಇಚ್ಛೆಯನ್ನು ಹೇರಲು ಹವಣಿಸಿರುವಂತಿದೆ. ಇದಕ್ಕುತ್ತರವಾಗಿ ಜಾವಾದ ಕೂಲಿಕಾರರು, ಪಶ್ಚಿಮ ಜಾವಾದ ಮೇಲೆ ಡಚ್ಚರು ಏರಿಬಂದರೆ ಎಲ್ಲ ಚಹಾ, ಕಾಫಿ, ರಬ್ಬರ, ಸಿಂಕೋನ ತೋಟಗಳನ್ನು ನಿರ್ನಾಮ ಮಾಡುವದಾಗಿ ಪಣತೊಟ್ಟಿದ್ದಾರೆ.

ಯುಕ್ತರಾಷ್ಟ್ರ ಸಂಘಕ್ಕೆ ದೂರು

ಆದರೆ ಡಚ್ಚರ ಈ ಉದ್ದಂಡತನದ ಪರಿಣಾಮ ಅಂತರ್ರಾಷ್ಟ್ರೀಯ ರಂಗದಲ್ಲಿ ನಿರೀಕ್ಷಿಸಿದ್ದಕ್ಕಿಂತ ಹೆಚ್ಚು ಅಲ್ಲೋಲಕಲ್ಲೋಲವನ್ನುಂಟು ಮಾಡಿದೆ. ಜಗತ್ತಿನಲ್ಲೆಲ್ಲ ಕೂಲಿಕಾರರ ಪ್ರತಿಕ್ರಿಯೆ ಡಚ್ಚರ ಈ ಕ್ರಮವನ್ನು ವಿರೋಧಿಸಿದೆ. ಸ್ವತಃ ನೆದರ್ಲಂಡ್ಸದಲ್ಲಿಯೇ ರಾಷ್ಟ್ರೀಯ ನಾವಿಕ ಸಂಘದವರು ಇಂಡೋನೇಶಿಯಾದ ಯುದ್ಧಕ್ಕೆ ಸಾರಿಗೆಯನ್ನೊಯ್ಯಬಾರದೆಂದು ತಮ್ಮ ಸದಸ್ಯರಿಗೆ ಅಪ್ಪಣೆ ಮಾಡಿದ್ದಾರೆ. ಇಂಡೋನೇಶಿಯಾಕ್ಕೆ ಮಾತುಕತೆ ನಡೆಸಲು ಹೋಗಿದ್ದ ಡಚ್ ಶಿಷ್ಟಮಂಡಳರವರಿಗೂ ಈ ಯುದ್ಧ ಇಷ್ಟವಿಲ್ಲ. ಆಸ್ಟ್ರೇಲಿಯಾದ ಸಿಡ್ನೆಯಲ್ಲಿ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ಡಚ್ ಕ್ರಮವನ್ನು ಖಂಡಿಸಿ ಪ್ರದರ್ಶನಗಳನ್ನು ನಡೆಸಿದರು. ಇಂಡೋನೇಶಿಯಾಕ್ಕೆ ಹೊರಟ ಡಚ್ ಮಿಲಿಟರಿ ಹಡಗೊಂದಕ್ಕೆ ಮೇಲ್ಬೋರ್ನದಲ್ಲಿ (ಆಸ್ಟ್ರೇಲಿಯಾ) ಪೈಲಟ್ ಕೂಡ ದೊರೆಯಲಿಲ್ಲ.

● ಡಚ್ಚರ ದಿಗ್ಬಂಧನದಿಂದ ಪಾರಾಗಿ ಹಿಂದುಸ್ತಾನ ಸೇರಿದ ಹಿಂದಿನ ಇಂಡೋನೇಶಿಯನ್ ಮುಖ್ಯಮಂತ್ರಿ ಡಾ. ಶಹರೀರರು ಮಹತ್ವದ ಕೆಲಸ ಸಾಧಿಸಿದ್ದಾರೆ. ಅವರು ಪಂ. ನೆಹರೂ ಮತ್ತು ಜಿನ್ನಾ ಸಾಹೇಬರನ್ನು ಭೆಟ್ಟಿಯಾದರು. ಪರಿಣಾಮವಾಗಿ ನೆಹರೂ ಅವರು ನೆದರಲಂಡ್ಸ ರಾಯಭಾರಿಗೆ ಡಚ್ಚರನ್ನು ಖಂಡಿಸುವ ರಾಯಿಸವನ್ನು ಕಳಿಸಿದರು. "ಯಾವುದೇ ವಿದೇಶಿ ರಾಷ್ಟ್ರಕ್ಕೆ ಏಶಿಯಾದಲ್ಲಿ ಬಂದು ಕ್ರಮ ತೆಗೆದುಕೊಳ್ಳುವ ಅಧಿಕಾರವಿಲ್ಲ" ಎಂದು ಗರ್ಜಿಸಿದರವರು. ಇಂಡೋನೇಶಿಯಾಕ್ಕೆ ಸಾಧ್ಯವಾದ ಎಲ್ಲ ಸಹಾಯದ ಭರವಸೆಯನ್ನು ಅವರು ಕೊಟ್ಟಿದ್ದಾರೆ. ಹಿಂದುಸ್ತಾನದ ಮೂಲಕ ಹಾರಲು ಡಚ್ಚ ವಿಮಾನಗಳನ್ನು ಪ್ರತಿಬಂಧಿಸಲಾಗಿದೆ. ಅಮೇರಿಕನ್ ಮತ್ತು ಬ್ರಿಟಿಶ ಸರಕಾರಗಳಿಗೆ ಈ ವಿಷಯದಲ್ಲಿ ಕೈಹಾಕಿ ಇಂಡೋನೇಶಿಯಾದ ಯುದ್ಧವನ್ನು ನಿಲ್ಲಿಸಬೇಕೆಂದು ನೆಹರೂ ಅವರು ಕೇಳಿಕೊಂಡಿರುವದಲ್ಲದೆ ಇಂಡೋನೇಶಿಯಾದ ಪ್ರಜಾರಾಜ್ಯದ ಪರವಾಗಿ ಯುಕ್ತರಾಷ್ಟ್ರ ಭದ್ರತಾ ಮಂಡಲಕ್ಕೆ ಡಚ್ಚರ ವಿರುದ್ಧ ದೂರು ಕಳಿಸಿದ್ದಾರೆ. ಈ ಕ್ರಮ ತೆಗೆದುಕೊಳ್ಳುವ ಮೊದಲು ತಾವು ಇತರ ಸರಕಾರಗಳ —ಮುಖ್ಯವಾಗಿ ಪಾಕಿಸ್ತಾನದ— ಅಭಿಪ್ರಾಯವನ್ನು ಕೇಳಿಕೊಂಡಿರುವದಾಗಿ ಅವರು ಸಾರಿರುವದರಿಂದ ಭದ್ರತಾ ಮಂಡಲದಲ್ಲಿ ತುರುಸಿನ ಚರ್ಚೆಯಾಗುವಲ್ಲಿ ಸಂದೇಹವಿಲ್ಲ.

● ಬ್ರಿಟಿಶ ಸರಕಾರ ಇದರಿಂದ ಒಳ್ಳೆ ಇಕ್ಕಟ್ಟಿನಲ್ಲಿ ಸಿಕ್ಕಿದೆ. ತಾನು ಮಧ್ಯಸ್ಥಿಕೆ ನಡಸುವದಾಗಿ ಸೂಚಿಸಿ ಇದಕ್ಕೆ ಅಮೇರಿಕೆಯ ಬೆಂಬಲ ಪಡೆದರೂ ಗಮನಿಸದೆ ಡಚ್ಚರು ಯುದ್ಧಪ್ರಾರಂಭಿಸಿದ್ದರಿಂದ ಅದಕ್ಕೆ ಬೇಸರವಾಗಿದೆ. ಬ್ರಿಟಿಶ ಪತ್ರಿಕೆಗಳು ಡಚ್ಚರನ್ನು ತೀಕ್ಷ್ಣವಾಗಿ ಟೀಕಿಸಿವೆ. ಆದರೂ ಯುರೋಪಿನಲ್ಲಿ ತನಗಿರುವ ಅಳಿದುಳಿದ ಗೆಳೆಯರಲ್ಲೊಬ್ಬನನ್ನು ಕಳೆದುಕೊಳ್ಳಲು ಅದು ಹಿಂದೆಮುಂದೆ ನೋಡುತ್ತಲಿದೆ. ಈಗ ಹಿಂದುಸ್ತಾನ ಭದ್ರತಾಮಂಡಲಕ್ಕೆ ದೂರಿಟ್ಟಿರುವದರಿಂದ ಅದು ತನ್ನ ನಿಲುಮೆಯನ್ನು ಈಗಿಂದೀಗ ನಿರ್ಣಯಿಸಬೇಕಾಗಿ ಬಂದಿದೆ. ಇಂಡೋನೇಶಿಯನ್ನರು ವಹಿಸಿದ ನೀತಿ ಅಯೋಗ್ಯವೆಂದು ಅದು ಹೇಳಲಾರದು. ಆಸ್ಟ್ರೇಲಿಯನ್ ಸರಕಾರಕ್ಕೂ ದಿಗಿಲಾಗಿದೆ.

● ಅಮೇರಿಕೆಯಾದರೂ ಬಹಿರಂಗವಾಗಿ ಏನೂ ಹೇಳಲೊಲ್ಲದು. ಆದರೆ ಪಂ. ನೆಹರೂ ಅವರು ಕೈಕೊಂಡ ಧೋರಣೆ ಅಮೇರಿಕೆಗೆ ಸಮ್ಮತವಾಗಿದೆಯಂತೆ. ಡಚ್ಚರ ಅವಿಚಾರದ ಕ್ರಮದಿಂದ ಅಮೇರಿಕನ್ ವಿದೇಶ ಖಾತೆಗೆ ಚಿಂತೆಯುಂಟಾಗಿದೆಯಂತೆ. ಹಿಂದುಸ್ತಾನದ ದೂರಿಗೆ ಪಂಚ ಮಹಾರಾಷ್ಟ್ರಗಳ ಬೆಂಬಲ ದೊರಕಬಹುದು.

ಇಂಡೋಚೀನದಲ್ಲಿ ಭೇದನೀತಿ

ಇಂಡೋಚೀನದ ರಾಷ್ಟ್ರೀಯರನ್ನು ವಿದ್ಯುತ್ ದಾಳಿಯಿಂದ ಬಲು ಬೇಗನೆ ಹಣ್ಣು ಮಾಡುವ ಫ್ರೆಂಚರ ಹವಣು ಮಣ್ಣಾಯಿತು. ಹೋರಾಟ ಈಗ ನೆನೆಗುದಿಗೆ ಬಿದ್ದುಬಿಟ್ಟಿದೆ. "ನನ್ನ ಸಹನೆ ಮೀರಿದೆ. ಸದ್ಯದ ಸ್ಥಿತಿಯನ್ನು ಕೊನೆಗಾಣಿಸಲು ನಿರ್ಧರಿಸಿದ್ದೇನೆ" ಎಂದು ಇಂಡೋಚೀನದ ಫ್ರೆಂಚ ಹಾಯಕಮೀಶನರ ಬಲರೇ ಅವರು ಹೇಳಿ, "ಮಾತುಕತೆ ನಡೆಸಲು ನಾವು ಮಾಡಿದ ಪ್ರಯತ್ನಕ್ಕೆ ವೀಟನಾಮ ಸರಕಾರದ ಉತ್ತರವಿಲ್ಲ" ಎಂದು ದೂರಿಕೊಂಡರು. ವೀಟನಾಮ ಸರಕಾರದ ಅಧ್ಯಕ್ಷ ಹೋ-ಚಿ ಮಿನ್ಹರು ಸಂಧಾನಕ್ಕೆ ಬೇಕಾಗಿ ಬೇಡಿಕೊಂಡಾಗ ಫ್ರೆಂಚರು ಸೈನ್ಯಕ್ರಿಯೆಯನ್ನಾರಂಭಿಸಿದ್ದು ಫ್ರೆಂಚರಿಗೀಗ ಮರೆತುಹೋಗಿದೆ. ಮಿಲಿಟರಿ ನೆನಗುದಿಯಿಂದ ಬೇಸತ್ತು ಈಗ ಅವರು ಭೇದೋಪಾಯಕ್ಕೆ ಕೈಹಾಕಿದಂತಿದೆ. ವೀಟನಾಮ ರಾಷ್ಟ್ರೀಯರ ವಿರುದ್ಧ ಬೇರೆ ಇಂಡೋಚೀನೀಯರ ಕೈಗೊಂಬೆ ಪಕ್ಷ ಕಟ್ಟಲು ಅವರು ಉತ್ತೇಜನ ಕೊಡತೊಡಗಿದ್ದಾರೆ. ೧೯೪೫ ರಲ್ಲಿ ಅಧಿಕಾರ ತ್ಯಾಗ ಮಾಡಿದ ಅನ್ನಂ ಚಕ್ರವರ್ತಿ ಬಾವೋದಾಯಿಯನ್ನು ಮುಂದೆ ಮಾಡಿ "ರಾಷ್ಟ್ರೀಯ ಐಕ್ಯ ಮುಖ" ಎಂಬ ಕಮ್ಯುನಿಸ್ಟ ವಿರೋಧಿ ಪಕ್ಷವನ್ನು ಸಂಘಟಿಸುವ ಪ್ರಯತ್ನ ನಡೆದಿದೆ. ಬಾವೋದಾಯನೀಗ ಹಾಂಗಕಾಂಗನಲ್ಲಿ "ಶಾಂತಿ"ಯನ್ನರಸುತಿದ್ದು ರಾಷ್ಟ್ರಕ್ಕೆ ಹಿತವಾಗುವದಾದರೆ ತಾನು ಮುಂದಾಳತನ ವಹಿಸಬಹುದೆಂದು ಹೇಳಿದ್ದಾನೆ. ಆದರೆ ಈ ಹೊಸ ಪಕ್ಷದವರಾದರೂ ವೀಟನಾಮ ಸರಕಾರದವರಂತೆಯೆ ನಿಜವಾದ ಅಧಿಕಾರವನ್ನೆ ಬೇಡುತಿರುವದರಿಂದ ಫ್ರೆಂಚರು ಪೇಚಿನಲ್ಲಿ ಬಿದ್ದಿದ್ದಾರೆ.

ಚೀನಕ್ಕೆ ಸಹಾಯ

ರಶಿಯಾ-ಅಮೇರಿಕಾ ಮನಸ್ತಾಪ ಬೆಳೆದಂತೆ ಕಮ್ಯುನಿಸ್ಟ ವಿರೋಧಿಗಳೆಲ್ಲರ ಕೈಯನ್ನು ಬಲಗೊಳಿಸಲು ಅಮೇರಿಕೆ ಹಾತೊರೆಯುತ್ತದೆ. ಚೀನದಲ್ಲಿ ನಡೆದ ಅಂತರ್ಯುದ್ಧದ ಪರಿಸ್ಥಿತಿ ಅಸಹನೀಯ ಸ್ಥಿತಿಗೆ ಮುಟ್ಟಿದ್ದು ಚಿಯಾಂಗ್ ಕೈಶೇಕರ ಪ್ರತಿಷ್ಠೆ ದಿನದಿನಕ್ಕೆ ಕುಗ್ಗುತ್ತಿದೆ. ಯುದ್ಧವಿನ್ನೂ ಎಂದಿನಂತೆ ನೆನೆಗುದಿಯಲ್ಲಿಯೇ ಇದೆ. ಯೆನಾನ ಪ್ರಾಂತದಲ್ಲಿ ಕೆಲ ತಿಂಗಳಹಿಂದೆ ಕಮ್ಯುನಿಸ್ಟರ ವಿರುದ್ಧ ಚಿಯಾಂಗರಿಗೆ ದೊರೆತ ವಿಜಯದ ನಂತರ ಹೇಳಿಕೊಳ್ಳುವ ಯಶಸ್ಸು ಅವರಿಗೆ ದೊರೆತಿಲ್ಲ. ಇತ್ತ ಅತಿಪ್ರಸರಣ ಮನುಷ್ಯ ಕಲ್ಪನೆಗೆ ನಿಲುಕದಷ್ಟು ಬೆಳೆದಿದೆ. ಲಂಚಗುಳಿತನಕ್ಕೆ ಮಿತಿ ಮೇರೆಯಿಲ್ಲದಾಗಿದೆ. ಇಂಥ ಸ್ಥಿತಿಯಲ್ಲಿ ಚಿಯಾಂಗರ ಸರಕಾರ ಉರುಳಿ ಬೀಳುವ ಭಯವಿದೆ. ಚಿಯಾಂಗರ ಆಚಳಿತೆ ಅಮೇರಿಕೆಯ ಮನಸ್ಸಿಗೆ ಬಾರದಿದ್ದರೂ ಅವರನ್ನು ಉರುಳಗೊಡಲು ಅದು ಸಿದ್ಧವಿಲ್ಲ. ಅದಕ್ಕಾಗಿ ಚೀನಕ್ಕೆ ಸಹಾಯ ನೀಡುವ ವಿಷಯದಲ್ಲಿ ಪರಿಸ್ಥಿತಿಯನ್ನು ಅಭ್ಯಸಿಸಲು ಅಮೇರಿಕೆಯಿಂದ ಜನರಲ್ ವೆಡೆಮಿಯರರು ಚೀನಕ್ಕೆ ಬಂದಿದ್ದಾರೆ. ಪರಿಣಾಮವಾಗಿ ಕಮ್ಯುನಿಸ್ಟರ ವಿರುದ್ಧ ಚಿಯಾಂಗರ ನಿಲುಮೆ ಮತ್ತೆ ಬಿಗುವಾಗಿದೆ. ಅವರೊಡನೆ ಮಾತುಕತೆ ನಡೆಸುವದಿಲ್ಲವೆಂದು ಚಿಯಾಂಗರು ಸಾರಿದ್ದಾರೆ. ಅಮೇರಿಕನ್ನರಿಂದ ತರಬೇತಿ ಪಡೆದ ಚೀನಿ ಸೈನ್ಯವನ್ನು ಕಮ್ಯುನಿಸ್ಟರ ವಿರುದ್ಧ ಉಪಯೋಗಿಸಲಾಗುತಿದೆ. ಹೀಗೆ ಅಂತರ್ಯುದ್ಧಕ್ಕೆ ಇನ್ನಷ್ಟು ಪುಟ ದೊರೆಯುವದು.

ಅಫಗಾಣಿಸ್ತಾನಕ್ಕೆ ಎಚ್ಚರಿಕೆ

ಹಿಂದುಸ್ತಾನದ—ಅಥವಾ ಪಾಕಿಸ್ತಾನದ ಎನ್ನೋಣ—ವಾಯವ್ಯ ಗಡಿನಾಡ ಪ್ರಾಂತದ ಮೇಲೆ ಹಕ್ಕು ಮಂಡಿಸಿ ಅಫಗಾಣಿಸ್ತಾನ ನಡೆಸಿದ ಪ್ರಚಾರದಿಂದ ಬ್ರಿಟಿಶರು ದಿಗಿಲುಬಿದ್ದಂತೆ ತೋರುತ್ತದೆ. ಅಫಗಾಣಿಸ್ತಾನದ ಪ್ರಚಾರಕ್ಕೆ ಗಡಿನಾಡ ಮುಂದಾಳುಗಳದಾಗಲಿ ಹಿಂದೀ ಮುಂದಾಳುಗಳದಾಗಲಿ ಬೆಂಬಲವಿಲ್ಲವೆಂಬುದು ಸ್ಪಷ್ಟವಾಗಿದ್ದರೂ ಅಫಗಾಣಿಸ್ತಾನದ ಬೇಡಿಕೆ ಹಾಗೆಯೆ ಇದೆ. ಅದಕ್ಕಾಗಿ "ಇಂಥ ಪ್ರಚಾರದ ಅಪಾಯಕರ ಪರಿಣಾಮಗಳು ಎಂಥವಾಗಬಹುದೆಂದು ಗೊತ್ತಿದೆಯೆ?" ಎಂದು ಎಚ್ಚರಿಕೆ ಕೊಡುವ ರಾಯಸವೊಂದನ್ನು ಬ್ರಿಟಿಶ ಸರಕಾರ ಅದಕ್ಕೆ ಕೊಟ್ಟಿದೆ. ಹಿಂದುಸ್ತಾನದಲ್ಲಿ ಹೊರಗಿನವರು ಕೈಹಾಕದೆ ಸಾಕಷ್ಟು ತೊಡಕುಗಳಿವೆಯೆಂದು ಆ ರಾಯಸದಲ್ಲಿ ಹೇಳಲಾಗಿದೆ. ಬ್ರಿಟಿಶ ಕಾನ್ಜರ್ವೇಟಿವ ಪಕ್ಷದವರು ಈಗಾಗಲೆ "ನಾವು ಮೊದಲೇ ಹೇಳಿದ್ದೆವು. ಹಿಂದುಸ್ತಾನದಿಂದ ನಾವು ಹೊರಬಿದ್ದರೆ ಬೇರಾರಾದರೂ ಒಳಬರುವದು ಖಂಡಿತ" ಎನ್ನುತ್ತಿದ್ದಾರಂತೆ. ರಶಿಯಾದ ಪ್ರೇರಣೆಯಿಂದಲೇ ಅಫಗಾಣಿಸ್ತಾನ ಈ ಬೇಡಿಕೆಯನ್ನು ಮುಂದೊಡ್ಡಿದೆಯೆಂದು ಅವರ ತರ್ಕ. ಈಗ ಹಲವರ್ಷಗಳಿಂದ ಅಲ್ಲಿ ರಶಿಯಾದ ಪ್ರಭಾವ ಬೆಳೆಯುತಿದೆಯಂತೆ.

ಫ್ರೆಂಚ ಭಾರತಕ್ಕೆ ಸ್ವಾಯತ್ತತೆ?

ಹಿಂದುಸ್ತಾನದಲ್ಲಿ ಫ್ರೆಂಚರ ಐದು ಚಿಕ್ಕ ಚಿಕ್ಕ ವಸಾಹತುಗಳಿವೆ. (ಪಾಂಡಿಚೇರಿ, ಮಾಹೆ, ಚಂದ್ರನಗರ, ಕಾರೈಕಲ, ಯಾನಂ) ಅವುಗಳ ಭವಿತವ್ಯದ ವಿಷಯದಲ್ಲಿ ವಾದ ಈಗಾಗಲೆ ಪ್ರಾರಂಭವಾಗಿದೆ. ಸ್ವತಂತ್ರ ಹಿಂದುಸ್ತಾನದಲ್ಲಿ ಸೇರಲು ಅವಕ್ಕೆ ಅವಕಾಶ ಕೊಡಬೇಕೆಂದು ಹೇಳಲಾಗಿದೆ. ಆದರೆ ಫ್ರೆಂಚರು ಅವುಗಳನ್ನು "ಹಿಂದುಸ್ತಾನದೊಡನೆ ಫ್ರೆಂಚ ಸಾಂಸ್ಕೃತಿಕ ಸಂಪರ್ಕದ ಕೇಂದ್ರ"ವಾಗಿಟ್ಟುಕೊಳ್ಳಬೇಕೆನ್ನುತ್ತಾರೆ. ಈ ವಿಷಯದಲ್ಲಿ ಫ್ರೆಂಚ ಹಿಂದುಸ್ತಾನದಿಂದ ಫ್ರೆಂಚ ಪಾರ್ಲಿಮೆಂಟಿಗೆ ಸದಸ್ಯರಾಗಿ ಆರಿಸಿ ಹೋಗಿರುವ ಲ್ಯಾಂಬರ್ಟ ಸರವಸೆಯವರು ಮುಂಬರುವ ಪಾರ್ಲಮೆಂಟಿನ ಅಧಿವೇಶನದಲ್ಲಿ ಒಂದು ಮಸೂದೆ ಮಂಡಿಸುವವರಿದ್ದಾರೆ. ಫ್ರೆಂಚ ಒಕ್ಕೂಟದಲ್ಲಿ ಫ್ರೆಂಚ ಹಿಂದುಸ್ತಾನಕ್ಕೆ ಸ್ವಾಯತ್ತತೆಯನ್ನು ದಯಪಾಲಿಸಬೇಕೆಂಬುದು ಅವರ ಸಾರ. "ರಾಷ್ಟ್ರೀಯ ಮತ್ತು ಅಂತರ್‌ರಾಷ್ಟ್ರೀಯ ರಂಗದಲ್ಲಿ ಬೃಹತ್ತರ ಹಿಂದುಸ್ತಾನದ ಚಟುವಟಿಕೆಗಳಿಗೆ ಆತಂಕಪ್ರಾಯವಾಗದಂತೆ ಇರುವದಾದರೆ ಫ್ರೆಂಚರು ಈ ಐದು ವಸತಿಗಳಲ್ಲಿರಲು ಹಿಂದೀ ನಾಗರಿಕರಿಗೆ ಬೃಹತ್ತರ ಹಿಂದುಸ್ತಾನದಲ್ಲಿಯೂ ಹಿಂದುಸ್ತಾನ ನಾಗರಿಕರಿಗೆ ಫ್ರೆಂಚ ಭಾರತದಲ್ಲಿಯೂ ಸಮಾನ ನಾಗರಿಕ ಹಕ್ಕು ದೊರೆಯಬೇಕೆಂದು ಅವರು ಅಭಿಪ್ರಾಯ. ಆದರೆ ಫ್ರೆಂಚ ಸರಕಾರವಾಗಲಿ ಹಿಂದುಸ್ತಾನ ಸರಕಾರವಾಗಲಿ ಇದಕ್ಕೆ ಎಷ್ಟು ಅನುಕೂಲವಾಗಿರುವವೋ ಹೇಳಲಾಗಲ್ಲ.

ಬ್ರಹ್ಮದೇಶಕ್ಕೆ ಸ್ವಾತಂತ್ರ್ಯ

ಬ್ರಹ್ಮದೇಶದ ಸರಕಾರಕ್ಕೆ ಅಧಿಕಾರವನ್ನು ಬಿಟ್ಟುಕೊಡುವ ಸಲುವಾಗಿ ಮುಂದಿನ ಪಾರ್ಲಮೆಂಟ ಅಧಿವೇಶನದ ಪ್ರಾರಂಭದಲ್ಲಿ ಒಂದು ಮಸೂದೆಯನ್ನು ತರುವದಾಗಿ ಬ್ರಹ್ಮದೇಶ ಮಂತ್ರಿ ಲಾರ್ಡ ಲಿಸ್ಟೊವೆಲ್ಲರೂ ಮುಖ್ಯಮಂತ್ರಿ ಆಟ್ಲಿಯವರೂ ಬ್ರಿಟಿಶ ಪಾರ್ಲಿಮೆಂಟಿನಲ್ಲಿ ಕಳೆದವಾರ ಸಾರಿದರು. ಈ ಮಸೂದೆ ಆದಷ್ಟು ಬೇಗನೆ ಪಾಸಾಗುವಂತೆ ಪ್ರಯತ್ನಿಸುವದಾಗಿಯೂ ಅವರು ಹೇಳಿದರು. ಈ ನಡುವೆ ಸದ್ಯದ ಬ್ರಹ್ಮೀ ನಡುಗಾಲ ಸರಕಾರವೇ ವಾಸ್ತವಿಕ ಸ್ವತಂತ್ರ ಸರಕಾರವಾಗಿ ಪರಿಗಣಿಸಲ್ಪಡುವದು. ಎರಡೂ ದೇಶಗಳಲ್ಲಿನ ಶಿಷ್ಟಮಂಡಲಗಳನ್ನು ವಿನಿಮಯಗೊಳಿಸಿ, ಸಂರಕ್ಷಣೆ, ಹಣಕಾಸು ಮತ್ತು ಇತರ ವಿಷಯಗಳ ಮೇಲೆ ಒಪ್ಪಂದ ಮಾಡಿಕೊಳ್ಳಲು ಯತ್ನಿಸಲಾಗುವದು. ಬ್ರಹ್ಮದೇಶ ಬ್ರಿಟಿಶ ಸಾಮಂತ ಮಂಡಲದಿಂದ ಹೊಂದಿದ್ದರೂ ಸೌಹಾರ್ದ ಸಂಬಂಧವನ್ನಿಟ್ಟುಕೊಳ್ಳಲಾಗುವದೆಂದು ಹೇಳಲಾಯಿತು.

× × ×

ಬ್ರಹ್ಮದೇಶದ ಮಂತ್ರಿಗಳ ಕೊಲೆ ಮಾಡಿದ ಜನರು ಸೆರೆಸಿಕ್ಕಿದ್ದಾರೆಂದೂ ಯು. ಸಾ. ಅವರೇ ಈ ಎಲ್ಲ ಒಳಸಂಚಿನ ಮೂಲಜನಕರೆಂದೂ ತಿಳಿಯುತ್ತದೆ. ಯು ಸಾ ಅವರನ್ನು ವಿಚಾರಣೆಗೆ ಗುರಿಪಡಿಸಲಾಗುವದೆಂದು ಬ್ರಹ್ಮೀ ಸರಕಾರ ಸಾರಿದೆ. ಹೊಸ ಮಂತ್ರಿಗಳ ಸಭೆ ಸೈನಿಕ ಕಾವಲಿನಲ್ಲಿ ನಡೆಯುತ್ತಿದೆ.

ಜಪಾನದ ಶಾಂತಿ ಒಪ್ಪಂದದ ಬಗ್ಗೆ ವಿಚಾರ ಮಾಡಲು ಆಗಸ್ಟ ೧೯ಕ್ಕೆ ಸೇರಬೇಕೆಂದು ಗೊತ್ತುಪಡಿಸಿ ಕಳಿಸಿದ ಆಮಂತ್ರಣವನ್ನು ರಶಿಯಾ ನಿರಾಕರಿಸಿದೆ. ಅಮೇರಿಕೆಗೆ ಹೀಗೆ ಆಮಂತ್ರಣ ಕೊಡಲು ಹಕ್ಕಿಲ್ಲ. ವಿದೇಶಮಂತ್ರಿ ಪರಿಷತ್ತೊಂದೇ ಆಮಂತ್ರಣ ಕೊಡಬಲ್ಲದು. ಅಮೇರಿಕೆ ಉಳಿದವರನ್ನು ಕೇಳದೆ ತಾನೇ ಜಪಾನಿ ಒಪ್ಪಂದದ ವಿಷಯದಲ್ಲಿ ಇತರ ರಾಷ್ಟ್ರಗಳೊಡನೆ ಮಾತುಕತೆ ನಡೆಸಿರುವದು. ಇದು ಸರಿಯಲ್ಲವೆಂದು ರಶಿಯಾದ ವಾದ.

o o o

ಗ್ರೀಕ ಹಡಗೊಂದರಲ್ಲಿ ಹಿಂದುಸ್ತಾನಕ್ಕೆ ಬರುವಾಗ ಮುಳುಗಿಹೋದ ೪೧೦೦೦ ಟನ್ ಅಕ್ಕಿಯ ಬದಲಿಗೆ ಬೇರೆ ಅಕ್ಕಿಯನ್ನು ಹಿಂದುಸ್ತಾನಕ್ಕೆ ಪುನಃ ಕೊಡಿಸಬೇಕೆಂದು ಅಂತರ್ರಾಷ್ಟ್ರೀಯ ಆಹಾರಮಂಡಲ ನಿರ್ಧರಿಸಿದೆ.

o o o

ಇಂಗ್ಲಂಡಿನ ಮ್ಯಾಂಚೆಸ್ಟರ ಗಾರ್ಡಿಯನ್ ಪತ್ರಿಕೆ ಹಿಂದುಸ್ತಾನದಲ್ಲಿ ಇದೇ ತಿಂಗಳು ಒದಗುವ ಆಹಾರ ಬಿಕಟ್ಟಿನ ಬಗ್ಗೆ ಬರೆಯುತ್ತ ಹಿಂದುಸ್ತಾನವನ್ನು ವಿಪತ್ತಿನಿಂದ ಉಳಿಸಲು ಬ್ರಿಟನ್ನು ಔದಾರ್ಯ ತೋರಬೇಕೆಂದೂ ಕೆನಡಾದಿಂದ ತನಗೆ ಬರುವ ಧಾನ್ಯವನ್ನು ಹಿಂದುಸ್ತಾನಕ್ಕೆ ಕಳಿಸಬೇಕೆಂದೂ ಸೂಚಿಸಿದೆ. ಬ್ರಿಟನ್ನಿನಲ್ಲಿ ಅಕ್ಟೋಬರದ ವರೆಗೆ ಆಹಾರ ಕೊರತೆ ಬೀಳುವದಿಲ್ಲವಾದುದರಿಂದ ಈ ಔದಾರ್ಯ ಸಾಧ್ಯವಿದೆಯೆಂದು ಅದು ಹೇಳಿದೆ.

ದಿ. ಜೋಶಿ ಯಶವಂತರಾಯರು

ಶ್ರೀ ವಿ. ಕೃ. ಗೋಕಾಕರ ಅಭಿಪ್ರಾಯ

ಸಂಗ್ರಾಹಕರು:— ಶ್ರೀ ಗೋವಿಂದ ಮುತಾಲಿಕ ದೇಸಾಯಿ ಅವರು.

“ ೩೦ ವರ್ಷಗಳಿಗೆ ಮೇಲ್ಪಟ್ಟು ಸವಣೂರಿನ ಶಾಲೆಯಲ್ಲಿ ಅಧ್ಯಾಪಕರಾಗಿಯೂ ಪ್ರಾಧ್ಯಾಪಕರಾಗಿಯೂ ದುಡಿದು ಒಳ್ಳೆಯ ಶಾಲೆಗಳ ಶ್ರೇಣಿಯಲ್ಲಿ ಆ ನಮ್ಮ ಶಾಲೆಯನ್ನು ತಂದು ನಿಲ್ಲಿಸಿದ ಶ್ರೇಯಸ್ಸು ದಿವಂಗತ ಶ್ರೀಮಾನ್ ಜೋಶಿ ಯಶವಂತರಾಯರದು. ಅವರ ಆಯುಷ್ಯವೆಲ್ಲ ಒಂದು ರೀತಿಯಿಂದ ಇದೇ ಶಾಲೆಯಲ್ಲಿ ಸವೆಯಿತೆನ್ನಬಹುದು. ವಿದ್ಯಾರ್ಥಿಯಾಗಿ, ಅಧ್ಯಾಪಕರಾಗಿ, ಪ್ರಾಧ್ಯಾಪಕರಾಗಿ ಈ ಶಾಲೆಯಲ್ಲಿ ಅವರು ಬೆಳೆದರು; ಅದನ್ನು ಬೆಳೆಯಿಸಿದರು. ಅವರ ಕಾರ್ಯವು ಸಫಲವಾಯಿತು. ನೂರಾರು ವಿದ್ಯಾರ್ಥಿಗಳು ಅವರ ಕೃಪಾಛತ್ರದಲ್ಲಿ ಬೆಳೆದರು. ಇನ್ನು ಕೆಲವು ವರ್ಷಗಳು ಗಳಿಂದ ಮೇಲೆ ಅವರ ವಿದ್ಯಾರ್ಥಿ ವೃಂದವೆಲ್ಲಾ ಕೂಡಿ ಅವರನ್ನು ಸನ್ಮಾನಿಸುವ ಸುಯೋಗವು ಬರಬಹುದಾಗಿತ್ತು. ಆದರೆ ವಿಧಿಯು ಹಾಗೆ ಬಯಸಲಿಲ್ಲ. ಇಂಥ ಯೋಗಾಯೋಗವು ಬರುವದಕ್ಕಿಂತ ಮುಂಚಿತವಾಗಿಯೇ ಅದು ಯಶವಂತರಾಯರನ್ನು ಕಬ್ಳಿಕೊಂಡು ಹೋಯಿತು. ಅಕಾಲ ಮರಣವು ಅವರನ್ನು ಅವರಿಸಿ ಅವರ ಬಂಧುವರ್ಗವನ್ನೂ ವಿದ್ಯಾರ್ಥಿಗಳನ್ನೂ ಅಪಾರ ದುಃಖದಲ್ಲಿ ಮುಳುಗಿಸಿತು.

ಯಶವಂತರಾಯರು ಮೊದಲಿನಿಂದ ಬುದ್ಧನ ಅಹಿಂಸೆಗೂ ಕರುಣೆಗೂ ಮೋಹಿಸಿದ್ದರು. ಬುದ್ಧನು ತಮ್ಮ ಆದರ್ಶ ಪುರುಷನೆಂದು ಅವರು ಅನೇಕ ಸಲ ನಮಗೆ ಹೇಳಿದ್ದುಂಟು. ಬುದ್ಧನು ಉಪದೇಶಿಸಿದ ಕರುಣೆ, ಸಾತ್ವಿಕತೆ ಹಾಗೂ ಉದಾತ್ತ ನೀತಿಗಳು ಮೊದಲಿನಿಂದ ಯಶವಂತರಾಯರನ್ನು ಆಕರ್ಷಿಸಿದವು. ನಾನು ಶಾಲೆಯಲ್ಲಿ ೬ ನೆಯ ಇಯತ್ತೆಯಲ್ಲಿ ಇದ್ದಾಗ ಅವರು ಶಿಕ್ಷಕರಾದರು. ಅಂದಿನಿಂದ ಅವರ ಶೀಲ ಸೌಜನ್ಯಗಳು ಅವರ ವಿದ್ಯಾರ್ಥಿಗಳಿಗೆ ಮಾದರಿಯಾದವು. ಯಶವಂತರಾಯರಲ್ಲಿ ನೆಲೆಗೊಂಡ ಸತ್ವವು ಸಕಲರಿಗೂ ಕಲ್ಯಾಣಕರವಾಯಿತು. ಅವರ ವಿಷಯದಲ್ಲಿ ಅವರ ಪ್ರೀತಿಗೊಳ್ಳದ ಒಬ್ಬ ವಿದ್ಯಾರ್ಥಿಯು ಆ ಶಾಲೆಯಲ್ಲಿ ಕಾಲಿಟ್ಟಿರಲಾರ. ವಿದ್ಯಾರ್ಥಿಗಳ ಪ್ರಗತಿಗಾಗಿಯೇ ಅವರು ತಮ್ಮ ಜೀವನವನ್ನು ಮುಡಿಪಿಟ್ಟರು. ಜಗತ್ತಿನಲ್ಲಿ ಅವರಿಗೆ ಗೊತ್ತಿದ್ದ ಜಾತಿಗಳೆಂದರೆ ಎರಡೇ ಎರಡು, ಒಂದು ಕಲಿಸುವವರದು; ಇನ್ನೊಂದು ಕಲಿಯುವವರದು. ಜ್ಞಾನಕ್ಕಾಗಿ ತಮ್ಮ ಬಾಗಿಲಿಗೆ ಬಂದ ಎಲ್ಲ ವಿದ್ಯಾರ್ಥಿಗಳಿಗೆ ಯಶವಂತರಾಯರು ಮುಕ್ತಹಸ್ತದಿಂದ ನೀಡಿದರು. ಹಣದ ಬಯಕೆ ಇಲ್ಲದೆ ವಿದ್ಯೆಯನ್ನು ಧಾರೆಯೆರೆದರು. ಅವರ ಮನೆಯಲ್ಲಿಯ ಕೋಣೆಗಳು ಬಡ ವಿದ್ಯಾರ್ಥಿಗಳಿಗಾಗಿ ಮೀಸಲಿದ್ದವು. ಕಲಿಸುವ ದೃಷ್ಟಿಯಿಂದ ಅವರಿಗೆ ಅವರ ಮನೆಯೇ ಒಂದು ಶಾಲೆಯಾಗಿತ್ತು.

ನಾನು ಮೆಟ್ರಿಕ್ ಪಾಸಾಗಿ ಕಾಲೇಜಿಗೆ ಹೋದಾಗ ಗಣಿತವು ಇಷ್ಟು ಅವಶ್ಯಕ ವಿಷಯಗಳಲ್ಲಿ ಒಂದಾಗಿತ್ತು. ಅದು ನನಗೆ ರುಚಿಸದ ವಿಷಯ, ಮೊದಲನೆಯ ಟರ್ಮು ಮುಗಿಸಿಕೊಂಡು ಆಕ್ಟೋಬರ ರಜೆಗೆ ತಿರುಗಿ ಬಂದಾಗ ಒಂದು ತಿಂಗಳವರೆಗೆ ಮನೆಗೆ ಕರೆದು ಯಶವಂತರಾಯರು ನನಗೆ ತಿಳಿಯದ ವಿಷಯವನ್ನು ತಿಳಿಸಿಕೊಟ್ಟರು. ಇದರಂತೆ ನೂರಾರು ವಿದ್ಯಾರ್ಥಿಗಳು ಅವರಿಂದ ಸಹಾಯವನ್ನು ಪಡೆದಿರಲು ಸಾಕು.

ಇಂಥ ವಿಲಕ್ಷಣ ಲೋಕ-ಸಂಗ್ರಹ ಶಕ್ತಿಯೂ ತ್ಯಾಗವೂ ಅವರಲ್ಲಿ ಮನೆಮಾಡಿಕೊಂಡಿದ್ದರಿಂದ ಅವರ ಹೆಸರು ಸವಣೂರಲ್ಲಿಯೂ ಸುತ್ತಮುತ್ತಲಿನ ಊರುಗಳಲ್ಲಿಯೂ ಮನೆ ಮಾತಾಯಿತು. ಜೀವಂತವಾಗಿ ಜೀವನದಲ್ಲಿ ಅರಳುವದೇ ಕೀರ್ತಿಯೆಂದು ಬಲ್ಲವರು ಹೇಳುತ್ತಾರೆ. ಇಂಥ ಕೀರ್ತಿಯು ಯಶವಂತರಾಯರಿಗೆ ಬಹಳ ಸಾಧಿಸಿತು. ಇದಕ್ಕಿಂತ ಹೆಚ್ಚಿನ ಕೀರ್ತಿಯೂ ಇದೆ ?

ವಿದ್ಯಾರ್ಥಿಗಳೊಡನೆ ಸಡೆದುಕೊಂಡು ಅವರ ಪ್ರೀತಿ ಆದರಗಳನ್ನು ಪಡೆದ ವಿದ್ಯಾಗುರುಗಳು ಇಂದು ಲಯವಾದರು. ಒಂದು ಗುಡ್ಡದ ಎದುರಿಗೆ ಇರುವ ಮಾನಸ್ತಂಭದಂತೆ ಅವರ ನಿಲುವು, ವ್ಯಕ್ತಿತ್ವ ಅವರ ನೈತಿಕ ವ್ಯಕ್ತಿತ್ವವು ಅದೇ ಉನ್ನತಿಯನ್ನು ಪಡೆದಿದ್ದಿತು. ಇಂಥ ಮಾನಸ್ತಂಭ ಮರೆಯಾದಾಗ ಕಣ್ಣೀರಿಡದ ಜಾಣರು ಯಾರು ? ಯಾವ ಸಂಕಲ್ಪವು ಆ ಮಾನಸ್ತಂಭವನ್ನು ಮರೆಯಾಗಿಸಿತೋ ನಮಗೆ ತಿಳಿಯದು. [illegible] ಆದರೆ ನೆನಪು ಮಾತ್ರ ಶಾಶ್ವತವಾಗಿ [illegible]

ಆಹಾರೋತ್ಪಾದನ

ಹಿಂದುಸ್ತಾನ ಸರಕಾರಕ್ಕೆ ಬಿದ್ದ ಖರ್ಚು

ಹೆಚ್ಚು ಆಹಾರವನ್ನು ಬೆಳೆಸಲು ಹಲವು ಯೋಜನೆಗಳನ್ನು ಕೈಕೊಳ್ಳಲು ಪ್ರಾಂತ ಸರಕಾರಗಳಿಗೆ ಸಾಲವಾಗಿ ಮತ್ತು 'ಗ್ರ್ಯಾಂಟ್' ಆಗಿ ಹಿಂದುಸ್ತಾನ ಸರಕಾರ ಕೊಟ್ಟುದರ ಫಲವಾಗಿ ಅದಕ್ಕೆ ೧೯೪೬ ನೆಯ ಜನವರಿ ೧೫ ರ ವರೆಗೆ ತಗಲಿದ ಖರ್ಚು ಈ ಕೆಳಗಿನಂತಿದೆ—

(ಲಕ್ಷ ರೂಪಾಯಿಗಳ ಲೆಕ್ಕದಂತೆ)

ಪ್ರಾಂತ	ಸಾಲ	ಗ್ರ್ಯಾಂಟು
ಆಸಾಮು	೪೯.೭೭	೨೯.೧೬
ಬಂಗಾಲ	೧೬೮.೪೬	೧೧೨.೯೯
ಬಿಹಾರ	೯.೬೪	೫೯.೬೨
ಮುಂಬಯಿ	೧೬.೨೩	೧೪೦.೦೯
ಮಧ್ಯಪ್ರಾಂತ ವರ್‍ಹಾಡ	೧೪೮.೧೬	೭೫.೬೦
ಮದ್ರಾಸು	೧೯೧.೮೮	೨೯೯.೫೯
ಗಡಿನಾಡು	೨೬.೯೦	೩೦.೨೦
ಒರಿಸ್ಸ	೫೩.೨೦	೪೬.೭೫
ಪಂಜಾಬ	೦ ೦	೪೦.೧೩
ಸಿಂಧ	೦ ೦	೧೨ ೫೨
ಯುಕ್ತಪ್ರಾಂತ	೦ ೦	೬೮.೩೦
ಒಟ್ಟು	೬೫೦.೩೪	೮೯೫.೬೪

ಮುಖ್ಯ ಆಹಾರಧಾನ್ಯಗಳ ಫಸಲು

(ಸಾವಿರ ಟನ್ನುಗಳ ಲೆಕ್ಕದಂತೆ)

ಧಾನ್ಯ	೧೯೩೬—೩೭ ರಿಂದ ೩೮—೩೯ ರ ವರೆಗಿನ ಸರಾಸರಿ	೧೯೩೯—೪೦ ರಿಂದ ೪೨—೪೩ ರ ವರೆಗಿನ ಸರಾಸರಿ	ಹೆಚ್ಚಳ— ಕಡಿತ
ಅಕ್ಕಿ	೨೫,೧೨೭	೨೬,೪೫೫	+ ೧,೩೨೮
ಗೋಧಿ	೮,೧೫೦	೮,೭೯೧	+ ೫೪೧
ಜೋಳ	೭,೨೬೫	೭,೫೨೯	+ ೫೭
ಬಾಜರಿ	೧,೮೮೬	೨,೬೦೯	+ ೭೨೩
ರಾಗಿ	೧,೨೫೦	೧,೧೬೨	− ೮೮
ಗೋವಿನಜೋಳ	೧,೮೬೨	೨,೨೯೧	+ ೪೨೯
ಸಣ್ಣಗೋಧಿ	೨,೦೮೪	೨,೧೯೪	+ ೧೧೦
ಕಡಲೆ	೫,೨೫೮	೫,೬೮೫	+ ೪೨೭
ಒಟ್ಟು	೫೨,೮೮೨	೫೬,೧೧೫	+ ೩,೨೩೩

ಕೆಲವು ಪ್ರಾಂತಗಳ ಆಹಾರೋತ್ಪಾದನ ಯೋಜನೆಗಳ ಒಟ್ಟು ವೆಚ್ಚದಲ್ಲಿ ಅರ್ಧದಷ್ಟನ್ನು ಮತ್ತೆ ಕೆಲವು ಪ್ರಾಂತಗಳಲ್ಲಿ ನೂರಕ್ಕೆ ೬೬⅔ ಅಂಶದಷ್ಟನ್ನು ಕೇಂದ್ರ ಸರಕಾರ ವಹಿಸಿದೆ. ಕೇಂದ್ರ ಮತ್ತು ಪ್ರಾಂತ ಸರಕಾರಗಳ ಒಟ್ಟು ಖರ್ಚು ಮೇಲೆ ತೋರಿಸಿದ್ದಕ್ಕೆ ದ್ವಿಗುಣಕ್ಕಿಂತ ಸ್ವಲ್ಪ ಕಡಿಮೆಯಾಗುವದಾಗುತ್ತದೆ. ಸರಕಾರವು ಬೆಳೆಗಾಗಿ ಮಾಡಿದ ಖರ್ಚನ್ನು ಆಯಾತಕ್ಕಾಗಿ ಮಾಡಿದ ಖರ್ಚಿನೊಡನೆ ಹೋಲಿಸಿದರೆ ಅಷ್ಟೇನೂ ಹೆಚ್ಚೆನಿಸುವದಿಲ್ಲ. ಅತ್ಯಂತ ಕಷ್ಟಕರವಾದ ಕಳೆದ ೬ ವರ್ಷಗಳಲ್ಲಿ ಒಟ್ಟಿನ ಮೇಲೆ ೫೨.೮೭ ಲಕ್ಷ ಟನ್ನುಗಳಷ್ಟು ಹೆಚ್ಚು ಉತ್ಪಾದಿಸಲ್ಪಟ್ಟಿದೆ. ಒಟ್ಟಿನ ಮೇಲೆ ಆಹಾರೋತ್ಪಾದನಕ್ಕಾಗಿ ಮಾಡಿದ ಖರ್ಚು ಸಾರ್ಥಕವಾಯಿತೆಂದೇ ಹೇಳಬಹುದೆಂದು ಈಸ್ಟರ್ನ ಎಕಾನಾಮಿಸ್ಟದಲ್ಲಿ ಬರೆಯಲಾಗಿದೆ.

ನಮ್ಮ ಮನದಲ್ಲಿ ನೆಲಸುವದು. ಅವರ ಅಕಾಲಿಕ ಮರಣಕ್ಕೆ ತೋರಿದ ಪ್ರತಿ ಒಂದು ಹೃದಯವೂ ಅವರ ಸ್ಮಾರಕ ಮಂದಿರವಾಗುವದು.

ಸಂಸ್ಥಾನದ ದೊರೆಗಳು ಗತಿಸಿ ಹೋದ ಆ ಕರ್ಮಯೋಗಿಯ ಮನೆತನದ ಯೋಗಕ್ಷೇಮವನ್ನು ನೋಡಿಕೊಳ್ಳುವದರಲ್ಲಿ ಸಂಶಯವಿಲ್ಲ. ಅವರ ಬಂಧುವರ್ಗದ ದುಃಖಕ್ಕೆ ಯಾವ ಸೀಮೆ ಇಲ್ಲದಿದ್ದರೂ ಅವರ ವಿದ್ಯಾರ್ಥಿ ವೃಂದದ ದುಃಖವು ಕಾಲಾಂತರದಲ್ಲಿ ಕಡಮೆ ಮಾಡೀತು. ಆದರೆ ನೆನಪು ಶಾಲೆಯ ಇತಿಹಾಸದಲ್ಲಿ ಒಂದು ದಿವ್ಯ ಸ್ಫೂರ್ತಿಯಾಗಿ ಪರಿಣಮಿಸಲಿ. ”

ಜಗತ್ತಿನ ಓಟ

ಯುರೇನಿಯಮ್ಮಿಗಾಗಿ ಮತ್ತು ವೈಜ್ಞಾನಿಕ ನೇತೃತ್ವಕ್ಕಾಗಿ

ಕೆನಡದ ಆರ್ಕ್ಟಿಕ್ ಪ್ರದೇಶದಿಂದ ಆಸ್ಟ್ರೇಲಿಯದ ವರೆಗೆ, ರಶಿಯದ ಮೈದಾನದ ಮೂಲೆಯಿಂದ ಅರ್ಜಂಟೀನದ ಆಂಡೀಸ ಪರ್ವತದ ವರೆಗೆ ಯುರೇನಿಯಂ ಮತ್ತು ಥೋರಿಯಂಗಳಿಗಾಗಿ ಓಟ ನಡೆದಿದೆ. ಏಕೆಂದರೆ ಅವೆರಡೂ ಅಣುಬಾಂಬಿನ ನಿರ್ಮಿತಿಗೆ ಅವಶ್ಯವಾದುವು.

ಕೆನಡದ ವಾಯುವ್ಯದಲ್ಲಿರುವ 'ದೊಡ್ಡ ಕರಡಿ ಕೆರೆ'ಯ ಹತ್ತಿರದ ಲೆಬೈನಿನಲ್ಲಿ ಮತ್ತು ಬೆಲ್ಜಿಯನ್ ಕಾಂಗೋದಲ್ಲಿಯ ಕಟಂಗಗಳಲ್ಲಿ ಯುರೇನಿಯಮ್ಮಿನ ಆಕರವಾದ “ಪಿಚ್‌ಬ್ಲೆಂಡ್” ಎಂಬ ಪದಾರ್ಥವು ಸಿಗುತ್ತದೆ. ಮೇಲಿನ ಪ್ರದೇಶಗಳಲ್ಲದೆ ಕ್ವೀನ್ಸ್‌ಲೆಂಡಿನ ಸ್ಪಂತೋರ್ಕ್ ಎಂಬಲ್ಲಿಯೂ ದೊರೆಯುವುದೆಂದು ಆಸ್ಟ್ರೇಲಿಯನ್ನರು ಹೇಳಿಕೆ ಕೊಟ್ಟಿದ್ದಾರೆ.

ಯುರೇನಿಯಂ ಅಥವಾ ಥೋರಿಯಮ್ಮಿನ ಸಮೃದ್ಧಿಯಿಂದ ಚಿಕ್ಕದೇಶಗಳಾದ ಜೆಕೊಸ್ಲೋವೇಕಿಯ ಮತ್ತು ತಿರುವಾಂಕೂರುಗಳು ಕೂಡ ಬಹಳ ಪ್ರಮುಖವೆನಿಸಿವೆ.

ವಿಧಿಯ ಕುಚೋದ್ಯವೆಂಬಂತೆ ಅಮೇರಿಕದ ಸಂಯುಕ್ತ ಸಂಸ್ಥಾನದಲ್ಲಿ ಹೆಚ್ಚಿನ ಅಣುಶಕ್ತಿಯ ಆಕರ ದ್ರವ್ಯಗಳಿಲ್ಲವಾಗಿದೆ.

ಕೆನಡದ ಪೋರ್ಟಹೋಪಿನ ಸುತ್ತಮುತ್ತಲಿರುವ ಅಂಟೇರಿಯಾದಲ್ಲಿ ಮತ್ತು ಜೆಕೊಸ್ಲೋವೇಕಿಯದ ಜಾಚಿಮೋವಿನಲ್ಲಿ ದೊಡ್ಡ ದೊಡ್ಡ ಯಂತ್ರಾಲಯಗಳಲ್ಲಿ ಗಿರಣಿಯ ಮತ್ತು ಪುನಃಪ್ರಾಪ್ತಿಯ ಕಾರ್ಯಗಳು ಬಹಳ ಮುಂಬರಿದಿವೆ.

'ಸ್ವೀಡನ್' ಮತ್ತು ಡೆನ್ಮಾರ್ಕಗಳಂತಹ ಯುರೇನಿಯಂ ಮತ್ತು ಥೋರಿಯಂಗಳಿಲ್ಲದ ದೇಶಗಳಲ್ಲಿ ಅವುಗಳ ಶೋಧ ಬಹು ವಿಚಕ್ಷಣವಾದ ವೈಜ್ಞಾನಿಕ ಪದ್ಧತಿಯಿಂದ ಸಾಗಿದೆ.

ಲೆನಿನ್‌ಗ್ರಾಡ್, ಮಾಸ್ಕೋ, ಸ್ವೆರ್‌ಡ್ಲೋವ್‌ಸ್ಕ ಮತ್ತು ಖಾರಕೋವ್ ಮೊದಲಾದ ಅಣುಶಕ್ತಿ ಸಂಶೋಧನ ಕೇಂದ್ರಗಳಿಂದ ಬರುವ ಅಸಂಖ್ಯಾತ ವೈಜ್ಞಾನಿಕ ಪ್ರಕಟನೆಗಳಿಂದ ಈ ಕ್ಷೇತ್ರದಲ್ಲಿ ರಶಿಯವೆಷ್ಟು ಮುಂಬರಿದಿದೆಯೆಂಬುದನ್ನು ತಿಳಿಯಬಹುದು. ಕೇಂಬ್ರಿಜಿನ ಕವಾಂಡಿಶ್ ಪ್ರಯೋಗ ಶಾಲೆಯಲ್ಲಿ ಅಣುಶಕ್ತಿ ಸಂಶೋಧವನ್ನು ಮೊದಲು ನಡೆಸಿದ ಬ್ರಿಟನ್ನು ಈಗ ಹ್ಯಾರೋವಲ್ಲಿ ಆ ಕೆಲಸವನ್ನು ಮುಂಬರಿಸಿದೆ. ಅನುಕೂಲ ಬಾಹುಲ್ಯದಿಂದ ಅಮೇರಿಕದ ಸಂಯುಕ್ತ ಸಂಸ್ಥಾನವು ಈ ಕಾರ್ಯದಲ್ಲಿ ಎಲ್ಲರಿಗಿಂತ ಮುಂದಾಗಿದೆ. ಅಲ್ಲಿ ಅಭೂತಪೂರ್ವವಾದ ವೈಜ್ಞಾನಿಕ ಪ್ರಯತ್ನದಿಂದ ಸಂಪೂರ್ಣ ಸಹಕಾರವನ್ನು ಸಾಧಿಸಿ ಸುಮಾರು ೨೦೦ ಕಡೆ ಅಣುಶಕ್ತಿಯ ಉತ್ಪಾದನೆಯು ಜೋರಾಗಿ ನಡೆದಿದೆ.

ಇಡಿಯ ಜಗತ್ತಿನಲ್ಲಿ ಇಂದು ನಡೆದ ವಿವಿಧ ಸಂಶೋಧನ, ಮತ್ತು ತಯಾರಿಕೆಯ ಯೋಜನೆಗಳನ್ನು ಗಮನಿಸಿದರೆ ಮನುಷ್ಯಕುಲ ಎಂತಹ ಸಮಸ್ಯೆಯನ್ನು ಎದುರಿಸಬೇಕಾಗಿದೆಯೆಂಬುದರ ಅರಿವಾಗುತ್ತದೆ. ಈಗ ಮಾನವಕೋಟಿಯು ಸಂಯುಕ್ತರಾಷ್ಟ್ರಸಂಘದ ಮೂಲಕ ಅಣುಶಕ್ತಿಯು ಶಾಂತಿಕಾಲದ ಕಾರ್ಯಗಳಿಗೆ ಮಾತ್ರ ಉಪಯೋಗಿಸಲ್ಪಡುವಂತೆ ನಿಯಂತ್ರಿಸಬೇಕು; ಇಲ್ಲವಾದರೆ ತಲೆ ಕೆಳಗೆಮಾಡಿ ಧುಮುಕಿ ತನ್ನದೇ ನಾಶದ ಮಾರ್ಗದತ್ತ ಸಾಗಬೇಕಾದೀತು.

(“ಯುನೈಟೆಡ್‌ನೇಶನ್ಸ್‌ವರ್ಲ್ಡ”ದಿಂದ)

ಲಿಂಬೆಹಣ್ಣಿನ ರಸದಲ್ಲಿ ದೋಷವೂ ಇದೆ

ಲಿಂಬೆಯ ರಸ ಜೀರ್ಣಕಾರಿಯೆಂದೂ ಮಲಬದ್ಧತೆಯನ್ನು ನಿವಾರಿಸುವುದೆಂದೂ ಥಂಡಿಯನ್ನು ಕಡಿಮೆ ಮಾಡುವುದೆಂದೂ ಪೌಷ್ಟಿಕವೆಂದೂ ಅನೇಕರು ತೆಗೆದುಕೊಳ್ಳುತ್ತಾರೆ. ಮೋಟಾರಿನಲ್ಲಿ ಕುಳಿತು ಹೋಗುವಾಗ ಬಾಯಾರಿಕೆ ಕಡಿಮೆ ಮಾಡಲು ಲಿಂಬೆಯ ಹಣ್ಣನ್ನು ಚೀಪುವುದನ್ನೂ ನೋಡುತ್ತೇವೆ. ಇನ್ನಿತರರು ಪ್ರತಿನಿತ್ಯವೂ ಮಿತ ಪ್ರಮಾಣದಲ್ಲಿ ಲಿಂಬೆಯ ರಸ ಕುಡಿಯುವುದೂ ಉಂಟು.

ಆದರೆ ಅಮೇರಿಕೆಯ ವೈದ್ಯರಾದ ಸ್ಟಾಫನ್ ಮತ್ತು ಸ್ಟಾನ್ಲಿಯವರು ಪ್ರತಿಧಿನ ನಿಂಬೆಯ ರಸ ತೆಗೆದುಕೊಳ್ಳುವುದರಿಂದ ನಮ್ಮ ಹಲ್ಲು ದಿನೇ ದಿನೇ ಸವೆದು ಕಡೆಗೆ ಇಲ್ಲವಾಗಬಹುದೆಂದು ಹೇಳುತ್ತಾರೆ. 'ವಿಟಮಿನ್ ಸಿ' ಗಾಗಿ ಅದನ್ನು ಸೇವಿಸಬೇಕಾಗಿಲ್ಲ; ಆ 'ವಿಟಮಿನ್ನನ್ನು' ಬೇರೆ ಪದಾರ್ಥಗಳಿಂದ ಪಡೆಯಬಹುದು. ಆದುದರಿಂದ ಪ್ರತಿನಿತ್ಯ ಲಿಂಬೆಯ ರಸ ತೆಗೆದುಕೊಳ್ಳುವುದು ಅಪಾಯಕರವೆಂದು ತಿಳಿಯತಕ್ಕದ್ದು.

ಸಾರಜ್ಞ ವಚನಗಳು

ವಚನಕಾರರು— ಶ್ರೀ ಗಂಗಪ್ಪ ವಾಲಿಯವರು

೧

ಸಿರಿ ಸೌಖ್ಯವುಳ್ಳವರು
ಬೆರಳೆಣಿಕೆಯೊಳಗಿಹರು
ಬರಿಗೈಯ ಜನರ ಲೆಕ್ಕಹತ್ತದು ನಮ್ಮ
ವರ ರಾಜ್ಯದಲ್ಲಿ ಸಾರಜ್ಞ

೨

ಉಳ್ಳವರ ಬಳಗಕ್ಕೆ
ಎಲ್ಲ ಸೌಖ್ಯಗಳುಂಟು
ಇಲ್ಲದವರೆಲ್ಲ ಕೊರತೆಗಳ ಕೊರಕಲಿನ
ಕಲ್ಲಣಿಸುತಿಹರು ಸಾರಜ್ಞ

೩

ಎಲ್ಲವರು ಒಂದೆಂಬ
ಬೆಲ್ಲದಂತಹ ತತ್ವ
ಎಲ್ಲಿಹುದು ನಿತ್ಯ ಜೀವನದ ಬಳಕೆಯಲಿ?
ಸುಳ್ಳಿಗಿದು ಕಳಸ ಸಾರಜ್ಞ

೪

ಪುಂಡ ಪಂಡಿತರೆಲ್ಲ
ಉಂಡುಂಡು ಕೊಬ್ಬಿಹರು
ಹಿಂಡಿರುವ ಹಿಪ್ಪೆ ಎಂಬಂತೆ ಸಜ್ಜನರು
ಬೆಂಡಾಗುತಿಹರು ಸಾರಜ್ಞ

೫

ಅರೆಹೊಟ್ಟೆ ಬರಿಹೊಟ್ಟೆ
ಹರಕರಿವೆಗಳ ತೊಟ್ಟು
ಮರಮರನೆ ಮರುಗಿ ಸೊರಗಿರುವ ಬಡವರಿಗೆ
ಕರುಣಿಸುವರಿಲ್ಲ ಸಾರಜ್ಞ

ಸಸ್ಯ ಜಾತಿಯಲ್ಲಿ ಹತ್ತು ಲಿಂಗಗಳು!

ಮಧ್ಯಯುಗದ ರಾಸಾಯನಿಕರು ಬಂದ ಹುಡುಕಾಡಿದ ಪ್ರೇಮರಸಾಯನವು ನಿಜವಾಗಿಯೂ ಕೆಲವು ಅತಿ ಸೂಕ್ಷ್ಮ ವನಸ್ಪತಿಗಳಲ್ಲಿದೆಯೆಂದು ತಿಳಿದು ಬಂದಿದೆ. ಅದಕ್ಕೆ “ಕ್ರೊಸಿಟಿನ್” ಎಂದು ಹೆಸರು. ಇದನ್ನು ನೀರೊಡನೆ ಹೀರಿದಾಗ ನಿಷ್ಕ್ರಿಯವೂ ಜಡವೂ ಆದ ಸಸ್ಯಾಣುವು ಸಕ್ರಿಯವೂ ಚುರುಕೂ ಆಗುತ್ತದೆ.

ಆ ವಿಕಾಣು ಸಸ್ಯದ ಹೆಸರು “ಕ್ಲಾಮಿಡೊಮೊನೊಸ್” ಎಂದು.

“ಇರುವನೇನು ಜಗದೊಳಿಂಥ
ಕಲಿನಾತ್ಮದ ಪುರುಷ?
ಸ್ತ್ರೀಪುಲ್ಲಿಂಗಗಳೆರಡೇ
ಸಾಕೆನಲೇಂ ಹರುಷ?”

ಎಂದು ಪದ್ಯ ಬರೆದ ಕವಿಯು ಬಹುಶಃ ಸಸ್ಯಶಾಸ್ತ್ರವನ್ನು ಬಲ್ಲವನಾಗಿರಬೇಕೆಂದು ತರ್ಕಿಸಬಹುದಾಗಿದೆ. ಮೇಲೆ ಹೇಳಿದ ಸಸ್ಯಜಾತಿಯಲ್ಲಿ ಸ್ತ್ರೀಪುಂವರ್ಗಗಳೆರಡೇ ಅಲ್ಲ, ಹತ್ತು ಭಿನ್ನ ಭಿನ್ನ ವರ್ಗಗಳಿವೆಯೆಂದು ಕಂಡು ಬಂದಿದೆ. ಅದು ಐದು ಬಗೆಯ ಹೆಣ್ಣು ಅಣುಗಳನ್ನೂ ಐದು ಬಗೆಯ ಗಂಡು ಅಣುಗಳನ್ನೂ ಪಡೆಯುತ್ತದೆ. ಈ ಅಣುಗಳು ಬೇರೆ ಬೇರೆ ಪ್ರಮಾಣದ ಗಾಢತೆಯಿಂದ ತಮ್ಮ ಪ್ರಿಯ ಪ್ರೇಯಸಿಯರೊಡನೆ ಪ್ರಣಯವ್ಯವಹಾರ ನಡೆಸುವುವು!

('ಸೈನ್ಸ್ ಡೈಜೆಸ್ಟ'ದಿಂದ)

ಸಂಯುಕ್ತಪ್ರಾಂತದ ಹಿಂದು ಮಹಾಸಭೆಯವರು ಮುಸಲ್ಮಾನರಿಗೆ ಶಾಸನ ಸಭೆಯಲ್ಲಿ ಹೆಚ್ಚಿನ ಪ್ರಾತಿನಿಧ್ಯ ಕೊಟ್ಟಿದ್ದನ್ನು ರದ್ದುಪಡಿಸಬೇಕು, ಎಲ್ಲ ಮಹತ್ವದ ಸ್ಥಳಗಳಿಗೆ ಹಿಂದು ಅಧಿಕಾರಿಗಳನ್ನೇ ನಿಯಮಿಸಬೇಕು, ಸರಕಾರೀ ನೌಕರಿಯಲ್ಲಿರುವ ಮುಸಲ್ಮಾನರನ್ನು ಅವರ ಜನಸಂಖ್ಯೆಯ ಪ್ರಮಾಣದ ಮೇಲೆ ಮಾತ್ರ ಇಟ್ಟು ಹೆಚ್ಚಿಗೆ ಇದ್ದವರನ್ನು ಕಡಿಮೆ ಮಾಡಬೇಕು ಎಂಬ ಬೇಡಿಕೆಯೊಂದನ್ನು ಮಂತ್ರಿಗಳಿಗೊಪ್ಪಿಸಿದ್ದಾರೆ.

ಚಂದ್ರನಗರದ ಸಮೀಪದಲ್ಲಿ ಜುಲೈ ೨೫ ರ ಮುಂಜಾವದಲ್ಲಿ ಗಲಭೆಯುಂಟಾಗಿ ಇಬ್ಬರು ಸತ್ತರೆಂದೂ ಹತ್ತು ಜನರಿಗೆ ಗಾಯಗಳಾದವೆಂದೂ ಸುದ್ದಿ ಬಂದಿದೆ.

ಕರಾಚಿ ಕಾರ್ಪೋರೇಶನ್ನಿನಲ್ಲಿ ಸಿಂಧ ಸರಕಾರವು ಕಾರ್ಪೊರೇಶನ್ನಿನ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವ ಧೋರಣ ವಹಿಸಿದ ಬಗ್ಗೆ ನಡೆದ ಚರ್ಚೆಯಲ್ಲಿ ಮುಸ್ಲಿಮ ಲೀಗ ಸದಸ್ಯರು ಸರಕಾರವನ್ನು ಸಮರ್ಥಿಸಿದರು, ಕಾಂಗ್ರೆಸ್ಸಿಗರು ವಿರೋಧಿಸಿದರು.

ತುಮಕೂರಲ್ಲಿ ಕೋತಿಗಳ ಹಾವಳಿಯನ್ನು ಕಡಮೆ ಮಾಡಲು ನಗರಸಭೆಯವರು ೫೦೦ ರೂ. ಮುಂಜೂರ ಮಾಡಿದ್ದಾರೆ.

ಕರ್ಮವೀರ
ಹರಿಜನ ಪುರವಣಿ

ರಾಷ್ಟ್ರಧ್ವಜ

(ಮೋ. ಕ. ಗಾಂಧಿ)

೧೯೩೧ ರಲ್ಲಿ ಹಿಂದೀ ರಾಷ್ಟ್ರವು ಕಾಂಗ್ರೆಸ್ಸಿನ ಮುಖಾಂತರ ಕೆಲಸ ಮಾಡುತಿದ್ದಿತು. ಆಗ ರಾಷ್ಟ್ರಧ್ವಜವು ಅದೇ ಹೆಸರಿನಿಂದ ಅಂಗೀಕರಿಸಲ್ಪಟ್ಟಿತು. ಆದುದರಿಂದ ಒಂದು ಕಾಲಕ್ಕೆ ಕಾಂಗ್ರೆಸಿನ ಧ್ವಜವಿದ್ದುದೇ ಈಗ ಹಿಂದುಸ್ತಾನದ ರಾಷ್ಟ್ರಧ್ವಜವಾಗಿದೆಂದು ಅನ್ನುವವರು ತಪ್ಪು ಮಾಡುತ್ತಿರುವರು. ತಿಳಿಯದೆಯಾದರೂ ಈಗ ಮಾತ್ರ ಅದಕ್ಕೆ ರಾಷ್ಟ್ರಧ್ವಜವೆಂದು ಕರೆದು ಅನವಶ್ಯಕವಾಗಿ ಅದರ ಬಗೆಗೆ ಹುಯಿಲೆಬ್ಬಿಸುವವರು ಕಾಂಗ್ರೆಸಿನ ಅಪಮಾನಮಾಡುತ್ತಿರುವರು. ೧೮೮೫ ರಲ್ಲಿ ಹುಟ್ಟಿದಂದಿನಿಂದ ಕಾಂಗ್ರೆಸ್ಸು ರಾಷ್ಟ್ರೀಯವಾಗಿದೆ. ಅದು ಒಂದು ಪಕ್ಷದ ಪ್ರತಿನಿಧಿಯಲ್ಲ; ಅದರೆ ಎಲ್ಲ ಪಕ್ಷಗಳನ್ನು ಮತ್ತು ಎಲ್ಲ ಹಿಂದೀಯರನ್ನು ಅದು ಪ್ರತಿನಿಧೀಕರಿಸಿದೆ. ಒಂದು ಪಕ್ಷದ ಯಂತ್ರವಾಗಿ ಆತ್ಮಹತ್ಯೆಯನ್ನು ಮಾಡಿಕೊಳ್ಳುವ ದಾರಿಯು ಈ ದೊಡ್ಡ ರಾಷ್ಟ್ರೀಯ ಸಂಸ್ಥೆಗೆ ಯಾವಾಗಲೂ ತೆರೆದೇ ಇದೆ. ಈಶ್ವರೀ ಕೋಪವಾದರೆ ಆ ದುರಂತಕ್ಕೆ ಅದು ಒಳಗಾಗಬಹುದು. ಅದರೂ ಇಂತಹ ದುರ್ದೈವದ ಘಟನೆಯೆಂದೂ ಆಗದಿರಲೆಂದು ಪ್ರಾರ್ಥಿಸುವವರನೇಕರು ಇರುವರು. ಹೆಸರಿನಲ್ಲಿ ಮಾತ್ರ ಕಾಂಗ್ರೆಸ್ಸು ರಾಷ್ಟ್ರೀಯವಾಗಿದೆ; ಅದರೆ ಅದು ಕೃತಿಯಲ್ಲಿ ಹಿಂದೂ ಆಗಿದೆಂಬ ಕಾಯದೆ ಅಜಂ ಜಿನ್ನಾರ ಕಟಕಿಯು ಎಂದಾದರೂ ಸತ್ಯವಾಗಲು ಶಕ್ಯವಿದೆಯೆ ?

ಅದೇನೇ ಇದ್ದರೂ ರಾಷ್ಟ್ರಧ್ವಜದ ವಿಷಯಕ್ಕೆ ನಾವು ಮಾತಾಡೋಣ. ಹಿಂದುಸ್ತಾನದ ಇಚ್ಛೆಗಳಿಗೆ ಒಪ್ಪಿಗೆಯಿತ್ತು ಬ್ರಿಟಿಷ ಪ್ರಭುತ್ವದಿಂದ ಹಿಂದುಸ್ತಾನವನ್ನು ಬಿಡುಗಡೆ ಮಾಡಿ ಅವರ ಕಡೆಯಿಂದ ದೊಡ್ಡ ಭಾಗವನ್ನು ಕಾಂಗ್ರೆಸ್ಸು ಗಳಿಸಿಕೊಂಡಿರುವದೆಂಬುದು ಈಗಾದ ಸಂಗತಿ. ಆದುದರಿಂದ ಇನ್ನುಮುಂದೆ ಸ್ವದೇಶಿ ಸರಕಾರವು ಬ್ರಿಟಿಷ ಸರಕಾರದ ವಿರುದ್ಧ ಹಿಂಸೆಯಿಲ್ಲದೆ ಎಷ್ಟೋ ಕಾಳಗಗಳನ್ನು ಕಾಂಗ್ರೆಸ್ಸು ಯಾವ ಧ್ವಜದಡಿಯಲ್ಲಿ ಹೂಡಿ ಹೋರಾಡಿತೋ ಆ ಧ್ವಜದ ಅಡಿಯಲ್ಲಿ ಕಾರ್ಯ ಮಾಡುವದು. ಈ ಧ್ವಜ ಪ್ರದರ್ಶನದಲ್ಲಿ ಚಿಮ್ಮಿಪಡುವ ಅಂಶವೇನೂ ನನಗೆ ಕಾಣುವದಿಲ್ಲ. ಹಿಮಾಲಯದ ಆರೋಹಣದ ವಿವಿಧ ಹಂತಗಳಲ್ಲಿ ಸಂಚಾರಿಯ ಕಣ್ಣಿಗೆ ಬೀಳುವ ಮನೋಹರ ದೃಶ್ಯಗಳಿಂದ ದೊರೆತ ಆನಂದೋತ್ಸಾಹಗಳು ಬೆಟ್ಟದ ತುದಿಯನ್ನು ತಲುಪಿದ ಬಳಿಕ ಉಳಿಯುವದಿಲ್ಲ. ಆ ಗುರಿಯನ್ನು ಮುಟ್ಟುವಲ್ಲಿ ಇನ್ನೂ ಯಾರೂ ಯಶಸ್ವಿಯಾಗಿಲ್ಲೆಂಬದು ಗುರಿಯು ನಿರಂತರವಾಗಿ ಕಣ್ಣಳವಿನಲ್ಲಿದೆಯೇ ಹೊರತು ಕೈಗೆ ಬಂದಿಲ್ಲೆಂಬ ಹಾಗೂ ಪ್ರಯತ್ನದಲ್ಲಿಯೇ ಆನಂದವಿದೆಯೆಂಬ ಮಾತಿನ ದೃಷ್ಟಾಂತ.

೧೯೩೧ ರ ಎಪ್ರೀಲ ೧೩ ನೇ ದಿನಾಂಕದಲ್ಲಿ 'ಯಂಗ ಇಂಡಿಯಾ' ಪತ್ರಿಕೆಗೆ ನಾನೊಂದು ಲೇಖನವನ್ನು ಬರೆದೆನು. ಈ ಲೇಖನವನ್ನು ಬರೆಯುವ ಮುನ್ನ ನಾನು ಆ ಲೇಖನವನ್ನು ಮರಳಿ ಓದಿಕೊಂಡೆನು. ಆ ಲೇಖನವನ್ನು ಮತ್ತೊಮ್ಮೆ ಓದಿಕೊಳ್ಳಬೇಕೆಂದು ಪ್ರತಿಯೊಬ್ಬ ವಾಚಕರಿಗೆ ನನ್ನ ಸವಿನಯ ಸಲಹೆಯಿದೆ. 'ಹರಿಜನ'ದ ಈ ವಾರದ ಸಂಚಿಕೆಯಲ್ಲಿ ಅದನ್ನು ಮತ್ತೊಮ್ಮೆ ಎತ್ತಿಕೊಡಲಾಗಿದೆ ಮೂಲ ಧ್ವಜಕ್ಕೆ ಕೊಟ್ಟ ಮಹತ್ವಕ್ಕೆ ಸುಧಾರಿಸಿದ ಹೊಸ ಧ್ವಜವು ಅನುಗುಣವಾಗಿದ್ದರೆ ಮಾತ್ರ ಅದಕ್ಕೆ ಬೆಲೆಯಿದೆ. ಹಾಗಿಲ್ಲದಿದ್ದರೆ ನನ್ನ ಲೆಕ್ಕದಲ್ಲಿ ಅದಕ್ಕೇನೂ ಬೆಲೆಯಿಲ್ಲ. ಈ ಎಚ್ಚರಿಕೆಯನ್ನು ಕೊಡುವಲ್ಲಿ ಕಾರಣವಿದೆ. ಮೂಲ ಧ್ವಜವು ಶಾಶ್ವತವಾಗಿ ಕಣ್ಮರೆಯಾಗಿದೆಂದು ಕೆಲವರನ್ನುವರು. ಹೊಸ ಪೀಳಿಗೆಯು ಅರಂಭವಾಗಿದೆ ಮತ್ತು ಅದರ ಕೂಡ ಹೊಸ ಯೋಗ್ಯ ಭಾವನೆಗಳೂ ವಿಚಾರಗಳೂ ಬಂದಿವೆ ಮುಪ್ಪು ತನ್ನ ತಾಯಿಯ ಅಂದವನ್ನು ಕೆಡಿಸಿಬಿಟ್ಟಿದೆಂದು ತಿಳಿವ ಸುಪುತ್ರನನ್ನು ನಾನಂತೂ ಅರಿಯೆ. ಶುದ್ಧ ಸುವರ್ಣಕ್ಕೆ ಮತ್ತೆ ಸುವರ್ಣಲೇಪವನ್ನು ಮಾಡಬಹುದೆಂದು ಊಹಿಸಬಹುದು. ಅದರೆ ತನ್ನ ತಂದೆ ತಾಯಿಗಳನ್ನು ಸುರೂಪಗೊಳಿಸಬಹುದೆಂದು ಬಗೆವ ಸುಪುತ್ರನಿನ್ನೂ ಹುಟ್ಟಬೇಕಾಗಿದೆ. ಆದುದರಿಂದ ಮೂಲಧ್ವಜದ ಚಿತ್ರದಾನ್ಯವಕ್ಕೆಯಲ್ಲಿ ವ್ಯತ್ಯಾಸವನ್ನು ಮಾಡುವ ಗೋಜಿಗೆ ಸದಸ್ಯರಾರೂ ಹೋಗುವದನ್ನು ಬಿಟ್ಟಿದ್ದರೆ ಯಾವ ಹಾನಿಯೂ ಆಗುತ್ತಿದ್ದಿಲ್ಲ. ಹೊಸ ಸುಧಾರಣೆಯನ್ನೆತ್ತಿ ಹಿಡಿಯುವದಕ್ಕೆ "ರಾಟೆಯು ಹಳೆಯ ಮುದುಕಿಯ ಸಮಾಧಾನವಸ್ತು ಮತ್ತು ಗಾಂಧಿಯ ಆಟಿಗೆ, ಅದರೆ ಸ್ವರಾಜ್ಯವು ಮುದುಕಿಯ ಸೊತ್ತಲ್ಲ: ಅದು ಯೋಧರ ಆಸ್ತಿ. ಆದುದರಿಂದ ನಮಗೆ ಸಿಂಹ ಸಮವೇತವಾದ ಅಶೋಕ ಚಕ್ರಬೇಕು. ಹೇಡಿತನ ಸಾಕಾಗಿದೆ. ಶೂರರ ಅಹಿಂಸೆಯ ಅನುಭವವಾರಿಗೂ ಇಲ್ಲ. ಅದನ್ನು ಕಂಡ ಬಳಿಕ ಮುಂದೆ ಮಾತಾಡೋಣ. ಅರಣ್ಯಜೀವನಕ್ಕೆಲ್ಲ ಸಿಂಹವೇ ಅಧಿಪತಿಯೆಂಬ ಮಾತು ಮಾತ್ರ ನಮಗೆ ಗೊತ್ತಿದೆ. ಆದು ಕುರಿಗಳು ಅದರ ಆಹಾರ. ಪ್ರಗತಿಯ ಈ ದಿವಸಗಳಲ್ಲಿ ಖಾದಿಯನ್ನು ಧರಿಸಿ ಬೇಸತ್ತಿದ್ದೇವೆ. ಕಾಜಿನಿಂದ ಮಾಡಿದ ಸುಂದರ ಬಟ್ಟೆ ನಮಗೆ ದೊರೆಯುತ್ತದೆ. ನಮ್ಮ ಪೂರ್ವಜರು ಮಳೆಗಾಳಿಯಿಂದ ಮೈ ರಕ್ಷಿಸಿಕೊಳ್ಳಲು ಬಟ್ಟೆಯನ್ನು ಉಪಯೋಗಿಸುತ್ತಿದ್ದರು; ನಾವೀಗ ಬಟ್ಟೆಯನ್ನು ಅಲಂಕಾರಕ್ಕಾಗಿ ಉಪಯೋಗಿಸುತ್ತೇವೆ. ಆದುದರಿಂದ ದೇಹದ ಬೇರೆ ಬೇರೆ ಅವಯವಗಳನ್ನು ತೋರಿಸುವಷ್ಟು ಅದು ತೆಳುವಾಗಿರಬೇಕು., ಮತ್ತು ಸುಧಾರಿಸಿದ ಧ್ವಜಕ್ಕೆ ಖಾದಿಯ ಅಗತ್ಯವಿಲ್ಲ. ನಮ್ಮ ನಗರಗಳ ಅಂಗಡಿಗಳನ್ನು ಖಾದಿಯಿಂದ ಅಂದಗೆಡಿಸುವದು ನಮಗೆ ಬೇಡ. ಹಳ್ಳಿಗರು ಖಾದಿಯನ್ನು ಧರಿಸುವದು ಮತ್ತು ಮುದುಕಿಯರು ರಾಟಿಯನ್ನು ತಿರುಗಿಸುವದು ಮಹಾಪರಾಧವೆಂದು ನಾವು ತಿಳಿಯುವದಿಲ್ಲೆಂಬುದೇ ಒಂದು ದೊಡ್ಡ ಪುಣ್ಯ." ಎಂದು ಕೆಲವರು ಹೇಳುವರು.

ಧ್ವಜವು ಎಷ್ಟೇ ಸುಂದರವಾಗಿದ್ದರೂ ಅದಕ್ಕೆ ಮೇಲಿನ ಅರ್ಥವಿದ್ದರೆ ನಾನೆಂದಿಗೂ ಅದನ್ನು ವಂದಿಸಲೊಪ್ಪುವದಿಲ್ಲ.

'ಮೊದಲಿನ ಧ್ವಜದ ಸುಧಾರಿಸಿದ'ಆವೃತ್ತಿಯೇ ಹೊಸ ಧ್ವಜವು. ಅದರ ಮೇಲೆ ರಾಟೆಗೆ ಅಸಂದಿಗ್ಧ ಗೌರವದ ಸ್ಥಾನವಿದೆ. ಕೇವಲ ಕಲೆಯ ಅವಶ್ಯಕತೆಯ ದೃಷ್ಟಿಯಿಂದ ಕದಿರು ಹರಿವಾಣಿಗಳಿಲ್ಲದೆ ಚಕ್ರವಿದ್ದರೆ ಅದನ್ನು ದೋಷವೆಂದು ಎಣಿಸುವ ಕಾರಣವಿಲ್ಲ. ಪ್ರತಿಯೊಂದು ಚಿತ್ರದಲ್ಲಿ ಕಲ್ಪನೆಗೆ ಕೆಲವೊಂದು ಅಂಶಗಳನ್ನು ಬಿಡಬೇಕಾಗುವದು. ರಾಟೆಯ ಚಿತ್ರದಲ್ಲಾದರೂ ಹಂಜಿಗಳಿಲ್ಲ; ನೂಲುವವರಿಲ್ಲ. ಅವುಗಳನ್ನೆಲ್ಲ ಊಹಿಸಿಕೊಳ್ಳಬೇಕಾಗುವದು. ಇದೇ ನಿಯಮವೇ ಧ್ವಜದ ಸುಧಾರಿಸಿದ ಆವೃತ್ತಿಗೂ ಹತ್ತುತ್ತದೆ. ಹೀಗೆ ತಿಳಿದರೆ ನಿರ್ವಿಕಾರಮನಸ್ಕರಿಗೆ ಈ ಸುಧಾರಣೆಯು ಶುದ್ಧ ನಿರುಪದ್ರವಿ ಸುಧಾರಣೆಯೆಂದು ತೋರದಿರದು. ಚಕ್ರಾಂಕಿತ ತ್ರಿವರ್ಣ ಧ್ವಜವು ಕೈನೂಲಿನ ಕೈಮಗ್ಗದ ಬಟ್ಟೆಯ ಮೇಲೆಯೇ ಇರುವದು. ಕೈನೂಲಿನ ಬಟ್ಟೆಗೆ ಅಥವಾ ರೇಶ್ಮೆಯ ಬಟ್ಟೆಗೆ ನಮ್ಮ ದೇಶವು ಖಾದಿಯೆಂಬ ಹೆಸರನ್ನು ಕೊಟ್ಟಿದೆ. ಮೂಲಕಲ್ಪನೆಯನ್ನು ಬದಲಿಸದೆ ಇಟ್ಟುಕೊಂಡಾಗ ಕಲಾಕುಶಲನ ಚಿತ್ರನೈಪುಣ್ಯದೃಷ್ಟಿಯಿಂದ ಮಾಡಿದ ವ್ಯತ್ಯಾಸಕ್ಕೆ ಆಕ್ಷೇಪಿಸುವ ಅಧಿಕಾರವಾರಿಗೂ ಇಲ್ಲ. ಬುದ್ಧಿಪೂರ್ವಕವಾಗಿ ನಾವು ಅಳಬಾವಂತರಾಗಬಾರದು. ವಿದೇಶಿ ಪ್ರಭುತ್ವದ ಕೂಡ ನಮ್ಮ ನಾಡು ಯುದ್ಧದಲ್ಲಿ ತೊಡಗಿದ್ದಾಗ ಇಂತಹ ಯುದ್ಧಾಸಕ್ತಿಯ ಸಂಗತಿಯೇ ಒಂದು ಕಲಾಕರ್ಮವಾಗಿದ್ದಿತು. ಈಗ ಆ ಯುದ್ಧವು ವಿಜಯದಲ್ಲಿ ಪರ್ಯವಸಾನಹೊಂದಿರುವದರಿಂದ ಸಿರ್ಬಲ ರಾಷ್ಟ್ರಕ್ಕೆ ಶಕ್ಯವಿದ್ದ ರೀತಿಯಲ್ಲಿ ಆ ಕಾರ್ಯದ ಸಂಸ್ಥೆಯನ್ನು ಶಾಶ್ವತಗೊಳಿಸಲು ಉಪಯುಕ್ತವಾದ—ಕಳಕರಗತಿಯದಾದರೂ ಆಗಬಹುದು— ಅಂತಹ ಕಲೆಗೆ ಒಂದು ಸ್ಥಾನವಿರಬೇಕು." ಎಂದು ಅರ್ಥ ಮಾಡುವ ಇನ್ನೊಂದು ಗುಂಪಿದೆ. ಅನಿವಾರ್ಯವಾದ ಈ ಅರ್ಥಕ್ಕೆ ಹೆಚ್ಚಿಗೆ ಜೋಡಿಸುವ ಅಸಿಸಂಗತ ಅರ್ಥಗಳು ಇದ್ದರೆ ಅವು ಅನಾಯುಕರವಾಗುವವು. ಅವೇ ಬಣ್ಣಗಳಲ್ಲಿ ಸೂಕ್ಷ್ಮವಾದ ಅರ್ಥವನ್ನು ಕಂಡುಕೊಳ್ಳುವದು ಸಮೃದ್ಧಮನಸ್ಕನಿಗೆ ಸಾಧ್ಯವಿದೆ. ಇದೀ ವಿಶ್ವದಲ್ಲಿ ವರ್ಣವೈವಿಧ್ಯದಲ್ಲಿಯೇ ಕಲ್ಪನಾಸಾರೂಪ್ಯವಿದೆ. ಜನಸಾಮಾನ್ಯರ ಹೃದಯಾಧಿಪತಿಯಾಗಲು ಅಧಿಕಾರ ಆಡಂಬರಗಳನ್ನೆಲ್ಲ ಅಡುತಿಗೊಟ್ಟು ಆಗ ಇದ್ದ ಎಲ್ಲ ಧರ್ಮಗಳ ಪ್ರತಿನಿಧಿಯಾದ ಶಾಂತಿಸಮ್ರಾಟ ಅಶೋಕನ ಹೆಸರನ್ನು ಚಕ್ರದ ಮೂಲಕ ಕೆಲವರು ಸ್ಮರಿಸುವರು. ದಯಾಪ್ರೇಮಗಳ ಜೀವಂತ ಮೂರ್ತಿಗೆ ಅಂಕಿತಪಡಿಸಿದ ಧರ್ಮಚಕ್ರದ ಅರ್ಥವನ್ನು ಆ ಚಕ್ರದಲ್ಲಿ ಕಾಣುವದು ನ್ಯಾಯ್ಯವಾದ ಅರ್ಥಸಂಕೇತವೆಂದು ನಾವು ಹೇಳಬಯಸುವೆವು. ಹೀಗೆ ಅರ್ಥಮಾಡಿದ ರಾಟೆಯು ಮಾನವಕೋಟಿಯ ಜೀವನದಲ್ಲಿ ಹೆಚ್ಚು ಮಹತ್ವವನ್ನು ಪಡೆಯುತ್ತದೆ. ಅಶೋಕ ಚಕ್ರಕ್ಕೆ ಅದನ್ನು ಹೋಲಿಸುವದು ಅಥವಾ ಅಶೋಕ ಚಕ್ರದಿಂದ ಅದರ ಉತ್ಪತ್ತಿಯನ್ನು ಹೇಳುವದು ಯಾವಾಗಲೂ ತಿರುಗುತ್ತಿರುವ ಪ್ರೇಮದ ದಿವ್ಯ ಧರ್ಮದ ಚಕ್ರಕ್ಕೆ ಎಲ್ಲರೂ ವಿಧೇಯರಾಗಿ ವರ್ತಿಸಬೇಕೆಂಬ ತತ್ವವನ್ನು ಕ್ಷುದ್ರವೆಂದು ತೋರುವ ರಾಟೆಯಲ್ಲಿ ಗುರುತಿಸಿದಂತೆಯೇ ಸರಿ.

(ಮೂಲ ಗುಜರಾತಿಯಿಂದ ಅನುವಾದಿತ)

ಹೊಸದಿಲ್ಲಿ

೨೭–೭–೪೭

ಭಯಂಕರ ತಾರತಮ್ಯ

ಪ್ರೊ. ಕುಮಾರಪ್ಪನವರು ಈಗ ಲಂಡನ್ನಿನಲ್ಲಿದ್ದಾರೆ. ಅಲ್ಲಿಂದ ಅವರು ಬರೆದ ಕಾಗದಗಳಿಂದ ಕೆಳಗಿನ ಭಾಗಗಳನ್ನು ನಾನು ಉದ್ಧರಿಸುತ್ತೇನೆ:

"ಭೂಮಿಯ ಮೇಲ್ಮೈಯ ಮೇಲಿನ ತಿರುಗಾಟದಿಂದಾಗುವ ಹರ್ಷದ ಲೇಶವೂ ಇಲ್ಲದೆ ವಾಯುಯಾನವು ನಾನು ವಿವರಿಸಿದಂತೆ ಅತ್ಯಂತ ಬೇಸರದ್ದಾಗಿದೆ. ನಾವೇರಿದ ಎತ್ತರದಿಂದ ಗೆರೆಗಳಂತೆ ತೋರುವ ನದಿಗಳೊಡನೆ ಬರಿಯ ಕೆಂಪಾದ ಭೂಮಿಯನ್ನಲ್ಲದೆ ಮತ್ತೇನನ್ನೂ ನೋಡಲಾರಿರಿ. ಅಲ್ಲಿ ಇಲ್ಲಿ ಹುಲ್ಲುಗಾವಲಿನ ತುಂಡುಗಳಂತೆ ಕೆಲವು ಮರಗಳ ಗುಂಪನ್ನು ಕಾಣಬಹುದಲ್ಲದೆ ಸಾಮಾನ್ಯ ಮರಮಟ್ಟುಗಳು ಕಾಣಿಸುವುದೇ ಇಲ್ಲ.

× × ×

"ಕಳೆದ ಸಂಜೆ ನಾನು ಅಪ್ಯಾತ ಶಿಲೆಯ ಕಮಾನು, ಹೈಡ್‌ಪಾರ್ಕ್, ಕೆನ್ಸಿಂಗ್‌ಟನ್, ವೆಸ್ಟ್‌ಮಿನಿಸ್ಟರ್ ಚರ್ಚ, ವೈಟ್ ಹಾಲ್, ಜೇಮ್ಸಪಾರ್ಕ, ಪಿಕ್ಯಾಡಿಲ್ಲಿ, ಬಾಂಡ್‌ಸ್ಟ್ರೀಟ್ ಮೊದಲಾದುವನ್ನು ನೋಡಿದೆ. ಆಗ ನಾನು ನನ್ನ ಧೋತ್ರ ಮತ್ತು ಅಂಗಿಯಲ್ಲೇ ಇದ್ದೆ. ಅವನ್ನು ಹಾಕಿಕೊಂಡರೂ ಲಂಡನ್ನಿನಲ್ಲಿ ಸೆಕೆಯೆನಿಸುತ್ತದೆ. ನಮ್ಮ ಹಳೆಯ ಕಾಲದ ಸುಖಸಮೃದ್ಧಿಗಳ ಲಂಡನ್ ನಗರವು ಸಂಪೂರ್ಣವಾಗಿ ಬದಲಾಯಿಸಿ ಹೋದಂತೆ ತೋರುತ್ತದೆ.

ಅಲ್ಲಿ ಸೀದಾ ಪದ್ಧತಿಯು ಬಹು ದೊಡ್ಡ ಪ್ರಮಾಣದಲ್ಲಿ ನಡೆಯುತ್ತಿರುವಂತೆ ತೋರುತ್ತದೆ. ಎಲ್ಲರ ಹಿತಕ್ಕಾಗಿ ಮಿತಾಹಾರ ಭಕ್ಷಣ ಮಾಡುವುದರಲ್ಲಿ ಸ್ವಸಂತೋಷದಿಂದ ಸಹಕಾರವಿತ್ತ ಜನತೆಯನ್ನು ಮೆಚ್ಚಬೇಕಾಗಿದೆ. ನಮ್ಮಲ್ಲಿ ಇದರ ವಿರುದ್ಧವಾಗಿ ಜನತೆಯು ಈ ಬಗ್ಗೆ ಏನೂ ಎಚ್ಚರ ತೆಗೆದುಕೊಂಡಿಲ್ಲ. ಇಲ್ಲಿ ಸೀದಾ ಪದ್ಧತಿಯು ಸರಿಯಾಗಿ ನಡೆಯುತ್ತಿರುವುದು ಸರಕಾರೀ ಅಧಿಕಾರದ ಯೋಗ್ಯತೆಯನ್ನು ಸೂಚಿಸುತ್ತದೆಂದು ಹೇಳಬೇಕಾಗಿದೆ. ಅದರೆ ಕಳ್ಳ ಪೇಟೆಯು ಸಮರ್ಥವಾಗಿ ನಡೆಯುದಂತಾದುದು ಜನತೆಯ ಆತ್ಮಸಂಯಮದಿಂದಲೇ ಎಂಬುದು ಸತ್ಯ. ನಮ್ಮ ಸಂಸ್ಕೃತಿಯು ಆತ್ಮಸಂಯಮ ಮತ್ತು ಇಂದ್ರಿಯ ನಿಗ್ರಹಗಳ ಮೇಲೆ ನಿಂತದ್ದಾದರೂ, ಸಾರ್ವಜನಿಕ ನಡತೆಯಲ್ಲಿ ಅದು ಇನ್ನೂ ತನ್ನ ವರ್ಚಸ್ಸನ್ನು ತೀರಬೇಕಾಗಿದೆ. ಇದೇ ನಮ್ಮ ಸ್ವರಾಜ್ಯದ ತಳಹದಿಯಾಗಬೇಕು."

ರಾಷ್ಟ್ರಧ್ವಜ

(ಇದೇ ಸಂಚಿಕೆಯ ಅಗ್ರಲೇಖದಲ್ಲಿ ಗಾಂಧೀಜಿ ಉಲ್ಲೇಖಿಸಿದ ರಾಷ್ಟ್ರಧ್ವಜ ಎಂಬ ಲೇಖನವು 'ಯಂಗ ಇಂಡಿಯಾ' ಪತ್ರಿಕೆಯ ೧೩-೪-೧೯೨೧ನೇ ತಾರೀಕಿನ ಸಂಚಿಕೆಯಲ್ಲಿ ಪ್ರಸಿದ್ಧವಾಗಿದೆ. ಅದನ್ನು ಕೆಳಗೆ ಕೊಡಲಾಗಿದೆ)

ಎಲ್ಲ ರಾಷ್ಟ್ರಗಳಿಗೂ ಧ್ವಜ ಅವಶ್ಯ. ಅದಕ್ಕಾಗಿ ಕೋಟ್ಯವಧಿ ಜನರು ಪ್ರಾಣಾರ್ಪಣ ಮಾಡಿದ್ದುಂಟು. ನಿಶ್ಚಯವಾಗಿ ಅದೊಂದು ಬಗೆಯ ಧ್ಯೇಯನಿಷ್ಠೆ! ಅದನ್ನು ನಾಶಪಡಿಸುವದೆಂದರೆ ಮಹಾಪಾಪ. ಏಕೆಂದರೆ ಧ್ವಜವು ಮಾನವನ ಧ್ಯೇಯದ ಒಂದು ಪ್ರತೀಕ. ಯೂನಿಯನ್ ಜ್ಯಾಕನ್ನು ಹಾರಿಸುವದರಿಂದ ಇಂಗ್ಲೀಷರ ಹೃದಯದಲ್ಲಿ ಅಪರಿಮಿತ ಶಕ್ತಿಯ ಭಾವನೆಗಳು ಉದ್ದೀಪ್ತವಾಗುತ್ತವೆ. ಚಿಕ್ಕೆಗಳು ಮತ್ತು ಪಟ್ಟೆಗಳೆಂದರೆ ಅಮೇರಿಕನ್ನರಿಗೆ ಸರ್ವಸ್ವವೇ. ಚಿಕ್ಕೆ ಮತ್ತು ಚಂದ್ರಮ ಮುಸಲ್ಮಾನರಲ್ಲಿ ಶೌರ್ಯೋದ್ದೀಪಕವಾಗಿವೆ.

ಹಿಂದುಸ್ತಾನದಲ್ಲಿ ವಾಸಿಸುವವರಿಗೆಲ್ಲ, ಹಿಂದು, ಮುಸಲ್ಮಾನ, ಕ್ರಿಶ್ಚನ್, ಯಹುದಿ, ಪಾರಸಿ ಮತ್ತು ಉಳಿದೆಲ್ಲ ಜಾತಿಯ ಜನರಿಗೆ ಸಾಮಾನ್ಯವಾದ ಧ್ವಜವೊಂದು ಅವಶ್ಯ. ಜೀವಿಸಲಿಕ್ಕೂ ಪ್ರಾಣಾರ್ಪಣ ಮಾಡಲಿಕ್ಕೂ ಧ್ವಜದ ಅವಶ್ಯಕತೆಯಿದೆ.

ಮಚ್ಛಲೀಪಟ್ಟಣದ ರಾಷ್ಟ್ರೀಯ ಕಾಲೇಜಿನ ಶ್ರೀ ಪಿ. ವೆಂಕಯ್ಯ ಇವರು ಬೇರೆ ಬೇರೆ ರಾಷ್ಟ್ರಗಳ ಧ್ವಜಗಳನ್ನು ವರ್ಣಿಸಿ, ಹಿಂದುಸ್ತಾನದ ರಾಷ್ಟ್ರಧ್ವಜದ ರೂಪರೇಷೆಗಳನ್ನು ಸೂಚಿಸುವ ಪುಸ್ತಿಕೆಯೊಂದನ್ನು ಕೆಲ ವರ್ಷಗಳ ಹಿಂದೆ ಪ್ರಸಿದ್ಧಿಸಿರುವರು. ಕಳೆದ ನಾಲ್ಕು ವರುಷಗಳಲ್ಲಿ ಕಾಂಗ್ರೆಸ್ಸಿನ ಪ್ರತಿಯೊಂದು ಅಧಿವೇಶನದಲ್ಲಿ ಶ್ರೀ. ವೆಂಕಯ್ಯಾ ಇವರು ರಾಷ್ಟ್ರಧ್ವಜದ ವಿಷಯವನ್ನು ಸತತವಾಗಿ ಎತ್ತಿದ್ದು ಅಭಿನಂದನೀಯವಾಗಿದ್ದರೂ ನನ್ನಲ್ಲಿ ಭಾವನೋದ್ದೀಪನ ಮಾಡಲು ಅವರು ಸಮರ್ಥರಾಗಲಿಲ್ಲ. ಅವರ ರಾಷ್ಟ್ರಧ್ವಜದ ನಕ್ಷೆಯಲ್ಲಿ ರಾಷ್ಟ್ರದ ಭಾವನೆಗಳು ಉದ್ದೀಪಿತವಾಗುವಂತಹದೇನೂ ಇರುವದಿಲ್ಲ. ಇಡೀ ರಾಷ್ಟ್ರದ ಲಕ್ಷ್ಯವನ್ನು ಆಕರ್ಷಿಸುವ ಮಹದ್ಭಾಗ್ಯ ಪಂಜಾಬಿಗಳಿಗೊಬ್ಬರಿಗೆ ಮೀಸಲಾಗಿದ್ದಿತು. ಜಲಂದರದ ಲಾಲಾ ಹಂಸರಾಜರು ಚರಕದ ಶಕ್ಯತೆಯನ್ನು ಚರ್ಚಿಸುವಾಗ ಸ್ವರಾಜ್ಯ ಧ್ವಜದಲ್ಲಿ ಅದಕ್ಕೆ ಸ್ಥಾನ ಸಿಕ್ಕುವದವಶ್ಯವೆಂದು ಸೂಚಿಸಿದರು. ಈ ಸೂಚನೆಯ ಕಲ್ಪನಾಶಕ್ತಿಗಾಗಿ ಅಭಿನಂದನೆಗಳನ್ನು ಸಲ್ಲಿಸಬೇಕಾಗಿದೆ.

ಕೆಂಪು (ಹಿಂದುಗಳ ಬಣ್ಣ), ಹಸಿರು (ಮುಸಲ್ಮಾನರ ಬಣ್ಣ) ಬಣ್ಣಗಳ ಹಿನ್ನೆಲೆಯಲ್ಲಿ ರಾಟೆಯುಳ್ಳ ರಾಷ್ಟ್ರಧ್ವಜದ ನಕ್ಷೆಯೊಂದನ್ನು ತಯಾರ ಮಾಡಿಕೊಡಬೇಕೆಂದು ಶ್ರೀ ವೆಂಕಯ್ಯನವರಿಗೆ ನಾನು ಬಿಝವಾಡಾದಲ್ಲಿ ಹೇಳಿದೆ. ಅವರ ಅ ಮಿತಿಮೀರಿದ ಉತ್ಸಾಹದ ಮೂಲಕ ಮೂರು ಗಂಟೆಗಳಲ್ಲಿಯೆ ನನಗೆ ಆ ಧ್ವಜ ದೊರೆಯಿತು. ಅದರೆ ಅಖಿಲ ಭಾರತ ಸಮಿತಿಗೆ ಒಪ್ಪಿಸುವುದಕ್ಕೆ ಅನುಕೂಲವಾಗುವಷ್ಟು ಬೇಗ ಅದು ದೊರೆಯಲಿಲ್ಲ. ಹಾಗಾದುದಕ್ಕೆ ನನಗೆ ಸಂತೋಷವೆನಿಸಿತು. ಹೆಚ್ಚು ವಿಚಾರ ಮಾಡಲಾಗಿ ಉಳಿದ ಜಾತಿಯವರನ್ನು ಪ್ರತಿನಿಧಿಸುವ ಹಿನ್ನೆಲೆಯು ರಾಷ್ಟ್ರಧ್ವಜದಲ್ಲಿರಬೇಕೆಂದು ನನಗನಿಸಿತು. ಹಿಂದು ಮುಸಲ್ಮಾನರ ಐಕ್ಯವೆಂಬುದೇನು, ಬೇರೆ ಎಲ್ಲ ಜಾತಿಗಳನ್ನು ಹೊರತು ಪಡಿಸಿದುದಲ್ಲ; ಹಿಂದುಸ್ತಾನದಲ್ಲಿ ವಾಸಿಸುವ ಎಲ್ಲ ಜಾತಿಗಳ ಐಕ್ಯದ ಸಂಕೇತವದು. ಎಲ್ಲವನ್ನೂ ಒಳಗೊಂಡ ಕಲ್ಪವದು. ಹಿಂದು ಮತ್ತು ಮುಸಲ್ಮಾನರು ಪರಸ್ಪರ ಸಹಿಷ್ಣುಗಳಾದರೆ ಉಳಿದ ಎಲ್ಲ ಧರ್ಮದವರನ್ನೂ ಸಹಿಷ್ಣುತಾಭಾವದಿಂದ ಅವರು ಕಾಣಲಿಕ್ಕೆ ಬೇಕು. ಹಿಂದು ಮುಸಲ್ಮಾನರ ಐಕ್ಯವು ಹಿಂದುಸ್ತಾನದಲ್ಲಿಯ ಅಲ್ಲವೆ ಜಗತ್ತಿನಲ್ಲಿಯ ಉಳಿದ ಧರ್ಮಗಳಿಗೆ ಗಂಡಾಂತರಪ್ರದವಲ್ಲ. ಅದುದರಿಂದ ಧ್ವಜದ ಹಿನ್ನೆಲೆ ಬಿಳಿ, ಹಸಿರು ಮತ್ತು ಕೆಂಪು ಇರಬೇಕೆಂದು ನಾನು ಸೂಚಿಸುತ್ತೇವೆ. ಬಿಳಿಯದು ಉಳಿದೆಲ್ಲ ಜಾತಿಗಳನ್ನು ಪ್ರತಿನಿಧಿಸುವದು. ಸಂಖ್ಯಾಬಲದಿಂದ ಅತ್ಯಲ್ಪರಾದವರಿಗೆ ಮೊದಲನೆಯ ಸ್ಥಾನ, ಮುಸಲ್ಮಾನರ ಬಣ್ಣ ತದನಂತರ, ಹಿಂದು ಬಣ್ಣವಾದ ಕೆಂಪು ಕೊನೆಯಲ್ಲಿ ಬರತಕ್ಕದ್ದು.

—೯ ನೇ ಪುಟಕ್ಕೆ

ಬರಹಗಾರರು ಕೊಡುವ ಸುದ್ದಿಯು ನಿಜವೆಂದು ನಂಬಿದರೆ ಲಂಡನ್ನಿನಲ್ಲಿ ಸಾರ್ವಜನಿಕರ ಸಹಕಾರವಿರುವುದರಿಂದ್ಲೂ ಇಲ್ಲಿ ಅನ್ಯಥಾವಾದ ಕಳ್ಳ ಪೇಟೆಯಿರುವುದರಿಂದ್ಲೂ ಭಯಂಕರವಾದ ತಾರತಮ್ಯವಿದೆಯೆನ್ನಬಹುದು.

ಮೋ. ಕ. ಗಾಂಧಿ

ಗಾಂಧೀಜಿಯ ಭಾಷಣಗಳು

ಹೊಸದಿಲ್ಲಿ, ೨೦—೭—೪೭

ಹಿಂಬಟಿ ಹೋದುದಕ್ಕೆ ಚಿಂತಿಸದಿರಿ

"ನನ್ನ ಪ್ರಾರ್ಥನೋತ್ತರ ಭಾಷಣಗಳಿಂದ ಜನರಲ್ಲಿ ಸಾಕಷ್ಟು ವಿಷಾದವೇ ಮೂಡುತಿದೆಯೆಂದು ಕೆಲ ಗೆಳೆಯರು ಮುಖದಿಂದ ಮೇಲೆ ತಿಳಿಸಿ ಹೇಳುತಿದ್ದಾರೆ," ಎಂದು ಗಾಂಧೀಜಿ ಇಂದಿನ ಭಾಷಣದಲ್ಲಿ ಹೇಳಿದರು. "ಹೇಳ ಕೇಳ ನಾವು ಜೀವನಪಾಶದಲ್ಲಿ ಎಷ್ಟಕಾಗಿ ಹೋರಾಡಿದೆವೋ ಆ ಸ್ವಾತಂತ್ರ್ಯವಿಂದು ನಮ್ಮ ಬಾಗಿಲಿಗೆ ಬಂದಿದೆ. ರಾಜಕೀಯ ಸ್ವಾತಂತ್ರ್ಯವಿಲ್ಲದೆ ಆರ್ಥಿಕ ಸ್ವಾತಂತ್ರ್ಯವಾಗಲಿ ನೈತಿಕ ಉನ್ನತಿಯಾಗಲಿ ದೊರೆಯಲಾರದೆಂದೂ ನನಗೆ ಗೊತ್ತಿದೆ. ಅಂಥ ಮೇಲೆ ನಾನೇಕೆ ಆನಂದಪಡಬಾರದು? ಎಂದು ಅವರ ಪ್ರಶ್ನೆ. ಈ ವಾದದಲ್ಲಿ ತಕ್ಕಮಟ್ಟಿಗೆ ಸತ್ಯಾಂಶವಿದೆಯೆಂದು ನಾನು ಒಪ್ಪುವೆ. ಆದರೆ ಸತ್ಯಕ್ಕೆ ಕಟ್ಟು ಬಿದ್ದ ಸತ್ಯಾಗ್ರಹಿ ನಾನು. ನನ್ನ ಹೃದಯಾಂತರಾಳದಿಂದ ಉಕ್ಕಿ ಬಾರದ ಮಾತನ್ನು ಬಾಯಿಂದ ಹೇಳುವುದು ನನ್ನಿಂದಾಗದು. ಹಿಂದುಸ್ತಾನದ ವಿಭಜನೆಯಾಗಿ ಹೋಯಿತು. ಅದಕ್ಕಾಗಿ ನಾನು ಸಂಕಟ ಪಡದಿರಲಾರೆ. ಆದರೆ ನನ್ನ ಭಾಷಣಗಳಿಂದ ನಿಮ್ಮಲ್ಲಿ ವಿಷಾದ ಹಬ್ಬಿದರೆ ಅದರ ತಪ್ಪು ನನ್ನದಲ್ಲ. ಹಿಂಬಟಿಹೋದುದಕ್ಕೆ ಚಿಂತಿಸಿ ಫಲವಿಲ್ಲ. ನಾನು ಜೀವನಪಾಶದಲ್ಲಿ ಅಂದಾಯುಗಾರನಾಗಿದ್ದವನು, ಆಶೆದಲ್ಲಿ ಬಹಳ ಸುಖವನ್ನು ಕಂಡವನು. ಆದರೆ ನನ್ನ ಜೈತನ್ನ ಎಂದೆಂದೂ ಸೋಲು ಕಂಡಿಲ್ಲ. ನಾನು ಕಣ್ಣೀರು ಮಿಡಿಯುವವನೂ ಅಲ್ಲ, ಬೇರೆಯವರನ್ನು ಅಳಿಸುವವನೂ ಅಲ್ಲ. ಜನರ ಕಣ್ಣೀರನ್ನು ಒರೆಸುವದಕ್ಕಾಗಿಯೇ ನಾನು ನೌಖಾಲಿಗೆ ಹೋಗಿ ಪ್ರಾಣದ ಹಂಗನ್ನು ಹೋಗಿದೆನೆಂದು ಹೇಳಿದೆ. ಸತ್ಯಾಗ್ರಹಿಗೆ ಸೋಲೆಂಬದಿಲ್ಲ. ನಿಮ್ಮ ಮುಂದಾಳುಗಳು ತಪ್ಪು ಮಾಡಿರಬಹುದಾದರೂ ಅವರು ಅದನ್ನು ಅರಿತು ಮಾಡಿದವರಲ್ಲ. ತಾವು ಹೀಗೆ ಮಾಡಿದರೇನೇ ದೇಶಕ್ಕೆ ಹಿತವೆಂಬ ನಂಬಿಕೆಯಿಂದ ಅವರು ಮಾಡಿದ್ದಾರೆ. ಅವರು ಆನಂದಗೊಂಡಿದ್ದರೆ ನೀವೂ ಆನಂದಿಸಿರಿ. ನಿಮ್ಮ ಆನಂದವನ್ನು ಕಸಿದುಕೊಳ್ಳುವುದು ನನ್ನ ಕೆಲಸವಲ್ಲ. ಆಗಸ್ಟ ೧೫ಕ್ಕೆ ಉತ್ಸವವನ್ನು ಆಚರಿಸಬೇಕೆಂದು ಕಾಂಗ್ರೆಸ್ಸು ನಿಶ್ಚಯಿಸಿದರೆ ಯಾರಿಗೆ ಅದರಲ್ಲಿ ಸೇರಬೇಕೆನಿಸುವದೋ ಅವರು ಸೇರಲೇ ಬೇಕು. ಕಾಂಗ್ರೆಸ್ಸು ಪ್ರಜಾಸತ್ತಾತ್ಮಕ ಸಂಸ್ಥೆ. ಅದು ಮನಸ್ಸಿಲ್ಲದವರಾರನ್ನೂ ಯಾವುದೇ ಕೆಲಸಕ್ಕೆ ಒತ್ತಾಯಗೊಳಿಸಲಾರದು. ಬ್ರಿಟಿಶರು ಹೊರಟು ಹೋಗುತ್ತಿರುವರು ನಿಜ. ಅಷ್ಟಿಷ್ಟು ಜನ ಉಳಿದರೆ ಅವರು ನಮ್ಮ ಆಶ್ರಿತರಾಗಿ ಉಳಿಯುವರು."

ಆ ಮೇಲೆ ಗಾಂಧೀಜಿ ಕಾಂಗ್ರೆಸ್ಸಿನಂತೆ ನವಿಷಯ ಪ್ರತೀಕಾರರಿಂದ ಸಂಪಾದಿಸಿದ ವಿಜಯಕ್ಕೂ ಶಸ್ತ್ರಬಲದಿಂದ ಗಳಿಸುವದಕ್ಕೂ ಇರುವ ಅಂತರವನ್ನು ವಿವರಿಸಿದರು. ಈಗ ಅಧಿಕಾರ ನಮ್ಮ ಕೈಗೆ ಬರಲಿದೆ. ಆದರೆ ಹಿಂದುಗಳೂ ಮುಸ್ಲಿಮರೂ ಬೇರೆ ಬೇರೆ ರಾಷ್ಟ್ರಗಳಲ್ಲಾದರೂ ಬಂಧುಗಳಂತೆ ಬಾಳುವಂತಾದ ದಿನವೇ ನಿಜವಾದ ಹಬ್ಬದ ದಿನ, ಉತ್ಸವದ ದಿನವೆಂದು ಅವರು ಹೇಳಿದರು. ಗವರ್ನರ ಜನರಲರ ನಿಯುಕ್ತಿಯ ತೀರ್ಮಾನ ನಮ್ಮ ಇಚ್ಛೆಗೆ ವ್ಯತಿರಿಕ್ತವಾಗಿದ್ದರೆ ಹಿಂಸಾಚಾರ ನಿಶೇಧಿಸುವ ಬೆದರಿಕೆಯನ್ನು ಸಂಕಾಟ ಮುಸ್ಲಿಂ ಲೀಗು ಹಾಕಿದ್ದನ್ನು ಕೇಳಿ ಗಾಂಧೀಜಿ ವ್ಯಥೆ ಪಟ್ಟರು. ಕೆಲ ಜನ ಸೀಖರೂ ಹಾಗೆಯೇ ಹೇಳುತ್ತಿದ್ದಾರೆ. ಅಹಿಂಸೆಯ ಪ್ರವೃತ್ತಿ ವಿಷಾದಕರ. ಮಧ್ಯಸ್ಥಿಕೆ ಒಪ್ಪಿದ ಪಕ್ಷಗಳು ಮಾತಿಕ್ಕೆ ಅದು ತಂದಂತೆ ತರುವದು. ಒಮ್ಮೆ ಒಪ್ಪಿದ ಮೇಲೆ ಅದರ ತೀರ್ಮಾನಕ್ಕೆ ತಲೆವಾಗುವದು ಧರ್ಮ.

ಬ್ರಹ್ಮದೇಶದ ದುರಂತ

ಆ ಮೇಲೆ ಅವರು ಬ್ರಹ್ಮದೇಶದ ಭಯಾನಕ ದುರಂತವನ್ನು ಪ್ರಸ್ತಾಪಿಸಿದರು. ಯಾವ ಮುಂದಾಳುಗಳು ಹೋರಾಡಿ ಸ್ವಾತಂತ್ರ್ಯವನ್ನು ಪಡೆ ವಾಗಿಲಿಗೆ ತಂದರೋ ಅವರನ್ನೇ ಈ ಬಗೆಯಾಗಿ ಕೊಲೆಗೈದುದು ಕಳ್ಳನಾಶೀಕವೇ ಸರಿ. "ಬ್ರಹ್ಮದೇಶವೂ ಅವರ ಜನರೂ ನನಗೆ ಸಾಧಾರಣ ಪರಿಚಿತರಾಗಿದ್ದಾರೆ. ಅವರು ಈ ದೇಶದಿಂದ ಬೌದ್ಧ ಧರ್ಮವನ್ನು ಸ್ವೀಕರಿಸಿದ್ದಾರೆ, ಬ್ರಿಟಿಶರು ಅವರನ್ನು ನಮ್ಮಲ್ಲಿ ಸೇರಿಸಿದ್ದರು. ಅವರ ಅಭಿಲಾಷೆ ಬೇರೆಯಾಗಲು ನಿರ್ಧರಿಸಿದ್ದಾರೆ. ಅವರೂ ನಾವು ನಮ್ಮ ನೆರೆಯವರು. ನಮಗೂ ಅವರಿಗೂ ಇರುವ ಸಾಂಸ್ಕೃತಿಕ ಸಂಬಂಧ ಹತ್ತಿರದ್ದು. ಬುದ್ಧದೇವನ ಅನುಯಾಯಿಗಳು ಈ ಬಗೆಯಾಗಿ ಹಿಂಸೆಗೆಳಸಿದ್ದು ದುಃಖದಾಯಕ. ಈ ದುರಂತವು ಬ್ರಹ್ಮದೇಶಕ್ಕೆ ಶ್ರೇಯವಲ್ಲ. ಸಕಿಯೊಕ್ಕೆ ನಿತೆ ಇದೆಯಾಗಿ ದುರಂತಕ್ಕೆ ಇದು ಹಿಂದುಸ್ತಾನ ಪಾಠ ಕಲಿಯಲಿ. ಇದು ನಾವೂ ಕೊಲೆಯಾಗಿರದೆ ರಾಜಕೀಯ ಅಧಿಕಾರ ಲಾಲಸೆಯಿಂದ ಪ್ರೇರಿತವಾಗಿದೆಯೆಂದು ನಾನು ಅನುಮಾನಿಸುತ್ತೇನೆ. ಇಂಥ ಕೃತಿಗಳು ಇದಿ ಜಗತ್ತಿನಲ್ಲಿ ರಾಜಕೀಯ ಶಿಷ್ಟಾಚಾರ ಸಾಂಗೋಪಾಂಗವಾಗಿ ಕುಳಿತಿದೆ. ಇವು ಮಾನವಕುಲದ ಕಲ್ಯಾಣದ ಸಾಕ್ಷಿಗಳಲ್ಲ. ಹಿಂದುಸ್ತಾನದಲ್ಲಿಯೂ ಸಾಹಸದ ಕೃತಿಗಳು ನಡೆದಿವೆ. ಎಚ್ಚರಿಕೆ! ನಾವು ಪರಸ್ಪರ ಹತ್ಯೆಯ ಮಾರ್ಗದಿಂದ ಪರಾವೃತ್ತರಾಗೋಣ. ಕೊಲೆಯಾದ ಮುಂದಾಳುಗಳ ಬಳಗದವರಲ್ಲಿಯೂ ಬ್ರಹ್ಮದೇಶದ ಸರಕಾರದಲ್ಲಿಯೂ ಗಾಂಧೀಜಿ ಸಹಾನುಭೂತಿಯನ್ನು ವ್ಯಕ್ತಗೊಳಿಸಿ ತಮ್ಮ ಉದ್ದೇಶಸಾಧನೆಗಾಗಿ ಈ ಕೊಲೆಯಲ್ಲಿ ಪ್ರಸಕ್ತರಾದವರ ಹೃದಯಪರಿವರ್ತನೆಯಾಗಲೆಂದು ನಾವೆಲ್ಲ ಪ್ರಾರ್ಥಿಸೋಣವೆಂದರು. ಈಗ ಬೇಕಾಗಿರುವದು ಶಸ್ತ್ರ ಶಕ್ತಿಯಲ್ಲ, ಮನುಷ್ಯರ ಹೃದಯ ಪರಿವರ್ತನೆ ಮಾಡಿ ಅವರ ಬುದ್ಧಿಯಲ್ಲಿರುವ ರಕ್ತಪಿಪಾಸೆಯನ್ನು ನಿವಾರಿಸುವಂಥ ವಿವೇಕಬೋಧನೆ.

ಸ್ವಾಗತಾರ್ಹ ಬದಲಾವಣೆ

ಕೊನೆಯದಾಗಿ, ತಮ್ಮೆರಡು ಸೂಚನೆಗಳು "ಡಾನ್" ಪತ್ರಿಕೆಯ ಸಂಪಾದಕನಿಗೆ ಮನ್ನಣೆಯಾದುದಕ್ಕೆ ತಮಗೆ ಸಂತೋಷವಾಗಿದೆಯೆಂದು ಗಾಂಧೀಜಿ ಹೇಳಿದರು. ಅವನು ತನ್ನ ಪತ್ರಿಕೆಯಲ್ಲಿ ಲೇಖ ಬರೆದು ಪಾಕಿಸ್ತಾನದಲ್ಲಿ ಎಲ್ಲ ಅಲ್ಪಸಂಖ್ಯಾಕರನ್ನೂ ನ್ಯಾಯದಿಂದ ನಡೆಸಿಕೊಳ್ಳಲಾಗುವದೆಂದೂ ಅಲ್ಲಿ ಅವರು ಪೂರ್ಣ ಸುರಕ್ಷಿತರಾಗಿರುವರೆಂದೂ ಇಲ್ಲಿಯೂ ಎಲ್ಲರೂ ಬಂಧುಗಳಂತೆ ಬಾಳಬೇಕೆಂದು ತಾವು ಅಪೇಕ್ಷಿಸುತ್ತೇವೆಂದೂ ಅಶ್ವಾಸನ ಕೊಟ್ಟಿದ್ದಾರೆ. ಇದಲ್ಲದೆ ಸುದ್ದಿಗಳನ್ನು ಪ್ರಕಟಿಸುವ ಬಗೆಗೆ ನಾನು ಮಾಡಿದ ಸೂಚನೆಯೂ ಅವನಿಗೆ ಒಪ್ಪಿಗೆಯಾಗಿದೆ. ಪತ್ರಿಕಾ ವ್ಯವಸಾಯಿಯೆ ಆದ ನಾನು ಅದಕ್ಕಾಗಿ ಒಂದು ಸಮಿತಿಯನ್ನು ಸ್ಥಾಪಿಸಲು ಮುಂದಾಗಬೇಕೆಂದೂ ಅವನು ಬಿನ್ನವಿಸುತ್ತಾನೆ. ನನಗೆ ಅದಕ್ಕೆ ಬೇಕಾದ ಅವಕಾಶವೂ ಇಲ್ಲ; ಅಲ್ಲದೆ ನನ್ನ ದಕ್ಷತೆಯೂ ನಿಶ್ಚಿತವಿಲ್ಲ. ಆದರೆ ಉಳಿದ ಪತ್ರಿಕಾ ವ್ಯವಸಾಯಿಗಳನ್ನು ಈ ವಿಷಯದಲ್ಲಿ ಮಾತನಾಡಿಸುವದಕ್ಕೆ ಯಾವ ಅಡ್ಡಿಯೂ ಇಲ್ಲ.

"ಎಲ್ಲ ಕಡೆಗಳಲ್ಲಿಯೂ—ಹಿಂದುಸ್ತಾನದಲ್ಲಿರಲಿ ಪಾಕಿಸ್ತಾನದಲ್ಲಿರಲಿ—ಅಲ್ಪಸಂಖ್ಯಾಕರು ಸಮಾನವಾಗಿ ಸುರಕ್ಷಿತರಾಗಿರುವ ದಿನವನ್ನು ನಾನು ಹಾರೈಸುತ್ತಿದ್ದೇನೆ. ಅಗಲೇ ನಿಜವಾದ ಸ್ವಾತಂತ್ರ್ಯವೂ ಸಂತೋಷಕ್ಕೆ ಕಾರಣವೂ ಉಂಟಾದೀತೆಂದು ನನ್ನ ನಂಬಿಕೆ."

ಹೊಸದಿಲ್ಲಿ, ೨೧—೭—೪೭

ಅಗಸ್ಟ ೧೫ ರ ಸಮಾರಂಭಗಳು

ಪಾಕಿಸ್ತಾನ ವಿಭಾಗದಲ್ಲಿ ವಾಸಿಸುತ್ತಿರುವ ಮುಸ್ಲಿಮೇತರ ಗೆಳೆಯನೊಬ್ಬನು ಹೀಗೆ ಬರೆಯುತ್ತಾನೆ:

"ನಾಳೆ ಅಗಸ್ಟ ೧೫ನ್ನು ನೀವು ಸ್ವಾತಂತ್ರ್ಯ ದಿನವಾಗಿ ಸಮಾರೋಹದಿಂದ ಆಚರಿಸುವ ವಿಚಾರ ಮಾಡಿದ್ದೀರಿ. ಆದರೆ ಪಾಕಿಸ್ತಾನದಲ್ಲಿರುವ ಮುಸ್ಲಿಮೇತರರು ಆ ದಿನವನ್ನು ಹೇಗೆ ಆಚರಿಸಬೇಕಾಗಿದೆಯೆಂದು, ನಮ್ಮ ಹೃದಯದಲ್ಲಿ ಎಷ್ಟು ಆನಂದವಿದೆಯೆಂದು ನೀವೇನಾದರೂ ವಿಚಾರಿಸಿದ್ದೀರಾ? ನೀವು ಸುಖಸಮ್ಮೋದದಲ್ಲಿ ಆಸಕ್ತರಾಗಿರುವಾಗ ನಾವಿಲ್ಲಿ ನಮ್ಮ ಸುರಕ್ಷಿತತೆಯ ವಿಷಯದಲ್ಲಿ ಭಯಭೀತರಾಗಿರುವೆವು. ನಾವೇನು ಮಾಡಬಹುದೆಂದು ನೀವು ಸೂಚಿಸಬಲ್ಲಿರಾ? ಅದು ನಮಗೆ ದುಃಖದ ದಿನವಲ್ಲದೆ ಬೇರೇನಾದರೂ ಆಗಬಲ್ಲದೆ? ನಮ್ಮ ಮುಸ್ಲಿಂ ನೆರೆಹೊರೆಯವರು ಈಗಿಂದಲೇ ನಮ್ಮ ಹೃದಯದಲ್ಲಿ ಭೀತಿಯನ್ನು ಹುಟ್ಟಿಸ ತೊಡಗಿದ್ದಾರೆ! ಹಿಂದೀ ಒಕ್ಕೂಟದಲ್ಲಿರುವ ಮುಸ್ಲಿಮರು ನಿಮ್ಮನ್ನು ಚಿಂತಿಸುತ್ತಿದ್ದಾರು? ಅವರೂ ಇದೇ ಬಗೆಯ ಭಯಗ್ರಸ್ತರಾಗಿರಬಹುದಲ್ಲವೆ? ನಾವೆಷ್ಟು ಹೇಡಿಗಳಿದ್ದೆವೆಂದರೆ, ಇಷ್ಟಾದರೂ ಬಲಾತ್ಕಾರದಿಂದ ನಮ್ಮನ್ನೆಲ್ಲ ಮತಾಂತರಗೊಳಿಸುವ ಅಪಾಯ ಕೂಡ ಇದೆಯೆಂದು ನಮಗೆ ಅನಿಸುತ್ತಿದೆ. ಧೀರರಾಗಿರೆಂದೂ ಪ್ರತಿಯೊಬ್ಬನ ಧರ್ಮ ಅವನ ಕೈಲೇ ಇದೆಯೆಂದೂ ಹೇಳುವದು ನಿಮಗೆ ಸುಲಭ. ಅದು ಸಂನ್ಯಾಸಿಗಳ ಪಾಲಿಗೆ ನಿಜವಾಗಿದೀತು, ನಮ್ಮಂಥ ದುಃಖಕೊಂಡಿಗರಾದ ಬಡಸಂಸಾರಿಗಳಿಗಲ್ಲ."

ಇದಕ್ಕೆಲ್ಲ ನಾನು ಒಂದೇ ಉತ್ತರ ಕೊಡಬಲ್ಲೆ—ಆದೆಂದರೆ ಜಿನ್ನಾ ಸಾಹೇಬರು ಈಗ ಪಾಕಿಸ್ತಾನದ ಗವರ್ನರ ಜನರಲರಾಗಿದ್ದಾರೆ. ಅದರಿಂದ ಪಾಕಿಸ್ತಾನದಲ್ಲಿರುವ ಮುಸ್ಲಿಮೇತರರನ್ನೂ ಮುಸ್ಲಿಮರಂತೆಯೇ ಏನೊಂದೂ ಭೇದವಿಲ್ಲದೆ ನಡೆಸಿಕೊಳ್ಳಲಾಗುವದೆಂದು ಅವರು ಅಶ್ವಾಸನ ಕೊಟ್ಟಿದ್ದಾರೆ. ಈ ಮಾತಿನಲ್ಲಿ ವಿಶ್ವಾಸವಿಟ್ಟು ಹಿಂದುಸ್ತಾನದ ಆ ಭಾಗದಲ್ಲಿರುವ ಮುಸ್ಲಿಮೇತರರಿಗೆ ಏನೊಂದು ಅಪಾಯವಾಗಲಿಕ್ಕಿಲ್ಲೆಂದು ನಂಬಬೇಕು. ಅದೇ ಪ್ರಕಾರ ಹಿಂದೀ ಒಕ್ಕೂಟದಲ್ಲಿ ಬರುವ ಮುಸ್ಲಿಮರೂ ಸುರಕ್ಷಿತರಾಗಿರಬೇಕು. ಈಗ ಹಿಂದುಸ್ತಾನದಲ್ಲಿ ಎರಡು ರಾಜ್ಯಗಳಾಗಿವೆ. ಅದರಿಂದ ಅಲ್ಪಸಂಖ್ಯಾಕರ ಸುರಕ್ಷಿತತೆಯ ಬಗ್ಗೆ ಇದು ಅದಕ್ಕೂ ಅದು ಇದಕ್ಕೂ ಹೊಣೆಗಾರವಾಗಿರಬೇಕೆಂದು ನನ್ನ ಭಾವನೆ.

ಇಷ್ಟು ಮಾತ್ರ ನನಗೆ ನಿಜವಾಗಿ ಸಂಶಯವುಂಟು— ಅಲ್ಪಸಂಖ್ಯಾಕರು ಆ ದಿನವನ್ನು ಭಾರವಾದ ಹೃದಯದಿಂದ ನೋಡುವಾಗ ಅಗಸ್ಟ ೧೫ ಅವರಿಗೆ ಸಮ್ಮೋದದ ದಿನವೆನಿಸದು. ಅದು ಪ್ರಾರ್ಥನೆಯ ಮತ್ತು ಆಳವಾಗಿ ಹೃದಯಪರೀಕ್ಷೆ ಮಾಡಿಕೊಳ್ಳುವ ದಿನವಾಗಬೇಕು. ವಿಭಜನೆಯಾದರೂ ಅದು ಎಲ್ಲೆಡೆಗೂ ಉತ್ಸವ ದಿನವಾಗಲು ಒಂದೇ ಒಂದು ಹಾದಿಯುಂಟು. ಈಗಿಂದಲೇ ಇಬ್ಬರೂ ನಿಜವಾದ ಗೆಳೆಯರಾಗಲು ಪ್ರಯತ್ನಿಸಬೇಕು. ಅಂದರೆ ಅಗಸ್ಟ ೧೫ ರಷ್ಟು ಹೊತ್ತಿಗೆ ಉತ್ಸವಕ್ಕೆ ಅಣಿಯಾಗಬಹುದು. ಆದರೆ ಇದು ನನಗೊಬ್ಬನಿಗೇ ಸೇರಿದ ಅಭಿಪ್ರಾಯ.

ನಿರಾಶ್ರಿತರಿಗೆ ಆಶ್ರಯ

ಅದೇ ಗೆಳೆಯ ಕೇಳಿದ್ದಾನೆ—ಪಾಕಿಸ್ತಾನದಲ್ಲಿ ಭಯಾಕ್ರಾಂತರಾಗಿ ಅಲ್ಲಿಂದ ಹೊರಬೀಳುವವರಿಗೆ ಹಿಂದೀ ಒಕ್ಕೂಟದಲ್ಲಿ ಆಶ್ರಯ ದೊರೆತೀತೆ?

ಈ ವಿಷಯದಲ್ಲಿ ನನ್ನ ಅಭಿಪ್ರಾಯ ಸ್ಫುಟವಾಗಿದೆ: ಅಂಥ ಶರಣಾರ್ಥಿಗಳಿಗೆ ಹಿಂದೀ ಒಕ್ಕೂಟದಲ್ಲಿಯೂ ಇಲ್ಲಿಂದ ಹೋಗುವವರಿಗೆ ಅಲ್ಲಿಯೂ ಯೋಗ್ಯ ಆಶ್ರಯ ದೊರಕಲೇಬೇಕು. ಅಲ್ಲಿ ಶ್ರೀಮಂತರಾಗಿದ್ದವರು ಮಾತ್ರ ಇಲ್ಲಿಯೂ ತಮಗೆ ಪ್ರಾಸಾದತುಲ್ಯ ಭವನಗಳೇ ಬೇಕೆಂದರೆ ನಡೆಯದು; ಇದು ಎಲ್ಲಿಯೂ ಸಾಧ್ಯವಿಲ್ಲ. ಇದಲ್ಲದೆ ತಮಗೆ ದೊರೆಯುವ ಆಹಾರಕ್ಕೆ ಪ್ರತಿಯಾಗಿ ನಿರಾಶ್ರಿತರು ಕೆಲಸಮಾಡಬೇಕೆಂದೂ ನನಗೆನಿಸುತ್ತದೆ. ಕೆಲಸವಿಲ್ಲದೆ ಸಂಬಳವಿಲ್ಲ. ಆದರೆ ಮುಸ್ಲಿಮೇತರರು ಪಾಕಿಸ್ತಾನದಿಂದಲೂ ಮುಸ್ಲಿಮರು ಹಿಂದುಸ್ತಾನದಿಂದಲೂ ಓಡುವ ಪ್ರಸಂಗ ಬರಲಿಕ್ಕಿಲ್ಲೆಂದು ನನಗೆ ಆಶೆಯುಂಟು.

ಆ ಗೆಳೆಯ ತಿರುಗಿ ಕೇಳುತ್ತಾನೆ:

"ಪಾಕಿಸ್ತಾನ ಮನೆಮಾರು ಬಿಟ್ಟು ಬಂದವರ ಭೂಮಿ ಕಾಣಿಯ ಗತಿಯೇನು?

ಭೂಮಿ ಮನೆಮಾರುಗಳಿಗೆ ತತ್ಕಾಲಿಕ ಪೇಟೆಯ ಬೆಲೆಯನ್ನು ಸರಕಾರ ಕೊಡಬೇಕೆಂದು ನಾನೇ ತಿರುಗಿ ಮುರಿಗಿ ಹೇಳಿದ್ದೇನೆ. ನನಗೆ ಗೊತ್ತಿದ್ದ ಮಟ್ಟಿಗೆ ಹಾಗೆ ಪ್ರತಿಫಲ ದೊರೆಯುವಂತೆ ಮಾಡುವ ಕರ್ತವ್ಯ ಪ್ರತಿಸ್ಪರ್ಧಿ ಸರಕಾರದ್ದೆಂಬದು ರೂಢ ಸಂಪ್ರದಾಯ. ಆದರೆ ಪರಿಸ್ಥಿತಿ ಅಷ್ಟು ಅತಿರೇಕಕ್ಕೆ ಹೋಗಲಾರದೆಂದು ಹಾರೈಸೋಣ.

ದುಷ್ಕರ್ಮಿಗಳಿಗೆ ದಂಡನೆ

ಕೊನೆಯಲ್ಲಿ ಆ ಪತ್ರಲೇಖಕ ಹೇಳುತ್ತಾನೆ. "ನೀವು ವ್ಯಾವಹಾರಿಕ ಧ್ಯೇಯವಾದಿಯೆನಿಸಿಕೊಳ್ಳುತ್ತೀರಿ. ಈಗ ಸಂಭವಿಸುತ್ತಿರುವದು ಅಮಾನುಷವಾದುದು. ನಿಮ್ಮ ವ್ಯಾವಹಾರಿಕ ಅಹಿಂಸೆ ಈ ದುಷ್ಕರ್ಮಿಗಳನ್ನು ಹೇಗೆ ಪ್ರತಿರೋಧಿಸಬಲ್ಲದೆಂದು ವಿವರಿಸುವಿರಾ?

ನಾನು ವ್ಯವಹಾರಿಕ ಧ್ಯೇಯವಾದಿಯೆಂದು ಹೇಳಿಕೊಂಡದ್ದು ನಿಜವೆಂದೊಪ್ಪಿಕೊಳ್ಳುವೆ. ನಾನು ಉಪದೇಶಿಸಿದ್ದನ್ನು ಆಚರಿಸಿ ತೋರಿಸಲು ಯಾವಾಗಲೂ ಪ್ರಯತ್ನಿಸುತ್ತ ಬಂದಿದ್ದೇನೆ. ನನ್ನ ಆಚರಣೆ ಅಪೂರ್ಣವಾಗಿರಬಹುದಾದರೂ ನಾನು ಪ್ರಯತ್ನಿಸಿರುವೆನು ನಿಜ. ನನ್ನ ಕಲ್ಪನೆಯ ದುಷ್ಕರ್ಮಿಗಳು ಯಾರವರು? ಮನುಷ್ಯನಿಷೇಧಿಸಿರುವಂತೆ ಅವರ ಲಕ್ಷಣವಿರುವದೆ? ಅವರೆಲ್ಲರೂ ಇನ್ನೂ ನಿಗ್ರಹಿಸಲ್ಪಟ್ಟಿಲ್ಲ. ಇಂದು ಜಗತ್ತಿನಲ್ಲಿ ಮರಣದಂಡನೆಯನ್ನು ರದ್ದುಗೊಳಿಸಬೇಕೆಂದೊಂದು ಚಳವಳಿ ನಡೆಯುತ್ತಿದೆ. ಅಲ್ಲದೆ, ಸೆರೆಮನೆಗಳನ್ನು ಆಸ್ಪತ್ರೆಗಳಂತೆ ಮಾರ್ಪಡಿಸಿ ಅಲ್ಲಿ ದುಷ್ಕರ್ಮಿಗಳಿಗೆ ರೋಗಿಗಳೆ ಎಂಬಂತೆ ಚಿಕಿತ್ಸೆ ಮಾಡಬೇಕೆಂಬ ಪ್ರಯತ್ನಗಳೂ ನಡೆದಿವೆ. ಇದು ನಿಜವಾಗಿ ಸ್ತುತ್ಯವೆಂದು ನನ್ನ ಅಭಿಪ್ರಾಯ. ಇಷ್ಟಲ್ಲದರ ತಾತ್ಪರ್ಯವೇನೆಂದರೆ, ಧರ್ಮಶಾಸ್ತ್ರ ನಿರ್ಮಿಸಿಕೊಂಡದ್ದಲ್ಲ ನಿಜವಾಗಿ ಧರ್ಮಶಾಸ್ತ್ರನಾಗಿರಬೇಕೆಂದಿಲ್ಲ. ಅಲ್ಲದೆ ಕಾಲಮಾನಕ್ಕನುಸರಿಸಿ ಬದಲಿಸುವ ಅನಿವಾರ್ಯವಿರುವಂಥದೆ ನಿಜವಾದ ಶಾಸ್ತ್ರೀಯ ಧರ್ಮಶಾಸ್ತ್ರ. ಜನಜೀವನದಲ್ಲಿ ಅದು ಬಾಳಬೇಕಾದರೆ ಅದೂ ಕಾಲದೊಡನೆ ಪ್ರಗತಿಹೊಂದಬೇಕು. ಅವರವರೀಯಾದ ಸನಾತನತತ್ವಗಳು ಕೆಲವೇ ಇವೆ. ಅವುಗಳನ್ನು ವಿವರಿಸಲು ಸಾಂಪ್ರದಾಯಿಕ ಭಾಷ್ಯಗಳು ಬೇಕಾಗಿಲ್ಲ. ಭಾಷ್ಯಗಳು ಈ ಸನಾತನ ತತ್ವಗಳ ಅಚಲ ತಳಹದಿಯ ಮೇಲೆ ಕಟ್ಟಲ್ಪಡುವವು.

ಇದಲ್ಲದೆ ದುಷ್ಕರ್ಮಿಗಳನ್ನು ದಂಡಿಸುವ ಅಧಿಕಾರ ಎಲ್ಲರಿಗೂ ಇಲ್ಲ. ಶಿಷ್ಟ ಸಮಾಜಗಳಲ್ಲಿ ಆ ಅಧಿಕಾರ ಸರಕಾರಕ್ಕೊಂದಕ್ಕೇ ವಹಿಸಲಾಗಿರುವದು. ಅದು ಶಾಸನಗಳನ್ನು ಮಾಡಿ ಅವುಗಳನುಸಾರವಾಗಿ ನ್ಯಾಯದಾನ ಮಾಡಲು ನ್ಯಾಯಾಧೀಶರನ್ನು ನೇಮಿಸುವದು. ಹೀಗೆ ಮಾಡದಿದ್ದರೆ ನಾವೆಲ್ಲರೂ ದುಷ್ಕರ್ಮಿಗಳೇ ಆದೇವು. ಬ್ರಹ್ಮದೇಶದಲ್ಲಾದ ಹತ್ಯಾಕಾಂಡ ನಿಜವಾಗಿ ಭಯಾನಕವಾಗಿತ್ತು. ಈಗ ನಮಗೆ ಅವರ ಹಿಂದೆ ರಾಜಕೀಯ ಉದ್ದೇಶವಿತ್ತೆಂದು ನಿಶ್ಚಯವಾಗಿ ಗೊತ್ತಾಗಿದೆ. ಕೊಲೆ ಮಾಡಿದವರು ಆ ದೇಶಭಕ್ತರನ್ನು ದುಷ್ಟರೆಂದೇ ಬಗೆದಿದ್ದರೆಂಬಲ್ಲಿ ನನಗೆ ಸಂದೇಹವಿಲ್ಲ. ಅವರನ್ನು ಕೊಂದು ತಾವೊಂದು ದೊಡ್ಡ ಪುಣ್ಯ ಮಾಡುತ್ತಿರುವೆವೆಂದೇ ಅವರು ತಿಳಿದಿರಬೇಕು. ನಮ್ಮ ಭಯೋತ್ಪಾದಕ ದೇಶಪ್ರೇಮಿಗಳೂ ಹಾಗೆಯೆ ಭಾವಿಸುತ್ತಿದ್ದಿಲ್ಲವೆ? ತಾವು ಯಾರನ್ನು ನಾಶಮಾಡಿದೆವೊ ಅವರೆಲ್ಲರೂ ಮನುವಿನ ವರ್ಣನೆಯಂತೆ ದುಷ್ಟರೇ ಇದ್ದರೆಂದು ತಮ್ಮ ನಂಬುಗೆಯೆಂಬದಾಗಿ ಅವರು ನನ್ನ ಮುಂದೆ ಹೇಳಿದ್ದುಂಟು. ಅವರಿಗೆ ಹೊಸ ಬೆಳಕು ಕಾಣುವವರೆಗೂ ತಾವು ಗುಂಡಿಕ್ಕಿ ಕೊಂದುದರಲ್ಲಿ ಏನೂ ತಪ್ಪಿಲ್ಲವೆಂದೇ ಅವರ ಗ್ರಹಿಕೆಯಾಗಿತ್ತು. ಅದರಿಂದಲೇ ಹೆರವರು ತಪ್ಪುಗಾರರೆಂದು ತೀರ್ಮಾನಿಸಿ ಅವರನ್ನು ದಂಡಿಸಲು ಯಾರು ತಾವೇ ಮುಂದಾಗುವರೋ ಅವರೇ ತಪ್ಪುಗಾರರೆಂದು ನಾನು ಹೇಳುತ್ತೇನೆ. ಅಹಿಂಸೆಯಿಂದ ದೂರವಾದ ನ್ಯಾಯ ಸಾಧ್ಯವಿದೆಯೆಂದೊಪ್ಪಿದರೂ ಅಂಥ ನ್ಯಾಯದಾನ ಯೋಗ್ಯ ರೀತಿಯಿಂದ ನಿರ್ಮಿಸಲ್ಪಟ್ಟ ನಿಷ್ಪಕ್ಷಪಾತಿ ನ್ಯಾಯಮಂಡಲದಿಂದ ಬಂದಾಗಲೇ ನ್ಯಾಯವೆನಿಸೀತು. ಇಂದು ನಡೆಯುತ್ತಿರುವದು ದುಷ್ಟಾಚಾರದ ಜಾತಿಗೇ ಸೇರಿದ್ದು.

ಹೊಸದಿಲ್ಲಿ ೨೨—೭—೪೭

ವೈಸರಾಯ ಭವನ

ಇಂದಿನ ಪ್ರಾರ್ಥನೋತ್ತರ ಭಾಷಣದಲ್ಲಿ ಗಾಂಧೀಜಿ ತಮಗೆ ಇಂದೇ ಬಂದ ಒಂದು ಪತ್ರದ ಮಾತೆತ್ತಿದರು. ಅದರಲ್ಲಿ ಪತ್ರಲೇಖಕನು, ವೈಸರಾಯರನ್ನು ಗಾಂಧೀಜಿ ಸಿಕ್ಕಾಬಟ್ಟೆ ಹೊಗಳುತ್ತಿರುವದಕ್ಕೆ ಅವರ ಸಮಾಚಾರ ತೆಗೆದುಕೊಂಡಿದ್ದನು. ಅಲ್ಲದೆ ಅವರು ಎರಡನೆ ದುಂಡು ಮೇಜಿನ ಪರಿಷತ್ತಿನಲ್ಲಿ, ಸ್ವತಂತ್ರ ಹಿಂದುಸ್ತಾನದಲ್ಲಿ ವೈಸರಾಯ ಭವನವನ್ನು ಹರಿಜನರ ಮತ್ತು ಇತರ ಬಡಜನರ ಶುಶ್ರೂಷಾ ಗೃಹವಾಗಿ ಮಾರ್ಪಡಿಸಲಾಗುವದೆಂದು ಸಾರಿದ್ದುದನ್ನು ಅವರ ನೆನವರಿಕೆಗೆ ತಂದು ಕೊಟ್ಟಿದ್ದನು. ಯಾರ ಮೇಲೂ ತಾವು ಅಪ್ರಸ್ತುತ ಪ್ರಶಂಸೆಯನ್ನು ಮಳೆಗರೆಯುವವರಲ್ಲವೆಂದು ಗಾಂಧೀಜಿ ಉತ್ತರ ಕೊಟ್ಟರು. "ಬದಲಿಗೆ ಗೆಳೆಯರಲ್ಲಿ ಅನಾವಶ್ಯಕ ಕಠೋರತೆಯನ್ನು ತೋರಿಸುತ್ತೇನೆಂದು ನನ್ನ ಮೇಲೆ ದೂರುಂಟು. ವಾಯಿಸರಾಯರಾದ ಲಾರ್ಡ ಮೌಂಟಬ್ಯಾಟನ್ನರನ್ನು ಗವರ್ನರ ಜನರಲ್ಲರಾಗಿ ಉಳಿಯಬೇಕೆಂದು ಕೇಳಲು ಅವರು ತಮ್ಮ ಕರ್ತವ್ಯವನ್ನು ದಕ್ಷತೆಯಾಗಿ ನಿರ್ವಹಿಸಲೆಂಬ ದೃಷ್ಟಿಯಿಂದಲೇ ಹಿಂದಿನ ಪಾಪಗಳನ್ನು ತೊಳೆಯಲು ಅವರು ಕೈಲಾದಷ್ಟು ಪ್ರಯತ್ನ ಮಾಡುತ್ತಾರೆ.

"ನನ್ನ ಮಟ್ಟಿಗೆ ನಾನು ವೈಸರಾಯರನ್ನು ಭಂಗೀ ವಸತಿಗೆ ಬನ್ನಿರೆಂದು ಸಂತೋಷದಿಂದ ಕರೆದೇನು. ಆದರೆ ಅವರು ನಿರ್ವಹಿಸಬೇಕಾದ ಕೆಲಸವನ್ನು ನೋಡಿದರೆ ಇದು ದುಸ್ತರವೇ ಸರಿ. ವೈಸರಾಯ ಭವನ ಆಸ್ಪತ್ರೆಯಾಗಿ ಮಾರ್ಪಡಬೇಕೋ ಬೇಡವೊ ಎಂಬುದನ್ನು ನಿರ್ಣಯಿಸುವವನು ನಾನಲ್ಲ. ಒಕ್ಕೂಟ ಸರಕಾರದ ಸಚಿವರು ಅದಕ್ಕೆ ಉತ್ತರ ಕೊಡಲು ಅಧಿಕಾರಿಗಳು. ಹಿರಿಯ ಅಧಿಕಾರಿಗಳನ್ನು ಹೆಚ್ಚು ವೆಚ್ಚವಿಲ್ಲದೆ ಒಂದೆಡೆಯಿಂದ ಇನ್ನೊಂದೆಡೆಗೆ ಬದಲಿಸುವದು ಸುಲಭವಲ್ಲ."

ಸೈನ್ಯವೂ ಸ್ವಾತಂತ್ರ್ಯವೂ

ಇನ್ನೊಬ್ಬ ಗೆಳೆಯ, ಸೈನ್ಯದ ವಿಭಜನೆಗೂ ಬ್ರಿಟಿಶ ಅಧಿಕಾರಿಗಳು ಅದರಲ್ಲಿ ಉಳಿಯುವದಕ್ಕೂ ಗಾಂಧೀಜಿಯ ಸಮ್ಮತಿಯುಂಟೇನೆಂದು ಕೇಳಿದ್ದ. "ಮೊದಲು ಸೈನ್ಯವನ್ನು ಬಿಟ್ಟುಕೊಟ್ಟುದಕ್ಕೇ ನನ್ನ ಸಮ್ಮತಿಯುಂಟೇನೆಂದು ಅವನು ಕೇಳಬೇಕಾಗಿತ್ತೆಂ"ದರು ಗಾಂಧೀಜಿ. "ಈಗಿರುವಂತಾದರೆ, ಸ್ವತಂತ್ರ ಹಿಂದುಸ್ತಾನದಲ್ಲಿ

—೯ ನೇ ಪುಟಕ್ಕೆ

ಗಾಂಧೀಜಿಯ ಭಾಷಣಗಳು

(೮ನೇ ಪುಟದಿಂದ)

ಸೈನ್ಯದ ವೆಚ್ಚ ಮೊದಲಿಗಿಂತ ಹೆಚ್ಚಾದೀತಲ್ಲದೆ ಕಡಿಮೆಯಾಗದು. ಇದಕ್ಕೆ ನನ್ನ ಸಮ್ಮತಿ ಎಂದೆಂದೂ ದೊರೆಯದು. ಸೈನ್ಯವೆಂದರೇ ನನಗೆ ಅಂಜಿಕೆ. ಹಿಂದುಸ್ತಾನವೂ ಸೈನ್ಯದ ಆಳಿಕೆಯ ಅವ್ಯವಸ್ಥೆಯನ್ನು ದಾಟಿಯೇ ಹೋಗಬೇಕಾದೀತೆ? ವರ್ಷವರ್ಷಗಳಿಂದ ನಮಗೆ ಸೈನ್ಯವೇಬೇಡೆಂದು ಹೇಳುತ್ತ ಬಂದಿದ್ದೇವೆ. ನಾನೇನೋ ಇಂದಿಗೂ ಈ ಮಾತಿಗೆ ಅಂಟಿಕೊಂಡಿದ್ದೇನೆ. ಆದರೆ ಉಳಿದವರ ಮಾತು ಹಾಗಲ್ಲ. ಹೊಸ ಪೀಳಿಗೆಯೊಂದು ಉದಯಿಸಿದೆ. ಹಿಂದುಸ್ತಾನದ ದಾಸ್ಯಕಾಲದಲ್ಲಿ ತಾವು ಮಾಡಿದ್ದಕ್ಕೆ ಈಗ ಕಾಂಗ್ರೆಸ್ಸಿಗರು ಬದ್ಧರಾಗಿಲ್ಲ. ಈ ಬದಲಾವಣೆಗಾಗಿ ಅವರನ್ನು ದೂರುವದು ನನ್ನ ಉದ್ದೇಶವಲ್ಲ. ನಿಷ್ಕ್ರಿಯ ಪ್ರತೀಕಾರವನ್ನೇ ನಾನು ಸತ್ಯಾಗ್ರಹವೆಂದು ಭ್ರಮಿಸಿದ್ದೆ. ಜನರ ಹೃದಯದಲ್ಲಿ ಹಿಂಸೆಯಿಂದ ತುಂಬಿದೆ. ಬ್ರಿಟಿಶ್ ಸರಕಾರ ಹೊರಟಿದ್ದು ನಿಂತಾಗ ಈಗ ಇಷ್ಟು ದಿನದ ಸಂಚಿತ ಹಿಂಸಾಬುದ್ಧಿ ಒಮ್ಮೆಲೆ ಪುಟಿದೆದ್ದು ಬಂಧುಹತ್ಯೆಯಲ್ಲಿ ಪರಿಣಮಿಸಿದೆ. ಪ್ರತಿಯೊಂದು ಪಾಪವೂ ಸೈನ್ಯಸಹಾಯ ಕೇಳುತ್ತಿದೆ. ನಾವು ಸಕಾಲದಲ್ಲಿ ಎಚ್ಚರವಾಗದಿದ್ದರೆ ಇಲ್ಲಿ ನೈತಿಕ ಸರ್ವಾಧಿಕಾರದ ಸ್ಥಾಪನೆಯಾಗುವ ಗಂಡಾಂತರವೂ ಇದೆ. ಸ್ವಾತಂತ್ರ್ಯವೆಂದರೆ ಇದೇ ಏನು?"

ರಾಷ್ಟ್ರಧ್ವಜ

ಕಾಂಗ್ರೆಸ್ಸಿನ ಧ್ವಜವೇ ರಾಷ್ಟ್ರಧ್ವಜವಾದುದಕ್ಕೆ ಧನ್ಯವಾದವನ್ನರ್ಪಿಸಲು ಈ ಮಧ್ಯಾಹ್ನ ಗಾಂಧೀಜಿಯೆಡೆಗೆ ಘಟನಾ ಸಮಿತಿಯ ಸದಸ್ಯೆಯರಾದ ನಾಲ್ವರು ಭಗಿನಿಯರು ಬಂದರು. ಖಲೀಕುಜ್ಜಮಾನ ಸಾಹೇಬರೂ ಸಾದುಲ್ಲಾ ಸಾಹೇಬರೂ ಸಮಾರಂಭದಲ್ಲಿ ಸೇರ್ಪಡೆಯಾಗಿದ್ದರೆಂದು ಗಾಂಧೀಜಿಗೆ ತಿಳಿಸಲಾಯ್ತು. ಅದೊಂದು ಶುಭಶಕುನ. ಬಾವುಟದಲ್ಲಿ ಚರಕವಿಲ್ಲದುದಕ್ಕೂ ಖಾದಿಯು ಸ್ಥಾನಭ್ರಷ್ಟವಾದುದಕ್ಕೂ ಮತ್ತೆ ಕೆಲವರು ದುಃಖಪ್ರದರ್ಶನ ಮಾಡಿದ್ದರು. ಬೇರೆ ಕೆಲವರು ಚಕ್ರ ಚರಕವನ್ನು ಬಿಳಿಯ ಪಟ್ಟಿಯ ಮೇಲೆ ಪ್ರತಿನಿಧಿಸುತ್ತದೆಂದು ಪ್ರತಿಪಾದಿಸಿದರು. ಅವರ ಭಾವನೆಯನ್ನು ಧ್ವಜ ನಿಜವಾಗಿ ಬಿಂಬಿಸುವುದಾದರೆ—ಚರಕ ಮತ್ತು ಖಾದಿಗಳು ಅವರ ಹೃದಯಗಳಲ್ಲಿದ್ದುದಾದರೆ—ಸರಿಹೋಯಿತು. ಅಲ್ಲದಿದ್ದರೆ, ಧ್ವಜ ತನ್ನ ಪಾಲಿಗೆ ಅಪ್ರಯೋಜಕವೇ ಸರಿಯೆಂದು ಗಾಂಧೀಜಿ ಅಭಿಪ್ರಾಯ ಪಟ್ಟರು.

ಸಿಲ್ಹೆಟಿನಲ್ಲಿ ಪುಂಡತನ

ಮತಗಣನೆಯ ನಂತರ ಭಯೋತ್ಪಾದಕ ಚಟುವಟಿಕೆಗಳು ಎಲ್ಲೆಲ್ಲೂ ತುಂಬಿಹೋಗಿವೆಯೆಂದು ಗಾಂಧೀಜಿಗೆ ಸಿಲ್ಹೆಟ್ಟಿನಿಂದ ಒಂದು ತಂತಿ ಬಂದಿತ್ತು. ರಾಷ್ಟ್ರೀಯ ಮುಸ್ಲಿಮರಿಗೆ ಬಹಳ ತೊಂದರೆ ಕೊಡಲಾಗುತ್ತಿತ್ತು. ಪರಿಸ್ಥಿತಿಯ ಅವಲೋಕನಕ್ಕಾಗಿ ಯಾರನ್ನಾದರೂ ಕಳುಹಬೇಕೆಂದೂ ಅವರಿಂದ ಗಾಂಧೀಜಿ ಸತ್ಯ ಸಂಗತಿಯನ್ನು ತಿಳಿಯಬೇಕೆಂದೂ ಅವರು ಕೇಳಿದ್ದರು. ಅದು ಸರಕಾರದ ಇಲ್ಲವೆ ಕಾಂಗ್ರೆಸ್ಸಿನ ಅಧ್ಯಕ್ಷರ ಕೆಲಸ. ತನ್ನ ಹೃದಯ ಅವರ ದುಃಖದಲ್ಲಿ ಭಾಗಿಯೆಂದು ಸಿಲ್ಹೆಟ್ಟಿನ ಜನರಿಗೆ ಹೇಳಬಯಸುತ್ತೇನೆಂದು ಗಾಂಧೀಜಿ ನುಡಿದರು.

ನೌಖಾಲಿಗೆ ಹೋಗುವಾಗ ಅಗತ್ಯವಿದ್ದರೆ ಸಿಲ್ಹೆಟ್ಟನ್ನು ಖಂಡಿತವಾಗಿಯೂ ಭೆಟ್ಟಿಯಾಗುವುದಾಗಿ ಅವರು ಹೇಳಿದರು. ರೈಲಿನಿಂದ ಕೆಲವು ಮುಸಲ್ಮಾನರು ಇಳಿದು ಗದ್ದಲವೆಬ್ಬಿಸಿ ಕಡೆಗೆ ಲೂಟಿ ಕೊಳ್ಳಿಗಳಿಗೊಯ್ದು ಮುಟ್ಟಿಸಿದರೆಂದು ಮತ್ತೊಂದು ಕಾಗದ ಗಾಂಧೀಜಿಗೆ ಬಂದಿತ್ತು. ಒಂದು ಇಡಿಯ ಹರಿಜನಹಳ್ಳಿ ಸಂಪೂರ್ಣವಾಗಿ ನಾಶಗೊಳಿಸಲ್ಪಟ್ಟಿತು. ಈ ಹೇಳಿಕೆಯು ಅತಿಶಯೋಕ್ತಿಯದಾಗಲೆಂದು ಅವರು ಆಶಿಸಿದರು. ನಿಜವಿರುವುದಾದರೆ ಪರಿಸ್ಥಿತಿಯತ್ತ ಚೆನ್ನಾಗಿ ಲಕ್ಷ್ಯ ಕೊಡಬೇಕಾಗಿದೆ. ಪಾಕಿಸ್ತಾನ ಮತ್ತು ಹಿಂದೀ ಒಕ್ಕೂಟಗಳನ್ನು ತೂಕ ಮಾಡಲಾಗುತ್ತಿದೆ. ತಮ್ಮಲ್ಲಿ ಕೊರತೆಯಿರದಂತೆ ಅವು ಎಚ್ಚರಿಕೆ ತೆಗೆದುಕೊಳ್ಳಲಿ. ಸ್ವಾತಂತ್ರ್ಯದ ಮಧುರ ಫಲವನ್ನು ಸವಿಯುವ ಶಕ್ತಿಯನ್ನು ದಯಪಾಲಿಸೆಂದು ಅವು ದೇವರನ್ನು ಪ್ರಾರ್ಥಿಸಬೇಕು. ದೇವರು ಸರ್ವಶಕ್ತನು. ಅವನು ಮನುಷ್ಯರ ಹೃದಯಗಳನ್ನೂ ಪರಿವರ್ತಿಸಬಲ್ಲ ಮತ್ತು ಅವರಿಗೆ ನಿಜವಾದ ಶಾಂತಿಯನ್ನು ತಂದುಕೊಡಬಲ್ಲ.

ಹೊಸದಿಲ್ಲಿ ೨೩—೭—೪೭

ಪರಮಾತ್ಮನ ಸಾಕ್ಷಾತ್ಕಾರ

ಪ್ರಾರ್ಥನೆ ಪ್ರಾರಂಭದ ಮೊದಲು ಯಾರೋ ಒಬ್ಬರು ಗಾಂಧೀಜಿಗೆ ಒಂದು ಚೀಟಿಯನ್ನು ಕೊಟ್ಟರು. ನೀವು ಪರಮಾತ್ಮನನ್ನು ಸಾಕ್ಷಾತ್ಕರಿಸಿಕೊಂಡಿರುವಿರೋ ಎಂದು ಅದರಲ್ಲಿ ಕೇಳಲಾಗಿದ್ದಿತು. ಪ್ರಾರ್ಥನಾ ನಂತರ ಗಾಂಧೀಜಿ ಪರಮಾತ್ಮನನ್ನು ತಾವು ಸಾಕ್ಷಾತ್ಕರಿಸಿಕೊಂಡಿಲ್ಲೆಂದು ಹೇಳಿದರು. ಸಾಕ್ಷಾತ್ಕರಿಸಿಕೊಂಡಿದ್ದಾದರೆ ಭಾಷಣ ಮಾಡುವ ಅವಶ್ಯಕತೆಯೇ ತಮಗೆ ಉಳಿಯುತ್ತಿರಲಿಲ್ಲ. ಭಾಷೆ ಮತ್ತು ಕೃತ್ಯ ಅನವಶ್ಯವೆಂದು ಸಿದ್ಧಗೊಳಿಸಲು ತಮ್ಮ ಚಿಂತನೆಯೇ ಸಾಕಷ್ಟು ಸಮರ್ಥವಾಗುತ್ತಿದ್ದಿತು. ಆದರೆ ಪರಮಾತ್ಮನ ಅಸ್ತಿತ್ವದಲ್ಲಿ ತಮಗೆ ನಿರ್ವ್ಯಾಜ ಶ್ರದ್ಧೆಯಿದೆ. ಜಗತ್ತಿನಲ್ಲಿಯ ಕೋಟ್ಯವಧಿ ಜನರೂ ತಮ್ಮಂತೆ ಪರಮಾತ್ಮನಲ್ಲಿ ಆ ಬಗೆಯ ಶ್ರದ್ಧೆಯುಳ್ಳವರಾಗಿರುವರು. ಕೋಟ್ಯವಧಿ ನಿರಕ್ಷರಕುಕ್ಷಿಗಳ ಆ ಶ್ರದ್ಧೆಯನ್ನು ಪ್ರಸಿದ್ಧ ವಿದ್ವಾಂಸರೂ ಹೋಗಲಾಡಿಸಲಾರರು. ಪ್ರಾರ್ಥನೆಯ ಕಾಲಕ್ಕೆ ಮಾಡಿದ ಭಜನೆಯಲ್ಲಿ ಪರಮಾತ್ಮನ ಸಾಕ್ಷಾತ್ಕಾರದ ಮಾರ್ಗವನ್ನು ವರ್ಣಿಸಲಾಗಿದೆ. ಆ ಅತ್ಯುನ್ನತ ಸ್ಥಿತಿಯನ್ನು ಮುಟ್ಟಬಯಸುವವರೆಲ್ಲ ಕಾಮಕ್ರೋಧಗಳನ್ನು ಬಿಟ್ಟುಗೊಟ್ಟು ಸ್ತುತಿ ನಿಂದೆಗಳನ್ನು ಲಕ್ಷಿಸತಕ್ಕದ್ದಲ್ಲೆಂದು ಆ ಕವಿಯು ಬೋಧಿಸಿರುವನು.

ನಿರ್ವಾಣವನ್ನು ರಾಮರಾಜ್ಯಕ್ಕೆ ಇಲ್ಲವೆ ಭೂಮಿಯಲ್ಲಿ ಸ್ವರ್ಗದ ರಾಜ್ಯಕ್ಕೆ ತುಲನೆ ಮಾಡಿರುವನು. ರಾಮರಾಜ್ಯದ ಕನಸು ನನಸಾಗುವ ದಿನವಿನ್ನೂ ಬಹಳ ದೂರವಿದೆ. ಬ್ರಿಟಿಶರ ಅಧಿಕಾರ ತ್ಯಾಗವೆಂದರೆ ರಾಮರಾಜ್ಯ ಸ್ಥಾಪನೆಯೆಂದರ್ಥವಲ್ಲ. ಅಹಿಂಸೆಯ ಹೆಸರಿನಲ್ಲಿ ತಾವೆಲ್ಲ ಹೃದಯಾಂತರಾಳದಲ್ಲಿ ಹಿಂಸೆಯನ್ನು ಅಳವಡಿಸಿಕೊಂಡಿರುವಾಗ ಅದೆಂತು ಸಾಧ್ಯವಾಗಬಲ್ಲುದು?

ಉಪ್ಪು

ತಾವು ದಾಂಡೀಯಾತ್ರೆಯನ್ನು ಕೈಕೊಂಡು ಉಪ್ಪಿನ ಕರವನ್ನು ರದ್ದುಪಡಿಸುವದಕ್ಕಾಗಿ ಪ್ರಚಂಡ ಸತ್ಯಾಗ್ರಹವನ್ನು ನಡೆಸಿದುದನ್ನುಲ್ಲೇಖಿಸಿ ಮತ್ತೊಬ್ಬ ಗೆಳೆಯ ಪತ್ರ ಬರೆದಿರುವನು. ಕರವೇನೋ ರದ್ದಾಯಿತು ಆದರೆ ಅದರ ಪರಿಣಾಮದಿಂದ ಉಪ್ಪು ಮತ್ತಷ್ಟು ತುಟ್ಟಿಯಾಗಿ ದುರ್ಮಿಳವೂ ಆಗಿದೆ. ಉಪ್ಪಿನಂತಹ ವಸ್ತುವಿನ ವ್ಯಾಪಾರದಲ್ಲಿ ನಮ್ಮ ವ್ಯವಹಾರಸ್ಥರು ಕಿರುಕಳಮಾರಾಟಗಾರರು ಹಣವನ್ನು ಮಾಡಬೇಕೆಂದು ಪ್ರಯತ್ನಿಸಿದ್ದು ಲಜ್ಜಾಸ್ಪದವಾದ ಸಂಗತಿ ಎಂದರು ಗಾಂಧೀಜಿ. ಈ ಮಾತಿನಲ್ಲಿ ಸರಕಾರದವರು ಹೆಚ್ಚು ದಕ್ಷರಾಗಬೇಕಿದ್ದಿತು. ಅವರು ಉಪ್ಪಿನ ಆಗರಗಳನ್ನೆಲ್ಲ ತಮ್ಮ ವಶಕ್ಕೆ ತೆಗೆದುಕೊಂಡು, ಉಪ್ಪಿನ ಉತ್ಪಾದನೆಯಲ್ಲಿ ಪಡುವ ಪರಿಶ್ರಮಕ್ಕೆ ಪ್ರತಿಫಲವೆಂದು ಜನತೆಗೆ ಉಪ್ಪು ಸಿಕ್ಕುವಂತೆ ಏರ್ಪಡಿಸಬೇಕು. ಉಪ್ಪಿನಕರವನ್ನು ರದ್ದುಮಾಡುವದರಿಂದ ಸಿಕ್ಕಬಹುದಾದ ಲಾಭವೆಲ್ಲ ಜನತೆಗೇ ಸಿಕ್ಕುವಂತೆ ನೋಡಿಕೊಳ್ಳುವದು ಉಪ್ಪಿನ ಶಾಖೆಯಲ್ಲಿಯ ಅಧಿಕಾರಿಗಳ ಕರ್ತವ್ಯವಾಗಿದೆ. ಜನರು ಆಲಸಿಗರಾದುದನ್ನೂ ಗಾಂಧೀಜಿ ತೆಗಳಿದರು. ತಮ್ಮ ಸ್ವಂತ ಕುಟುಂಬಕ್ಕೆ ಬೇಕಾಗುವಷ್ಟು ಉಪ್ಪನ್ನು ಅವರು ಸುಲಭವಾಗಿ ಸಿದ್ಧಪಡಿಸಿಕೊಳ್ಳಬಲ್ಲರು. ಗಾಂಧಿ—ಆಯರ್ವಿನ್ ಒಡಂಬಡಿಕೆಯ ಕಾಲದಿಂದಲೂ ಬಡ ಜನರು ಹಾಗೆ ಮಾಡಲು ಸ್ವತಂತ್ರರಿರುವರು. ಅವರೆಷ್ಟೊಂದು ಆಲಸಿಗರೇಕಾಗಬೇಕೋ ತಿಳಿಯದು? ಎಂದೆಂದರು ಗಾಂಧೀಜಿ.

ಪೇಟೆಯಲ್ಲಿ ವಿಶುದ್ಧ ಉಪ್ಪು ದೊರೆಯುವದು ಕಠಿಣ. ಉಪ್ಪನ್ನು ಶುದ್ಧಗೊಳಿಸುವದು ಅತ್ಯಂತ ಸುಲಭವಾದುದು. ತುರಂಗದಲ್ಲಿ ತಾವು ಸ್ವತಃ ಅದನ್ನು ಮಾಡಿದ್ದುಂಟು. ಸ್ವಲ್ಪ ನೀರಿನಲ್ಲಿ ಉಪ್ಪಿನ ಮಣ್ಣನ್ನು ಕೂಡಿಸಿ ನೀರನ್ನು ಕುದಿಸಬೇಕು. ಬಿಸಿಲಿನಲ್ಲಿಯೂ ಅದನ್ನು ಒಣಗಿಸಬಹುದಾಗಿದೆ. ಆದರೆ ಅದಕ್ಕೆ ಸಮಯ ಬಹಳ ಹತ್ತುವದು. ವಿಶುದ್ಧ ಉಪ್ಪನ್ನು ಸಿದ್ಧಮಾಡಿ ಹಂಚುವ ಕಾರ್ಯವನ್ನು ಜನರೇ ಮಾಡಬಲ್ಲರು. ಲಾಭ ಪಡೆಯಬೇಕೆಂಬ ಆಸೆಯನ್ನು ಅವರು ಬಿಗಿಹಿಡಿದಿದ್ದಾದರೆ ಕೇವಲ ಸ್ವಲ್ಪ ಹಣಕ್ಕೆ ಅವರು ಅದನ್ನು ಜನತೆಗೆ ಒದಗಿಸಬಲ್ಲರು. ಆದರೆ ದೇಶದಲ್ಲೆಲ್ಲ ಸ್ವಾರ್ಥ ಮತ್ತು ಲಂಚಗುಳಿತನ ನರ್ತನ ಮಾಡುತಿವೆ. ಈ ಪರಿಸ್ಥಿತಿಯಲ್ಲಿ ರಾಮರಾಜ್ಯವನ್ನಾಶಿಸುವುದೆಂತು? ಹಿಂದುಸ್ತಾನದ ಒಕ್ಕೂಟ ಇಲ್ಲವೆ ಪಾಕಿಸ್ತಾನ ಸರಕಾರ ಪುನರ್ವಿಚಾರ ಮಾಡಿ ಉಪ್ಪಿನಮೇಲೆ ಮತ್ತೆ ಕರಹೇರುವ ಸಂಭವವೂ ಇದೆ. ಅದು ಸಂಭವಿಸಿದ್ದಾದರೆ ವಿಷಾದದ ಮತ್ತು ನಾಚಿಕೆಯ ಮಾತಾಗಬಹುದು.

ಹೊಸದಿಲ್ಲಿ ೨೪—೭—೪೭

ತಂಬಾಕು ಸೇದುವದು

ಪ್ರಾರ್ಥನಾ ಮಂದಿರದಲ್ಲಿ ಕೆಲಜನರು ತಂಬಾಕು ಸೇದುವದನ್ನು ಗಾಂಧೀಜಿ ಕಂಡಿರುವರು. ಪ್ರಾರ್ಥನೋತ್ತರ ಸಭೆಯಲ್ಲಿ ಮಾತಾಡುತ್ತ ಅವರು ಹೀಗೆ ಹೇಳಿದರು. ಕ್ರಿಶ್ಚನ್‌ರಲ್ಲಿ ಬಹುಸಂಖ್ಯಾಕರು ತಂಬಾಕುಸೇದುವ ಚಟಕ್ಕೆ ಬಿದ್ದುದುಂಟು ಆದರೆ ಚರ್ಚದೊಳಗೆ ಯಾರೂ ಸೇದುವದಿಲ್ಲ. ಅದರಂತೆ ಮುಸಲ್ಮಾನರೂ ಮಸೀದೆಯನ್ನು ಪ್ರವೇಶಿಸುವಾಗ ಕೈಯಲ್ಲಿದ್ದ ಸಿಗರೇಟನ್ನು ಒಗೆಯುವರು. ಮಸೀದೆಯೊಳಗೆ ಯಾರೂ ಮದ್ಯಪಾನ ಮಾಡುವದಿಲ್ಲ. ಪ್ರಾರ್ಥನಾ ಮಂದಿರವೆಂದರೆ ಚರ್ಚ, ಮಸೀದೆ, ಮಂದಿರ, ಸಿನೆಗಾಗ ಮತ್ತು ಅಗ್ಯಾರಿ ಎಲ್ಲವೂ ಒಂದರಲ್ಲಿಯೆ ಅಡಕವಾದಂತಿದೆ. ಪ್ರಾರ್ಥನಾಮಂದಿರದಲ್ಲಿ ತಂಬಾಕು ಸೇದತಕ್ಕದ್ದಲ್ಲೆಂಬುದು ಸದಾಚರಣೆ. ಪ್ರಾರ್ಥನೆಯ ಪ್ರಾರಂಭದಿಂದ ಕೊನೆಯವರೆಗೆ ಎಲ್ಲರೂ ಶಾಂತರೀತಿಯಿಂದ ಕೂಡತಕ್ಕದ್ದು.

ರಾಷ್ಟ್ರಧ್ವಜ

ರಾಷ್ಟ್ರಧ್ವಜದ ಸಂಬಂಧದಲ್ಲಿ ಮಾತಾಡುತ್ತ ಗಾಂಧೀಜಿ ಹೀಗೆ ಹೇಳಿದರು. ಅಖಿಲ ಭಾರತ ಚರಕ ಸಂಘದಲ್ಲಿ ಸುಮಾರು ಎರಡು ಲಕ್ಷ ರೂಪಾಯಿಗಳ ರಾಷ್ಟ್ರಧ್ವಜಗಳ ಸಂಗ್ರಹವಿದೆ. ಹೊಸ ರಾಷ್ಟ್ರಧ್ವಜ ಗೊತ್ತುಪಡಿಸಿದ್ದರಿಂದ ಈ ಹಳೆಯ ಧ್ವಜಗಳ ಗತಿಯೇನೆಂಬುದನ್ನು ತಿಳಿಯಬೇಕಾಗಿದೆ. ಅಖಿಲ ಭಾರತ ಚರಕ ಸಂಘ ಬಡವರ ಸೇವೆಗಾಗಿ ಸ್ಥಾಪಿತವಾದ ಸಂಸ್ಥೆಯಾಗಿದೆ. ಎರಡು ಲಕ್ಷ ರೂಪಾಯಿ ಬೆಲೆಯ ಆಸ್ತಿಯನ್ನು ಕಳೆದುಕೊಳ್ಳುವದು ಅದಕ್ಕೆ ಶಕ್ಯವಾಗಲಾರದು. ಬಡವರ ಈ ಸಂಸ್ಥೆ ಅನವಶ್ಯಕವಾಗಿ ಇಷ್ಟೊಂದು ಹಾನಿಗೆ ಆಹುತಿಯಾಗುವಂಥ ಯಾವ ಸಂಗತಿಯನ್ನೂ ಕಾಂಗ್ರೆಸ್ಸು ಇಲ್ಲವೆ ಘಟನಾ ಸಮಿತಿ ಎಂದಿಗೂ ಮಾಡತಕ್ಕದ್ದಲ್ಲ. ಹಳೆಯ ರಾಟಸಹಿತವಾದ ತ್ರಿವರ್ಣ ಧ್ವಜಕ್ಕೂ ಈ ಹೊಸ ಧ್ವಜಕ್ಕೂ ಬಹಳ ಮಟ್ಟಿಗೆ ಸಾಮ್ಯವಿದೆ. ತಮಗೆ ತಿಳಿದಿದ್ದರಮಟ್ಟಿಗೆ, ಅನಿವಾರ್ಯವೆಂದು ಹರಿಮಣಿ ಮತ್ತು ಕದಿರನ್ನು ಬಿಟ್ಟು ಚಕ್ರದ ನಕ್ಷೆಯನ್ನೆ ಹೊಸ ಧ್ವಜದಲ್ಲಿ ಇಡಲಾಗಿದೆಂದು ತೋರುತ್ತದೆ. ಈ ಸಂಬಂಧದಲ್ಲಿ ವಿಚಾರ ಮಾಡಲಾಗಿ ಈ ಹೊಸ ಧ್ವಜ ಸರಕಾರದ ಎಲ್ಲ ಕಟ್ಟಡಗಳ ಮೇಲೆ ನಮ್ಮ ಹಡಗಗಳ ಮೇಲೆ ಮತ್ತು ವಿದೇಶಗಳಲ್ಲಿಯ ರಾಯಭಾರ ಕಚೇರಿಗಳ ಮೇಲೆ ಹಾರಾಡುವುದೆಂದು ತಿಳಿದುಬಂದಿತು. ಆದರೆ ಜನರು ಯಾವದೇ ಬಗೆಯ ಅದ್ದಿ ಅಡಚಣೆಗಳಿಲ್ಲದೆ ಹಳೆಯ ಧ್ವಜವನ್ನು ನಿಃಸಂದೇಹವಾಗಿ ಹಾರಿಸಬಲ್ಲರು. ಅರಸನು ಮರಣಹೊಂದಿದಾಗ 'ಅರಸನು ಸತ್ತನು; ಅರಸನು ಚಿರಾಯು ಆಗಲಿ' ಎಂದು ಘೋಷಿಸಲಾಯಿತು. ಅರಸೊತ್ತಿಗೆ ಹಾಗೆಯೆ ಸಾಗಿತು. ನಂತರ ಬಂದ ಅರಸನ ಮುಖಮುದ್ರೆಯಿಂದ ನಾಣ್ಯಗಳು ಹೊರಟವು. ಆದರೂ ಹಳೆಯ ನಾಣ್ಯಗಳಿಗೆ ಅಷ್ಟೇ ಬೆಲೆ ಇದ್ದಿತು, ಹೊಸ ನಾಣ್ಯಗಳಂತೆ ಅವೂ ಚಲಾವಣೆಗಳಲ್ಲಿ ಉಳಿದವು. ಸದ್ಯದ ತ್ರಿವರ್ಣ ಧ್ವಜಕ್ಕೂ ಇದೇ ಮಾತು ಅನ್ವಯಿಸುವದು. ಚರಕ ಸಂಘದ ಶಾಖೆಗಳು ಮಾತ್ರ ಇನ್ನು ಮುಂದೆ ಹಳೆಯ ಧ್ವಜಗಳನ್ನು ಸಿದ್ಧಪಡಿಸಬಾರದು.

ಅಗಸ್ಟ ೧೫ ರ ನಂತರ ಕಾಂಗ್ರೆಸ್ಸು

ಅಗಸ್ಟ ೧೫ ರ ನಂತರ ಕಾಂಗ್ರೆಸ್ಸು ಈಗಿನಂತೆಯೆ ಅಸ್ತಿತ್ವದಲ್ಲಿ ಉಳಿಯುವದೊ, ಉಳಿಯುವದಾದರೆ ಅದರ ಕರ್ತವ್ಯಗಳಾವುವು ಧ್ಯೇಯವೇನು? ಎಂಬುದಾಗಿ ಗೆಳೆಯರೊಬ್ಬರು ತಮಗೆ ಪತ್ರ ಬರೆದು ಕೇಳಿರುವರು. "ನ್ಯಾಯ್ಯ ಮತ್ತು ಶಾಂತ ಮಾರ್ಗಗಳಿಂದ, ನನ್ನ ಭಾಷೆಯಲ್ಲಿ ಸತ್ಯ ಮತ್ತು ಅಹಿಂಸೆಯಿಂದ, ಹಿಂದುಸ್ತಾನದ ಸ್ವಾತಂತ್ರ್ಯವನ್ನು ಸಂಪಾದಿಸುವದೇ ಈ ವರೆಗೆ ಕಾಂಗ್ರೆಸ್ಸಿನ ಧ್ಯೇಯವಾಗಿದ್ದಿತು" ಎಂಬುದಾಗಿ ಗಾಂಧೀಜಿ ಹೇಳಿದರು. ಈ ಮೊದಲು ತಾವು ಹೇಳಿದಂತೆ ತಮ್ಮೆಲ್ಲರ ಹೃದಯಾಕಾಶದಲ್ಲಿ ಸತ್ಯವೂ ಇಲ್ಲ ಅಹಿಂಸೆಯೂ ಇಲ್ಲ. ಧ್ಯೇಯದಲ್ಲಿ ಬದಲಾವಣೆ ಮಾಡಲಿಕ್ಕೆ ಬೇಕಾದರೂ ಅಗಸ್ಟ ೧೫ ರ ನಂತರವೂ ಕಾಂಗ್ರೆಸ್ಸು ಅಸ್ತಿತ್ವದಲ್ಲಿ ಉಳಿಯಲೆಬೇಕೆಂಬುದರಲ್ಲಿ ತಮಗೆ ಎಳ್ಳಷ್ಟೂ ಸಂದೇಹವಿಲ್ಲ. ಇಂದು ತಾವೆಲ್ಲ ಒಬ್ಬರೊಬ್ಬರ ಕತ್ತನ್ನು ಕೊಯುತಿರುವೆವು ಇನ್ನೂ ಹೆಚ್ಚು ಹತ್ಯಾಕಾಂಡಕ್ಕೆ ಸಿದ್ಧರಾಗುತಿರುವೆವು. ಇಂಥ ಹೋರಾಟ ಬಂದುದೇ ಆದರೆ ೧೮೫೭ ರ ಬಂಡಾಯ ಕಾಲದಕ್ಕಿಂತ ಕ್ರೂರತರವಾದ ಹೋರಾಟ ನಡೆಯಬಹುದು. ೧೮೫೭ ರಲ್ಲಿ ಹಿಂದುಸ್ತಾನದಲ್ಲಿಯ ಜನಸಾಮಾನ್ಯ ಜಾಗ್ರತವಾಗಿರಲಿಲ್ಲ. ತಮ್ಮ ತಮ್ಮಲ್ಲಿಯೆ ರಕ್ತಪಾತದ ಸಂಗ್ರಾಮದ ಸಿದ್ಧತೆ ಮಾಡುತಿರುವದರಿಂದಲೆ ಅಗಸ್ಟ ೧೫ ರ ಉತ್ಸವದಲ್ಲಿ ತಾವು ಭಾಗವಹಿಸಲಾರೆವು. ಪರಮಾತ್ಮನ ಅನುಗ್ರಹದಿಂದ ಇಂಥ ದುರಂತ ಹಿಂದುಸ್ತಾನದಲ್ಲಿ ಸಂಭವಿಸದಿರಲಿ. ಅದು ಸಂಭವಿಸಿದ್ದೇ ಆದರೆ ನಮ್ಮ

— ೧೦ ನೇ ಪುಟಕ್ಕೆ

ರಾಷ್ಟ್ರಧ್ವಜ

[೭ನೇ ಪುಟದಿಂದ]

ಅತಿ ಬಲಿಷ್ಠರಾದವರು ಅಶಕ್ತರಿಗೆಲ್ಲ [illegible] ಇರಬೇಕೆಂಬುದೆ ಅದರ ಉದ್ದೇಶ. ಅಲ್ಲದೆ ಬಿಳಿಯ ಬಣ್ಣ ವಿಶುದ್ಧತೆ ಮತ್ತು ಶಾಂತಿಯ ಸೂಚಕವು. ನಮ್ಮ ರಾಷ್ಟ್ರಧ್ವಜ ಅದನ್ನೆ ಪ್ರತಿನಿಧಿಸಬೇಕು. ಬೇರೆ ಏನನ್ನೂ ಅಲ್ಲ. ನಮ್ಮಲ್ಲಿಯ ಅತಿ ಕನಿಷ್ಠರೂ ಅತಿ ಉಚ್ಚ ಜನರೂ ಸಮಾನರಾಗಿರುವರೆಂಬುದನ್ನು ನಿದರ್ಶಿಸುವದಕ್ಕಾಗಿ ನಕ್ಷೆಯಲ್ಲಿ ಮೂರೂ ಬಣ್ಣಗಳಿಗೆ ಸಮಾನವಾದ ಭಾಗವನ್ನು ಕೊಡಲಾಗಿದೆ.

ಆದರೆ ಹಿಂದುಸ್ತಾನ ಇಡೀ ರಾಷ್ಟ್ರ ರಾಟಿಗಾಗಿಯೆ ಬಾಳಬಲ್ಲದು. ಮತ್ತು ಪ್ರಾಣಾರ್ಪಣ ಮಾಡಬಲ್ಲದು. ರಾಟಿಯು [illegible]ದಂದಿನಿಂದಲೆ ಹಿಂದುಸ್ತಾನದ ಸುಖಸಮೃದ್ಧಿ ಹಾಳಾಯಿತೆಂದು ಪ್ರತಿಯೊಬ್ಬ ಹೆಣ್ಣುಮಗಳು ತಾರ್ಕಿಕರಿಗೆಲ್ಲ ಹೇಳಬಲ್ಲಳು. ರಾಟಿಯ ಸಂದೇಶದಿಂದ ಹಿಂದುಸ್ತಾನದಲ್ಲಿ ಹೆಣ್ಣುಮಕ್ಕಳು ಮತ್ತು ಜನಸಾಮಾನ್ಯರು ಹಿಂದೆಂದಿಗದಷ್ಟು ಜಾಗ್ರತರಾಗಿರುವರು. ಜನಸಾಮಾನ್ಯರಲ್ಲಿ ನವಜೀವನವೇ ಕಾಣಹತ್ತಿದೆ. ತಮ್ಮ ವೃಕ್ಷದ ರಕ್ಷಕರನ್ನು ಹೆಣ್ಣುಮಕ್ಕಳು ಅದರಲ್ಲಿ ಕಾಣಹತ್ತಿರುವರು. ಪ್ರತಿಯೊಬ್ಬ ವಿಧವೆಯು ರಾಟಿಯೆಂದರೆ ಮರೆತುಹೋದ ಪ್ರೀತಿಯ ಮಿತ್ರ ಎಂದು ಭಾವಿಸುತ್ತಾಳೆ. ಅದರ ಪುನರುಜ್ಜೀವನದಿಂದಲೆ, ಉಪವಾಸ ಬಳಲುತಿರುವ ಕೋಟ್ಯವಧಿ ಜನರ ಹೊಟ್ಟೆ ತುಂಬಬಲ್ಲದು. ೧೯೦೦ ಮೈಲು ಉದ್ದ ಮತ್ತು ೧೫೦೦ ಮೈಲು ಅಗಲವಾಗಿರುವ ಹಿಂದುಸ್ತಾನದಂಥ ವಿಶಾಲ ರಾಷ್ಟ್ರದಲ್ಲಿಯ ಒಕ್ಕಲಿಗರ, ಬೆಳೆಯುತಿರುವ ದಾರಿದ್ರ್ಯಸಮಸ್ಯೆಯನ್ನು ಬಿಡಿಸಲಿಕ್ಕೆ ಔದ್ಯೋಗೀಕರಣದ ಯಾವದೆ ಯೋಜನೆಯು ಸಮರ್ಥವಾಗಲಾರದು. ಹಿಂದುಸ್ತಾನವೇನು ಸಣ್ಣದೊಂದು ನಡುಗಡ್ಡೆಯಲ್ಲ, ಅದೊಂದು ದೊಡ್ಡ ಖಂಡವಾಗಿದೆ. ಇಂಗ್ಲಂಡದಂತೆ ಔದ್ಯೋಗಿಕದೇಶವನ್ನಾಗಿ ಅದನ್ನು ಮಾರ್ಪಡಿಸಲು ಶಕ್ಯವಿಲ್ಲ. ಮತ್ತು ಜಗತ್ತನ್ನು ಸುಲಿಯುವ ಯಾವದೇ ಯೋಜನೆಯ ವಿರುದ್ಧವೇ ನಾವಿರಬೇಕೆಂದು ನಿರ್ಧರಿಸಬೇಕು. ನಮ್ಮ ಗುಡಿಸಲುಗಳಲ್ಲಿ ಅರಳೆಯನ್ನು ಬಟ್ಟೆಯನ್ನಾಗಿ ಮಾರ್ಪಡಿಸಿ ದೇಶದ ಸಂಪದಭಿವೃದ್ಧಿ ಮಾಡಲು, ಜನರು ಅಪವ್ಯಯಿಸುತಿರುವ ವೇಳೆಯ ಉಪಯೋಗ ಮಾಡಿಕೊಳ್ಳುವದರಲ್ಲಿಯೆ ನಮ್ಮ ಲಕ್ಷ್ಯವಿರತಕ್ಕದ್ದು. ಆದುದರಿಂದ ಹಿಂದೀ ಜೀವನದಲ್ಲಿ ಗಾಳಿ ಮತ್ತು ನೀರು ಅವಶ್ಯ ಬೇಕಾಗಿರುವಂತೆ ರಾಟಿಯೂ ಅವಶ್ಯವಾಗಿ ಬೇಕಾಗುವ ವಸ್ತುವಾಗಿದೆ.

ಇದಲ್ಲದೆ ಮುಸಲ್ಮಾನರೂ ಹಿಂದುಗಳಂತೆ ಅದಕ್ಕಾಗಿ ಪ್ರತಿಜ್ಞಾಬದ್ಧರಾಗಿರುವರು. ವಸ್ತುತಃ ಹಿಂದುಗಳಿಗಿಂತ ಮುಸಲ್ಮಾನರೇ ಹೆಚ್ಚು ಆಸ್ಥೆಯಿಂದ ರಾಟಿಯನ್ನು ಕೈಕೊಳ್ಳುವರು. ಏಕೆಂದರೆ ಮುಸಲ್ಮಾನ ಸ್ತ್ರೀಯರು ಘೋಷಾದಲ್ಲಿರುವವರು. ಅವರು ರಾಟಿಯಿಂದ ಕೆಲ ದುಡ್ಡುಗಳನ್ನು ಗಳಿಸಿ ಕುಟುಂಬಕ್ಕಾಗಿ ತಮ್ಮ ಗಂಡನ ಅಲ್ಪಗಳಿಕೆಯಲ್ಲಿ ತಾವೂ ಸಹಾಯಮಾಡಬಲ್ಲಳು ಆದುದರಿಂದ ರಾಟಿಯು ರಾಷ್ಟ್ರೀಯ ಜೀವನದ ಮಹತ್ವದ ಸಾಮಾನ್ಯ ಘಟಕವಾಗಿರುವಂತೆ ಅತ್ಯಂತ ಸ್ವಾಭಾವಿಕವಾದುದೂ ಇರುತ್ತದೆ. ಆಹಾರ ಮತ್ತು ಬಟ್ಟೆಯ ಮಟ್ಟಿಗೆ ನಾವು ಪೂರ್ಣ ಸ್ವತಂತ್ರರು; ಬೇರೆ ಯಾರನ್ನೂ ಅವಲಂಬಿಸಬೇಕಿಲ್ಲ. ಎಂದು ನಾವು ದೃಢ ನಿರ್ಧಾರ ಮಾಡಿದ್ದೇವೆಂದು ಇಡೀ ಜಗತ್ತಿಗೆ ನಾವು ಅದರಿಂದಲೇ ಸಾರಿ ಹೇಳಬಲ್ಲೆವು. ನನ್ನಂತೆ ವಿಶ್ವಾಸವಿರುವವರೆಲ್ಲ ತಮ್ಮ ಮನೆಗಳಲ್ಲಿ ಕೂಡಲೆ ರಾಟಿಯನ್ನು ಪ್ರಾರಂಭಿಸಬೇಕು ಮತ್ತು ನಾನು ಸೂಚಿಸಿದಂತಹ ರಾಷ್ಟ್ರಧ್ವಜವನ್ನು ಇಟ್ಟುಕೊಳ್ಳಬೇಕು.

ಉರುಟು ಖಾದಿಯಿಂದಲೆ ನಾವು ಹಿಂದುಸ್ತಾನವನ್ನು ಬಟ್ಟೆಯ ವಿಷಯದಲ್ಲಿ, ಪರದೇಶೀ ಪೇಟೆಗಳಿಂದ ಸ್ವತಂತ್ರ ಮಾಡಬೇಕಾದ್ದರಿಂದ ರಾಷ್ಟ್ರಧ್ವಜವನ್ನು ಖಾದಿ ಬಟ್ಟೆಯಿಂದಲೆ ಮಾಡತಕ್ಕದ್ದೆಂಬುದು ಸ್ವತಃಸಿದ್ಧವಾದುದು. ನನ್ನ ವಿಚಾರಸರಣಿಗೆ ಒಪ್ಪುವದಾದರೆ ಎಲ್ಲ ಧಾರ್ಮಿಕ ಸಂಸ್ಥೆಗಳೂ ಉದಾಹರಣಾರ್ಥವಾಗಿ ಖಿಲಾಫತ ಸಂಸ್ಥೆಯು—ತಮ್ಮ ಧಾರ್ಮಿಕ ಧ್ವಜಗಳಲ್ಲಿ ಮೇಲ್ಬದಿಯ ಎಡಗಡೆಯ ಮೂಲೆಯಲ್ಲಿ ಸಣ್ಣ ರಾಷ್ಟ್ರಧ್ವಜವನ್ನು ಸೇರಿಸಬೇಕೆಂದು ನಾನು ಸಲಹೆ ಕೊಡಬಯಸುತ್ತೇನೆ. ರಾಟಿಯು ಪೂರ್ಣ ಚಿತ್ರ ಒಳಗೊಳ್ಳುವಷ್ಟು ಆ ಧ್ವಜದ ಆಕಾರವಿರಬೇಕಾದುದು ಅವಶ್ಯ.

ದುಃಸಾಧ್ಯತೆಯ ಅರಿವು

ಭಾರತದಲ್ಲಿ ಸಂಭವಿಸುತ್ತಿರುವ ಸಂಗತಿಗಳ ಬಗ್ಗೆ ಸನಗಾದ ವ್ಯಥೆಯನ್ನು ಬಿಂಬಿಸುವ ನನ್ನ ಭಾಷಣಗಳನ್ನು ಓದಿದ ಆಂಗ್ಲ ಭಗಿನಿಯೊಬ್ಬಳು ಬರೆಯುತ್ತಾಳೆ:

"ಈ ಅಗಾಧ ವೇದನೆ, ಈ ನರಕಾಂತಃಪತನ, ನಿರಾಶೆಗೆ ದೂರವಿಲ್ಲದ ಈ ಮನೋಭಾವವು ೧೨೫ ವರ್ಷಗಳಿಗಿಂತಲೂ ನಿಮ್ಮ ಜೀವಿತ ಕಾಲವನ್ನು ಹೆಚ್ಚಿಸಬೇಕೆಂಬ ಬಗ್ಗೆ ಏನು? ಸಾಯುವುದು ಎಷ್ಟು ಸುಲಭದ ಕೆಲಸ! ನಿಶ್ಯವೂ ನರಕದ ಮರ್ಮಭೇದಕ ನೋವನ್ನು ಅನುಭವಿಸಬೇಕಾಗಿದೆ ಇಲ್ಲಿ…"

೧೨೫ ವರ್ಷಗಳಿಗಿಂತ ನನ್ನ ಜೀವಿತ ಕಾಲವನ್ನು ಹೆಚ್ಚಿಸಬೇಕೆಂದು ಅವಳು ಹೇಳುವುದು ಪರಿಹಾಸ್ಯಕ್ಕಾಗಿ ಅಲ್ಲವೆಂದು ನಾನು ಬಲ್ಲೆ. ಅವಳು ಮಹಾಶ್ರದ್ಧಾವಂತಳಾದ ಧೀರ ಮಹಿಳೆ. ವಿಹಿತಕಾಲಕ್ಕಿಂತ ಒಂದು ದಿನವೂ ನನ್ನ ಆಯುಷ್ಯವನ್ನು ಹೆಚ್ಚಿಸಬೇಕೆಂಬ ಪ್ರಶ್ನೆ ನನ್ನ ಹತ್ತಿರ ಸುಳಿಯುವುದಿಲ್ಲ. ದೇವರ ಅಜ್ಞೆಯಿಲ್ಲದೆ ಒಂದು ಹುಲ್ಲುಕಡ್ಡಿ ಕೂಡ ಚಲಿಸದೆಂಬಷ್ಟರ ವರೆಗೆ ನಾನು ವಿಧಿವಾದ ಶರಣನು. ನಾನು ಮಾಡಿದ್ದು ಮತ್ತು ಮಾಡಬೇಕೆಂದಿರುವುದೆಂದರೆ ೧೨೫ ವರ್ಷಗಳ ಕಾಲ ಬದುಕಬೇಕೆಂದು ಬಯಸುವುದನ್ನೇ; ಆದರೆ ಆ ಜೀವನವು ಕೇವಲ ಮಾನವ ಕುಲದ ಹೆಚ್ಚಿನ ಸೇವೆಗೇ ವಿನಿಯೋಗವಾಗಿರತಕ್ಕದ್ದು. ಅಗತ್ಯವಾದ ಸದಾಚಾರವಿಲ್ಲದಿದ್ದರೆ ಅಂತಹ ಬಯಕೆಯು ಬರಡೆನಿಸುತ್ತದೆ. ಗೀತೆಯಲ್ಲಿ ಹೇಳಿರುವ ಸದಾಚಾರ ನಿಷ್ಠನಾದ ಸ್ಥಿತಪ್ರಜ್ಞನು ಹೇಗಿರುವನೆಂದರೆ—

(ನಾಗರಸನ ಕರ್ನಾಟಕ ಭಗವದ್ಗೀತೆಯಿಂದ)

೧

ಪರಮ ಸಾಂಖ್ಯದ, ಬುದ್ಧಿಯೋಗದ
ಕರುಣಿಸದೆ ಕಮಲಾಕ್ಷ! ಬುದ್ಧಿಯ
ಭರವ ನೆಲೆವಿಡಿದಾ ಸ್ಥಿತಪ್ರಜ್ಞನು ಸಮಾಧಿಯಲಿ
ಇರುತಲೇವನು ನುಡಿವ, ಕುಳ್ಳಿಹ
ಪರಿಯದಾವುದದೆಂತು ನಡೆವನು ?
ಹಿರಿಯರೇನೆಂದೆಂಬರದ ಹೇಳೆಂದನಾ ಪಾರ್ಥ.

೨

ಮನದಲಿಹ ಬಯಕೆಗಳನೆಲ್ಲವ
ನೆನೆಯದಾವಾಗಲು ಬಿಡುವನಾ
ತ್ಮನಲಿ ನಿಶ್ಚಿತನಾಗಿ ಪರಮಾನಂದ ಮಯಾವೆನಿಪ
ಚಿನುಮಯನೊಳೊಡಗೂಡಿ ತುಷ್ಟಿಯ
ಘನತೆಯಿಂದಿಹ ನಾವ ನಾತನೆ
ಮುನಿಗಳಾದರಿಪಾಸ್ಥಿರಪ್ರಜ್ಞನು ವಿಚಾರಿಸಲು.

೩

ಜೆದರದೀ ತಾಪತ್ರಯಂಗಳ
ಪದದ ನಾನಾದುಃಖದಲಿ, ನೆರೆ
ಮುದಪಲಾಸಕ್ತಿಯನು ಮಾಡದೆ, ಕರಣ
ಮೂರರಲಿ
ಉದಿತ ಕಾಮ ಕ್ರೋಧ ಭೀತಿಯ
ನೊದೆದು ಬಿಟ್ಟ ಮುನೀಶ್ವರನು ತಾ
ವಿದುಗಳಿಂ ಸ್ಥಿರಬುದ್ಧಿಯೆನಿಸುವನೆಂದನಸುರಾರಿ.

೪

ಅವನೊಬ್ಬ ಸಮಸ್ತವಸ್ತುಗ
ಳಾವಳಿಗಳಲಿ ಮಮತೆಯಿಲ್ಲದೆ
ಜೀವಿಸನು ಪ್ರಾರಬ್ಧವಶದಿಂ ಬಂದ ಲೇಸಿನಲಿ;
ಭಾವದಿಂ ಹಾರೈಸಿ ಪೊಲ್ಲೆಹ
ದಾವಿನಲಿ ದುಃಖಿಸನು ತಿಳಿಯಲಿ
ಸಾವಿವೇಕಿಯ ಪ್ರಜ್ಞೆ ನೆಲೆಯೆನಿಸುವುದು ಕೇಳೆಂದ.

೫

ನಡೆಯುತಿಹ ಕೂರುಮನು ತನ್ನಯ
ಒಡಲೊಳಗೆ ಕೈಕಾಲ ನೆಲ್ಲವ
ನಡಗಿಸುವವೋಲಿಂದ್ರಿಯಂಗಳ ವಿಷಯದಲ್ಲಿಂದ
ಅಡಿಗಡಿಗೆ ತೆಗೆತೆಗೆದು ತನ್ನಲಿ
ದೃಢದಿ ನಿಲಿಸುವನಾವ ನಾತನ
ಬಿಡದೆ ತೋರುವ ಪ್ರಜ್ಞೆ ನೆಲೆಯೆನಿಸುವುದು
ಕೇಳೆಂದ.

೬

ಬುಜಿಯದಾಹಾರವಿಲ್ಲದೆ,
ನಿಜವರಿಯದಾಂಗೆ ವಿಷಯ
ವ್ರಜತೊಲಗುವುದು ತನ್ನಿರುತಿಹ ಬಯಕೆ
ಪೊರಗಾಗೆ;
ವಿಜಯ! ಕೇಳಾ ಬಯಕೆ ವಿಷಯ
ಪ್ರಜಸಹಿತ ತೊಲಗುವುದು ತನ್ನೀ
ನಿಜವನರಿದಿಹ ಪರಮುನಿಗೆ ಕೇಳೆಂದನಸುರಾರಿ.

೭

ಪರಮುಕುತಿ ಗೋಸುಗರ ಯೋಗದ
ನಿರದ ಯಭ್ಯಾಸವನು ಮಾಡುವ
ಗಭೂವ ಪ್ರಸಿಹನ ಮನವ ಮಹಂತಾಗೆಳೆದು
ಬಲುಹಿನಲಿ
ತಿರುಹುವುದು ವಿಷಯಂಗಳಲ್ಲಿಗೆ
ದುರುಳ ಕರಣ ಸಮೂಹವಿದು ನೆರೆ
ಮರುಳುಗೊಳ್ಳ ವ್ರದಾಂಕನಾದರು ಪಾರ್ಥ!
ಕೇಳೆಂದ.

೮

ಅದು ನಿಮಿತ್ತ ಖಿಲೇಂದ್ರಿಯಂಗಳ
ಮದವ ಮುರಿದು ನಿರೋಧಿಸುತಲತಿ
ಮುದದಿ ಯೋಗಾಭ್ಯಾಸದಿಂದೆನ್ನಲ್ಲಿ ಭಕ್ತಿಯನು
ಒದವಿಸುತಲಿರ ಲಿಂದ್ರಿಯಂಗಳು
ತುದಿಯಲಾವನಸವಶವಹವು ಕೇಳ್
ಬುಧರ ಮತದಿಂದಾ ಮಹಾತ್ಮಂಗಿರದೆ
ನೆಲೆಯಹುದು.

೯

ವಿಷಯ ಹಲವನು ನೆನೆವ ಮನುಜಗೆ
ವಿಷಯದಲ್ಲಿಯ ಸಲುಗೆ ಪುಟ್ಟಿಗು,
ವಿಷಯ ಸಂಗದ ದೆಸೆಯಲುದಿಸುಗು
ಕಾಮಿಸುವ ಶಕ್ತಿ;
ಹೊಸ ಪರಿಯ ಕಾಮವನು ನೆರೆ ಬಂ
ಧಿಸಲಿಕದರಿಂ ಕ್ರೋಧ ಸಲೆ ಜನಿ
ಯಿಸುವುದೈ ಕೇಳೆಂದನಸುರಾರಾತಿ ಫಲ್ಗುಣನ.

೧೦

ಅದರಿನವಿವೇಕವು ಜನಿಯಿಸುವು
ದದರ ದೆಸೆಯಿಂ ಸಕಲ ಶಾಸ್ತ್ರದ
ಲೊದವಿದಾಸ್ಮೃತಿ ಕೆಡುವುದಾಸ್ಮೃತಿ ಕೆಡಲಿ
ಕಾಬಳಿಕ—
ಮುದಿಗೆ ನಿಶ್ಚಯ ಜ್ಞಾನ ಕೆಡುತಿಹು
ದದು ಕೆಡಲು ಬಳಿಕಾತ ಮೋಕ್ಷದ
ಪದವ ಪಡೆಯದೆ ಕೆಟ್ಟು ಹೋಹನು ಪಾರ್ಥ!
ಕೇಳೆಂದ.

೧೧

ಅದು ನಿಮಿತ್ತ ಮುಮುಕ್ಷುವಾದವ
ನುದಿತ ಕಾಮಕ್ರೋಧ ವಳಿದುಳಿ
ದೊದವಿ ತನ್ನಯಧೀನವಾದಿಂದ್ರಿಯ
ನಿಕರದಿಂದ
ವಿಧಿವಿಹಿತ ವಿಷಯಂಗಳನು ತಾ
ಹದುಳದಿಂ ಭೋಗಿಸುವ ಚಿತ್ತನು
ಸದಮಳದ ಶಾಂತಿಯನು ಪಡೆವನು ಪಾರ್ಥ!
ಕೇಳೆಂದ.

೧೨

ಪರಮ ಶಾಂತಿಯ ಪಡೆದು ತಾನತಿ
ಹರುಷದಿಂದಿಹ ಮುನಿಗೆ ದುಃಖದ
ನೆರವಿಗಳು ನೆರೆಕೆಟ್ಟು ಹೋಹುವು
ನಿಮಿಷ ಮಾತ್ರದಲಿ;
ನಿರುತ ನಿರ್ಮಲ ಚಿತ್ತನಾಗಿಹ
ಪರಮ ಯೋಗಿಗೆ ಶುದ್ಧ ಚಿತ್ತದಿ
ಪರಮ ತತ್ವಜ್ಞಾನ ನೆಲಸಿಹುದೆಂದನಸುರಾರಿ.

೧೩

ನಿರುತದಿಂ ಶಾಸ್ತ್ರಾರ್ಥವರಿಯದ
ನರಗೆ ದೊರಕದು ಯೋಗವದು ತಾ
ದೊರಕದಿಹ ಮನುಜಂಗೆ ಮನನಾದಿಗಳು
ಸಿದ್ಧಿಸವು;
ಪರ ಮನನ ಶೂನ್ಯಂಗೆ ದೊರಕದು
ಪರಮ ಶಾಂತಿಯು, ಶಾಂತಿ ದೊರಕದ
ನರಗೆ ಸುಖವೆಲ್ಲಿಯದು ? ಕೇಳೆಂದನು
ಮುರಧ್ವಂಸಿ.

೧೪

ವಿಷಯದಭಿಮುಖ ದಿಂದ್ರಿಯಂಗಳ
ವಶವೆನಿಸುತಿಹುದಾವನೊಬ್ಬನ
ಸಸಿನರದ ಮನವವನ ಪ್ರಜ್ಞೆಯನಿರದದುರೆಕೆಡಿಸಿ
ದೆಸೆಗೆಡಿಸುವುದು; ಕೇಳದೆಂತೆನೆ
ಪಸರಿಸಿದ ಶರಧಿಯೊಳು ನಾವೆಯ
ವಿಷಮ ಮಾರುತವೆಳೆದೊಯ್ದು ಮುರಿದಿಕ್ಕು
ವಂದದಲಿ.

೧೫

ಅದು ನಿಮಿತ್ತದೊಳಾವನೊಬ್ಬನು
ಒದವಿದಿಂದ್ರಿಯಗಳನು ವಿಷಯದ
ಸದನದಿಂಬರಸೆಳೆದು ನೆರೆನಿಗ್ರಹಿಸಿಕೊಂಡಿಹನು;
ಅದರಿನಾತನ ಬುದ್ಧಿ ತತ್ವದ
ಪದವಿಯಲಿ ನೆಲೆಗೊಂಬುದವನನು
ಬುಧರು ಸುಸ್ಥಿರ ಬುದ್ಧಿಯೆಂಬರು ಪಾರ್ಥ!
ಕೇಳೆಂದ.

೧೬

ಆವುದೊಂದು ಅಭೇದದೃಷ್ಟಿಯ
ಭಾವದಮಳ ಜ್ಞಾನ ಜ್ಯೋತಿಯೊ
ಜೀವರಿಗೆ ಕತ್ತಲೆಯದಾಲಿಚ್ಚತ್ತಿಹನು ಯೋಗಿ;
ಆವ ಭೂತಂಗಳಿಗೆ ಭೇದದ
ಭಾವದೆಚ್ಚರು ತಾನಿಹುದೊಸ
ದ್ಭಾವವನು ತಿಳಿದಿಹ ಮುನಿಗೆ ಕತ್ತಲೆಯ
ದೆನಿಸುವುದು!

೧೭

ತುಂಬಿ ಚಲಿಸದೆ ಸ್ಥಿರವೆನಿಸುತಿ
ರ್ಪಂಬುಧಿಯನುದಕೌಘ ನೆರೆಹೊ
ಕ್ಕಿಂಬುಗೊಂಡೇಕತ್ವವನು ಪಡೆವಂತೆ
ಬಯಕೆಗಳು
ಸ್ತಂಭಿಸುವುವಾವನಲಿ ತಾನೇ
ಜೆಂಬಿಡದ ಮೋಕ್ಷವ ಪಡೆದು ವಿಷ
ಯಾಂಬುಧಿಯಲಾಡುವನು ಶಾಂತಿಯನೈದಿ
ಕೇಳೆಂದ.

೧೮

ವಿಷಯವೆಲ್ಲವ ಬಿಟ್ಟು ನೆರೆ ನಿ
ರ್ವಿಷಯವೆನಿಪಾತನು ಮತೆಗಳ
ದೆಸೆಯಹೊದ್ದದೆ ಜ್ಞಾನಿತಾನಹೆನೆಂಬಹನ್ಮಿಳಿದು
ಸಸಿನೆ ಚಲಿಸದೆ ನಿಸ್ಪೃಹತೆಯಿಂ
ದೆಸೆಯುತಿಹ ವರಯೋಗಿ ತಾ ನೆರೆ
ಹೊಸತೆನಿಪ ಮುಕ್ತಿಯನು ಪಡೆವನು ಪಾರ್ಥ!
ಕೇಳೆಂದ.

೧೯

ಈ ಪರಿಯ ವರ ಸಾಂಖ್ಯಯೋಗದ
ರೂಪು ಬ್ರಹ್ಮನ ನಿಷ್ಠೆಯಿದರನು
ರೂಪಿನಲಿ ನೆಲೆಗೊಂಡವನು ಮರೆದಿರನು
ನಿಜಪದವ;
ಆ ಪರಮ ನಿಷ್ಠೆಯಲಿ ನೆಲೆಗೊಂ
ಡಾ ಪುರುಷನವಸಾನಕಾಲದ
ಲಾ ಪರಬ್ರಹ್ಮವನು ಪಡೆವನು ಪಾರ್ಥ! ಕೇಳೆಂದ.

ಸ್ಥಿತಪ್ರಜ್ಞತೆಗಾಗಿ ಎಷ್ಟೋ ಪ್ರಯತ್ನ ಮಾಡಿದರೂ ಅದರಿಂದ ನಾನು ಬಹಳ ದೂರದಲ್ಲಿರುವೆನೆಂಬುವನ್ನು ಒಪ್ಪಿಕೊಳ್ಳುತ್ತೇನೆ. ನನ್ನ ಸುತ್ತುಮುತ್ತಲೆದ್ದಿಹ ಬಿರುಗಾಳಿಯ ಎದುರು ಸ್ಥಿತಪ್ರಜ್ಞನಾಗುವುದು ಎಷ್ಟು ದುಃಸಾಧ್ಯವೆಂಬುದನ್ನು ಅರಿತಿದ್ದೇನೆ.

ಅದೇ ಕಾಗದದಲ್ಲಿ ಮತ್ತೆ ಅವಳು—

"ಒಂದೇ ಒಂದು ಸಮಾಧಾನದ ಸಂಗತಿ: ಮನುಷ್ಯರಲ್ಲಿ ಕೆಲವರಾದರೂ ದೇವರನ್ನು ಬಿಟ್ಟರೆ ಮನುಷ್ಯನು ತನ್ನಷ್ಟಕ್ಕೆ ತಾನೇ ಏನನ್ನೂ ಮಾಡಲು ಸಮರ್ಥನಾಗಲಾರನೆಂಬುದನ್ನು ಕಂಡುಕೊಂಡಿದ್ದಾರೆ."

ಅವಳ ಪತ್ರದ ಮೇಗಡೆ ಮುದ್ರಿಸಿದ ಜೀವಿತ ಧ್ಯೇಯವು ಹೀಗಿದೆ:

"ಹಗೆತನವ ಬೆಳೆಸಲರಿಯದ ಮುಗ್ಧರದೆಯಲ್ಲಿ ಮನುಕುಲದ ಬಿಡುಗಡೆಯ ಮಾರ್ಗವಿಹುದು"

ಎಷ್ಟು ಸತ್ಯವಾದ ಮಾತು; ಆದರೆ ಎಷ್ಟು ಕಠಿನವಾದ ಕಾರ್ಯ!

(ಗಾಂಧೀಜಿಯಿಂದ)

ಕಾಂಗ್ರೆಸ್ಸಿಗರೂ ರಚನಾತ್ಮಕ ಕಾರ್ಯವೂ

ಅನೇಕ ವರ್ಷಗಳ ಹಿಂದೆ ಭಾರತಕ್ಕೆ ಬಂದು ಗಾಂಧೀಜಿಯ ರಚನಾತ್ಮಕ ಕಾರ್ಯಕ್ರಮಗಳಲ್ಲಿ ಹೊಂದಿಕೊಂಡ ಆಂಗ್ಲ ಸ್ನೇಹಿತೆಯೊಬ್ಬಳು ಗಾಂಧೀಜಿಗೆ ಬರೆಯುತ್ತಾಳೆ:

"ಕಾಂಗ್ರೆಸ್ಸಿಗರ ಮೇಲೆ ಮಾತಾಡುವಾಗ ಈ ವಿಷಯವು ನನ್ನನ್ನು ಅಮರ್ಮಾಂತವಾಗಿ ನೋವಿಗೀಡು ಮಾಡುತ್ತದೆ. ನಾನು ಏಕಾಕಿನಿಯಾಗಿದ್ದು ಯಥಾಶಕ್ತಿ ಸೇವೆ ಸಲ್ಲಿಸುತ್ತ ನಿಲ್ಲುವುದು ಉತ್ತಮ ಎಂದೆನಿಸುವಷ್ಟು ನನ್ನ ಅನುಭವಗಳು ವಿಷಾದಪೂರ್ಣವಾಗಿವೆ. ಎಲ್ಲೆಲ್ಲೂ ಅಧಿಕಾರ ಸ್ಪರ್ಧೆಯೇ ಕಾಣುತ್ತದೆ. ಕೆಲವು ಸನ್ಮಾನ್ಯ ಅಪವಾದಗಳೇನೋ ಇವೆ. ಆದರೆ ಬಹಳ ಕಾಲದ ಹಿಂದೆ ನೀವು ಹೇಳಿದ—ಅಧಿಕಾರವು ಮನುಷ್ಯನನ್ನು ವಂಚಕನನ್ನಾಗಿ ಮಾಡುತ್ತದೆ; ಆದುದರಿಂದ ಅಹಿಂಸಾ ಸಂಸ್ಥೆಗೆ ನಿಃಸ್ವಾರ್ಥ ಮನಸ್ಕರನ್ನು ಅಧಿಕಾರಿಗಳಾಗಲು ಕಳುಹಿಸುವುದೇ ಕರ್ತವ್ಯ—ಎಂಬ ನಿಮ್ಮ ಮಾತು ನೆನಪಾಗುತ್ತದೆ. ಆದರೆ ಅಂಥ ಆತ್ಮವಿನಾಶದಿಂದ ಇಡಿಯ ಜಗತ್ತನ್ನೇ, ದಿಗ್ದರ್ಶಿಯಾದ ನಕ್ಷತ್ರದಂತೆ, ಎದ್ದು ಉದ್ಧರಿಸಬಹುದಾದ ಈ ಕಾಲದಲ್ಲಿ ಭಾರತವು ತನ್ನ ಹಳೆಯ ಧ್ಯೇಯಗಳನ್ನೆಲ್ಲ ಬಿಟ್ಟುಕೊಟ್ಟಂತೆ ತೋರುತ್ತದೆ."

ಹೊಸ ಪದ್ಧತಿಯಿಂದ ತಾನು ಕಾಂಗ್ರೆಸ್ಸನ್ನು ಹೇಗೆ ಸಂಘಟಿಸಬಹುದೆಂಬುದನ್ನು ಕೇಳಲು ಮೊನ್ನೆ ಮೊನ್ನೆ ಕಾಂಗ್ರೆಸ್ಸಿಗನೊಬ್ಬನು ಗಾಂಧೀಜಿಯೆಡೆಗೆ ಬಂದಿದ್ದನು. ಕಾಂಗ್ರೆಸ್ಸೊಂದು ಕಾರ್ಯದಕ್ಷವಾದ ದಳವೆನಿಸಬೇಕಾದರೆ ಅದು ರಚನಾತ್ಮಕ ಕಾರ್ಯಕರ್ತರ ಒಂದು ಗುಂಪಾಗಿ ಪರಿಣಮಿಸಬೇಕೆಂದು ಗಾಂಧೀಜಿಯು ಖಂಡಿತೋಕ್ತಿಯಿಂದ ಹೇಳಿದರು. ರಚನಾತ್ಮಕ ಕಾರ್ಯವೆಂದೂ ಅತಿಯಾಗಿ ಜನಪ್ರಿಯವಾಗಿದ್ದಿಲ್ಲವೆಂಬುದು ಗಾಂಧೀಜಿಗೆ ಗೊತ್ತು. ಇಂದಿಗಿಂತ ಇನ್ನೆಂದೂ ಅದರ ಅವಶ್ಯಕತೆ ಹೆಚ್ಚಿನದಿರಲಿಲ್ಲನೆಂದು ಅವರ ಮತ. ಹಳ್ಳಿ ಹಳ್ಳಿಗಳನ್ನು ವ್ಯಾಪಿಸುವ ರಚನಾತ್ಮಕ ಕಾರ್ಯದ ಬೆಂಬಲವಿರದಿದ್ದರೆ ಅವರ ಕಾಯಿದೆ ಮಂಡಲದ ಸದಸ್ಯರಿಗೆ ಸುಮ್ಮನೆ ಕುಳಿರುವುದಲ್ಲದೆ ಬೇರೆಯ ಕೆಲಸವಿಲ್ಲ; ಮತ್ತು ಮತದಾರರು ಮತಗ್ರಾಹಕರ ದುರ್ಯೋಜನೆಗಳಿಗೆ ವಶರಾಗುತ್ತಾರೆ. ಸ್ತ್ರೀಪುರುಷರಿಬ್ಬರಿಗೂ ವಯಸ್ಕ ಮತಾಧಿಕಾರ ದೊರೆತರೆ ಕೂಲಿಕಾರರ ಮತಗಳು ಸಾಗರದಲ್ಲಿಯ ಒಂದು ಹನಿಯೇ ಸರಿ. ಜಗತ್ತಿನಲ್ಲಿ ಹೆಚ್ಚಿನ ಪ್ರಮಾಣದಿಂದ ನಡೆದವುಗಳಲ್ಲಿ ಅದೊಂದು ಅತ್ಯಂತ ಧೀರ ಪ್ರಯೋಗವೆಂದು ಹೇಳಬಹುದು. ಸರಿಯಾದ ಪೂರ್ವ ಸಿದ್ಧತೆಯಿದ್ದು ಸಂಭಾವ್ಯವಾದ ಅಪಾಯಗಳಿಗೆ ಪೂರ್ವಭಾವಿಯಾಗಿ ತಡೆಯೋಪಾಯಗಳನ್ನು ರಚಿಸಿ ಪ್ರಾರಂಭಿಸಲಾಗದಿದ್ದರೆ ವಯಸ್ಕ ಮತದಾನ ಪದ್ಧತಿಯೆಂಬುದು ಇಡಿಯ ದೇಶವನ್ನು ಮುಳುಗಿಸುವ ಒಂದು ಜಲಪ್ರಳಯವೇ ಆದೀತು. ಉಕ್ತ ಉದ್ದೇಶ ಸಾಧನೆಗೆ ಚೆನ್ನಾಗಿ ವಿವೇಚಿಸಿ ಸಿದ್ಧಪಡಿಸಿದ ರಚನಾತ್ಮಕ ಕಾರ್ಯಕ್ರಮವಲ್ಲದೆ ಬೇರೊಂದಿಲ್ಲವೆಂದು ಗಾಂಧೀಜಿಯ ಅಭಿಪ್ರಾಯ.

—ಸುಶೀಲಾ ನಯ್ಯರ

ಗಾಂಧೀಜಿಯ ಭಾಷಣಗಳು

(೯ನೇ ಪುಟದಿಂದ)

ಸ್ವಾತಂತ್ರ್ಯ ಅಲ್ಪಾಯುವಾಗುವದು. ರಶಿಯಾ, ಅಮೇರಿಕಾ ಮತ್ತು ಬ್ರಿಟನ್ ಕದಾಚಿತ್ ಉಳಿದ ದೇಶಗಳೂ ಬೇಗ ಹಿಂದುಸ್ತಾನದ ಒಳಹೊಕ್ಕು ಹೊಸದಾಗಿ ಸಂಪಾದಿಸಿದ ಸ್ವಾತಂತ್ರ್ಯವನ್ನು ಕೊನೆಗಾಣಿಸಬಲ್ಲವು ಎಂದೆಂದರು ಗಾಂಧೀಜಿ.


ಡಾ. ಶಹರೀರರು ಹಿಂದುಸ್ತಾನಕ್ಕೆ ಪಂಡಿತ ಜವಾಹರಲಾಲರ ಮತ್ತು ಜಿನ್ನಾ ಸಾಹೇಬರ ಸಹಾಯ ಕೋರಲು ಬಂದಿರುವರು. ನೈತಿಕ ಸಹಾಯ ಮಾತ್ರ ಅವರಿಗೆ ಸಿಕ್ಕಬಲ್ಲದು. ಸೈನ್ಯ ಪಡೆಗಿಂತ ಅದು ಹೆಚ್ಚು ಶ್ರೇಷ್ಠವಾಗಿದೆ. ಆದರೆ ಪರಸ್ಪರರಲ್ಲಿ ತಾವೆಲ್ಲ ಹೋರಾಡುತಿದ್ದರೆ ಆ ಸಹಾಯ ಅವರಿಗೆ ಸಿಕ್ಕದು. ನ್ಯಾಯವಾದ ಪಕ್ಷಕ್ಕೆ ಮಾತ್ರ ನೈತಿಕ ಸಹಾಯವನ್ನೆ ಹಿಂದುಸ್ತಾನ ಸಲ್ಲಿಸಬಹುದಾಗಿದೆ.

ಹಿಂದು, ಮುಸಲ್ಮಾನ, ಶೀಖರು, ಪಾರಸಿಗಳು, ಕ್ರಿಶ್ಚನರು ಮತ್ತು ಉಳಿದವರ ಮಾತೃಭೂಮಿ ಹಿಂದುಸ್ತಾನ. ಪಾರಸಿಕರನ್ನು ಇರಾಣದಿಂದ ಹೊರಗಟ್ಟಲಾಯಿತು. ಹಿಂದುಸ್ತಾನದಲ್ಲಿ ಅವರಿಗೆ ಆಶ್ರಯ ಸಿಕ್ಕಿತು. ಇಲ್ಲಿ ಅವರಿಗೆ ಸಮಾನರಂತೆ ನಡೆಸಿಕೊಳ್ಳಲಾಯಿತು. ಹಿಂದುಸ್ತಾನದ ಪರಂಪರೆ ಅದು. ಹಿಂದುಸ್ತಾನಕ್ಕೆ ಬರುವವರನ್ನು ಅವರು ತಿರಸ್ಕರಿಸುವದಿಲ್ಲ ಇಲ್ಲವೆ ತೆಗಳುವದಿಲ್ಲ. ಅದು ಎಲ್ಲರನ್ನೂ ಸೇರಿಸಿಕೊಳ್ಳುತ್ತದೆ.

ರಾಷ್ಟ್ರಭಾಷೆ

ಆದರೀಗ ರಾಷ್ಟ್ರಭಾಷೆಯ ಸಂಬಂಧದಲ್ಲಿ ಕಲಹವೆದ್ದಿದೆ. ರಾಷ್ಟ್ರಭಾಷೆ ಯಾವದಾಗಬೇಕು? ದೇವನಾಗರಿ ಲಿಪಿಯಲ್ಲಿ ಬರೆದ ಹಿಂದಿಯೆ ರಾಷ್ಟ್ರಭಾಷೆಯಾಗತಕ್ಕದ್ದೆಂದು ಹೇಳಲಾಗುತ್ತದೆ. ಇದಕ್ಕೆ ತಾವೆಂದೂ ಒಪ್ಪಲಾರೆವೆಂದು ಗಾಂಧೀಜಿ ನುಡಿದರು ಹಿಂದೀ ಸಾಹಿತ್ಯ ಸಮ್ಮೇಲನಕ್ಕೆ ತಾವು ಎರಡು ಸಲ ಅಧ್ಯಕ್ಷರಾಗಿದ್ದರು. ಹಿಂದೀ ಮತ್ತು ಉರ್ದು ಭಾಷೆಗಳ ಶತ್ರು ತಾವೆಂದಿಗೂ ಆಗಲಾರರು. ದೇವನಾಗರಿ ಇಲ್ಲವೆ ಉರ್ದು ಲಿಪಿಯಲ್ಲಿ ಬರೆದ ಸುಲಭ ಹಿಂದೀ ಮತ್ತು ಉರ್ದುಗಳ ಮಿಶ್ರಣವಾದ ಹಿಂದುಸ್ತಾನಿಯೇ ಹಿಂದುಸ್ತಾನದ ಜನಸಾಮಾನ್ಯದ ಭಾಷೆ, ಹಿಂದುಸ್ತಾನದ ಮಿಶ್ರಭಾಷೆಯೆಂದು ತಮಗೆ ಮನವರಿಕೆಯಾಗಿದೆ. ಮುಸಲ್ಮಾನರನ್ನು ಬಿಟ್ಟು ಬಿಡಿರಿ, ಅನೇಕ ಹಿಂದುಗಳಿಗು ಕೂಡ ಸಂಸ್ಕೃತಮಿಶ್ರಿತ ಹಿಂದೀ ತಿಳಿಯುವದಿಲ್ಲ ಮತ್ತು ದೇವನಾಗರಿಯಲ್ಲಿ ಅವರು ಬರೆಯಲಾರರೆಂಬುದು ತಮಗೆ ಗೊತ್ತುಂಟು. ಒಬ್ಬೊಂಟಿಗರಾಗಿಯೆ ಉಳಿಯುವ ಪ್ರಸಂಗಬಂದರೂ ಹಿಂದುಸ್ತಾನಿಗೇ ತಾವು ಅಂಟಿಕೊಂಡುಳಿವೆವು. ಮುಸಲ್ಮಾನರು ತಾವು ಹಿಂದುಗಳ ವೈರಿಗಳೆಂದು ಇಂದು ಭಾವಿಸಬಹುದು. ಹಿಂದುಸ್ತಾನ ಮುಸಲ್ಮಾನರ ಮನವೊಲಿಸಬೇಕಾಗಿದೆ, ದಾಸ್ಯವೃತ್ತಿಯಿಂದ ಇಲ್ಲವೆ ಸಂತೋಷಪಡಿಸುವ ಧೋರಣದಿಂದಲ್ಲದಿದ್ದರೂ ಶತ್ರುಭಾವನೆಯಿಂದಲೂ ಅಲ್ಲೆಂಬುದು ಸಿದ್ಧ. ಶೂರರ ಅಹಿಂಸೆಯಾದ ಮಿತ್ರತ್ವದಿಂದಲೆ ಅವರು ಹಾಗೆ ಮಾಡಬಲ್ಲರು. ಹೇಡಿತನವನ್ನು ತಾವೆಂದಿಗೂ ಕಲಿಸಲಾರರು. ನಿಷ್ಠುರ ಹಿಂದು ತಾವಾಗಿದ್ದರೂ ತಮ್ಮ ಹಿಂದೂಧರ್ಮ ಬೇರೆ ಧರ್ಮದವರನ್ನೂ ಸಮಾನ ಭಾವನೆಯಿಂದ ನಡೆಸಿಕೊಳ್ಳಬೇಕೆಂಬದನ್ನು ಕಲಿಸುತ್ತದೆ.

ಹಿಂದುಸ್ತಾನವೀಗ ವಿಭಜಿಸಲ್ಪಟ್ಟದ್ದರಿಂದ ಜಗತ್ತಿನಲ್ಲಿ ದೊಡ್ಡ ರಾಷ್ಟ್ರದ ಸ್ಥಾನಮಾನಗಳನ್ನು ಅದು ಸಂಪಾದಿಸಲಾರದೆಂದು ಗೆಳೆಯರೊಬ್ಬರು ತಮಗೆ ಬರೆದಿರುವರು. ಎರಡೂ ಭಾಗಗಳು ಬಾಂಧವರಂತೆ ಮತ್ತು ಮಿತ್ರರಂತೆ ನಡೆದುಕೊಂಡದ್ದಾದರೆ ಈ ಅಭಿಪ್ರಾಯಕ್ಕೆ ತಾವು ಒಪ್ಪಲಾರೆವೆಂದು ಗಾಂಧೀಜಿ ಹೇಳಿದರು.



ಧಾರವಾಡ

ಹುಬ್ಬಳ್ಳಿ ನಗರ ಸಭೆಗೆ ಶ್ರೀ ರಾಮಣ್ಣ ಕುಲಕರ್ಣಿಯವರು ಅಧ್ಯಕ್ಷರು ಶ್ರೀ ರುದ್ರಪ್ಪಣ್ಣ ವಾಲಿಯವರು ಉಪಾಧ್ಯಕ್ಷರಾಗಿ ಆರಿಸಲ್ಪಟ್ಟರು.

ಧಾರವಾಡ ನಗರ ಸಭೆಯ ಸದಸ್ಯರಾದ ಶ್ರೀ ಮುನವಳ್ಳಿಯವರು ಘಟನಾ ಸಮಿತಿಗೆ ದಕ್ಷಿಣ ಸಂಸ್ಥಾನ ಪ್ರತಿನಿಧಿಗಳ ಒತಿಯಿಂದ ಆರಿಸಿ ಬಂದದ್ದಕ್ಕಾಗಿ ನಗರ ಸಭೆಯ ಸದಸ್ಯರು ಅವರನ್ನಭಿನಂದಿಸುವ ಗೊತ್ತುವಳಿಯನ್ನು ಸ್ವೀಕರಿಸಿದರು.

ಹುಬ್ಬಳ್ಳಿ ನಗರ ಸಭೆಯ ಹೊಸ ಅಧ್ಯಕ್ಷ ಉಪಾಧ್ಯಕ್ಷ ಮೊದಲಾದವರು ಭಂಗಿಗಳ ಬೇಡಿಕೆಗಳ ಪ್ರಶ್ನೆಯನ್ನು ವಿಚಾರಿಸಲು ಒಂದು ತಿಂಗಳ ಅವಧಿಯನ್ನು ಕೊಡಬೇಕೆಂದು ಕೇಳಿದರಿಂದ ಭಂಗೀ ಜನರು ಕಳೆದ ೨೯ ರಿಂದ ಪ್ರಾರಂಭಿಸಬೇಕೆಂದಿದ್ದ ಸಂಪನ್ನು ಒಂದು ತಿಂಗಳು ಮುಂದಕ್ಕೆ ಹಾಕಿದ್ದಾರೆ.

ಹುಬ್ಬಳ್ಳಿಯಲ್ಲಿ ನಗರಾಧ್ಯಕ್ಷ ಶ್ರೀ ರಾಮಣ್ಣ ಕುಲಕರ್ಣಿಯವರ ಅಧ್ಯಕ್ಷತೆಯಲ್ಲಿ ಆಮಂತ್ರಿತ ಸದ್ಗೃಹಸ್ಥರ ಸಭೆ ೨೯ ಕ್ಕೆ ನಗರ ಸಭೆಯಲ್ಲಿ ಸೇರಿದ್ದಿತು. ಡಿ. ಎಸ್. ಪಿ. ಸಾಹೇಬರು ಗೃಹ ರಕ್ಷಕ ದಲದ ಸ್ಥಾಪನೆಯ ಅವಶ್ಯಕತೆಯನ್ನು ತಿಳಿಸಿದ ನಂತರ ಶ್ರೀ ಎಂ. ಆರ್. ಪಾಟೀಲರು ದಳನಾಯಕರಾಗಿ ಆರಿಸಲ್ಪಟ್ಟರು. ಶ್ರೀ ಹುಂದೂರ, ಕೆಂಪಣ್ಣನವರ ಮತ್ತು ಆರ್. ಕೆ. ಜೋಶಿಯವರ ಸಲಹೆ ಸಮಿತಿ ಸ್ಥಾಪಿತವಾಯಿತು.

ಕರ್ನಾಟಕ ವಿಶ್ವವಿದ್ಯಾಲಯ ಪ್ರಶ್ನಾವಲಿಗೆ ಉತ್ತರ ಕಳಿಸುವ ಅವಧಿಯನ್ನು ಇದೇ ಅಗಷ್ಟ ೧೦ ರ ವರೆಗೆ ಬೆಳಿಸಲಾಗಿದೆಂದು ಕರ್ನಾಟಕ ವಿಶ್ವವಿದ್ಯಾಲಯ ಸಮಿತಿಯ ಕಾರ್ಯದರ್ಶಿಗಳು ಪ್ರಕಟಿಸುತ್ತಾರೆ.

ಧಾರವಾಡ ಜಿಲ್ಲೆಯಲ್ಲಿ ಹತ್ತಿಕಾಳಿನ ಮೂಲ ಬೆಲೆಯನ್ನು ೨೮ ಪೌಂಡಿಗೆ ರೂ. ೨—೬—೯ ಎಂದು ಗೊತ್ತುಪಡಿಸಿದ್ದಾರೆ. (ಬಿತ್ತಿಗೆ ಕಾಳಿನ ಹೊರತು) ಇದರಲ್ಲಿ ಸಾರಿಗೆ ವೆಚ್ಚವನ್ನು ಕೂಡಿಸಬಹುದೆಂದೂ ಚಕ್ಕಡಿಯಲ್ಲಿ ಸಾಗಿಸುವದಾದರೆ ೨೮ ಪೌಂಡಿಗೆ ಪ್ರತಿ ಮೈಲಿಗೆ ೨ ಪೈಯಂತೆ, ಚಕ್ಕಡಿ ಹೊರತು ಬೇರೆ ವಾಹನಗಳಲ್ಲಿ ಸಾಗಿಸುವದಾದರೆ ಮೈಲಿಗೆ ೧ ಪೈಯಂತೆಯೂ ಸಾರಿಗೆ ವೆಚ್ಚ ಹಿಡಿಯಬೇಕೆಂದೂ ಕಲೆಕ್ಟರರು ಪ್ರಕಟಿಸುತ್ತಾರೆ.

ಗದುಗಿನ ವಕೀಲ ಚಾಳದಲ್ಲಿ ೨೨ನೇ ದಿನ ಕಳ್ಳರು ಶ್ರೀ ಕೆ. ಆರ್. ಜೋಶಿಯವರ ಮನೆಯ ಕೀಲೀ ಮುರಿದು ೬-೮ ಸಾವಿರ ರೂಪಾಯಿ ಬೆಲೆ ಬಾಳುವ ಬಂಗಾರ ಹಾಗು ಬೆಳ್ಳಿ ಸಾಮಾನು ತೆಗೆದುಕೊಂಡು ಹೋಗಿರುವರು. ಈ ಭಾಗದಲ್ಲಿ ತಿಂಗಳಿಂದ ಕಳವುಗಳು ನಡೆದೇ ಇವೆ.

ತೋಟದ ಸಾಗುವಳಿದಾರರಿಗೆ ಪೇರು, ದಾಳಿಂಬ, ಮೋಸಂಬಿ ಮೊದಲಾದ ಅಗಿ ಮತ್ತು ಕಲಮುಗಳನ್ನು ಯೋಗ್ಯ ಬೆಲೆಗೆ ಒದಗಿಸಿ ಕೊಡುವದಕ್ಕಾಗಿ ಜಿಲ್ಹಾ ಸಮಿತಿಯಲ್ಲಿ ಸಂಗ್ರಹಿಸಿಡಲಾಗಿದೆ. ಅಲ್ಲದೆ ಚಳ್ಳವರಿ, ಚವಳಿ ಮೊದಲಾದ ಬೀಜಗಳು ಗೆಣಸಿನ ಬಳ್ಳಿಗಳು ಕ್ರಯಕ್ಕೆ ದೊರೆವುವೆಂದು ಧಾರವಾಡ ಜಿಲ್ಹಾ ಒಕ್ಕಲತನ ಅಧಿಕಾರಿಗಳು ತಿಳಿಸುತ್ತಾರೆ.

ಗದಗ ನಗರ ಸಭೆಯ ಅಸ್ಪತ್ರೆಯಲ್ಲಿ ಡಾಕ್ಟರರಾಗಿರುವ ಶ್ರೀ ಜಿ. ಎ ವಾಟವೆ ಇವರು ೨೬ನೇ ತಾರೀಕು ಸಾಯಂಕಾಲ ಒಬ್ಬರಿಂದ ೭೫ ರೂ. ಲಂಚ ತೆಗೆದುಕೊಂಡು ಸರ್ಟಿಫಿಕೀಟ ಕೊಡುತಿದ್ದಾಗ ಲಂಚ ನಿರ್ಮೂಲನ ಶಾಖೆಯ ಸಬ್ ಇನಸ್ಪೆಕ್ಟರರು ಅವರನ್ನು ಸೆರೆಹಿಡಿದರು.

ಹುಬ್ಬಳ್ಳಿ ರೇಲ್ವೆ ಕಾಮಗಾರ ಸಂಘದ ೧೯ ನೆ ವಾರ್ಷಿಕಾಧಿವೇಶನ ೨೮-೨೯ ಎರಡು ದಿನ ಸೇರಿ ಶ್ರೀ ಶಂಭುರಾವ ಜೋಶಿಯವರು ಉಪಾಧ್ಯಕ್ಷರು. ಎಂ ನಾರಾಯಣನ್ ಸೆಕ್ರೆಟರಿ, ಎಂ. ಎಚ್. ಕುಲಕರ್ಣಿ ಸಹಕಾರ್ಯದರ್ಶಿ ಡಿ. ಪುರುಷೋತ್ತಮರು ಕೋಶಾಧಿಕಾರಿಗಳಾಗಿ ಆರಿಸಲ್ಪಟ್ಟರು. ಕಾರ್ಯಕಾರೀ ಮಂಡಲವೂ ಆರಿಸಲ್ಪಟ್ಟಿತು. ಸಂಬಳ ಸಮಿತಿಯವರ ಶಿಫಾರಸುಗಳನ್ನು ನಿಷೇಧಿಸುವ ಗೊತ್ತುವಳಿಯೂ ಸ್ವೀಕೃತವಾಯಿತು.

ಹುಬ್ಬಳ್ಳಿಯ ಓರ್ವ ಕನ್ಯೆಯ ಮಾನಭಂಗ ಮಾಡಲು ಪ್ರಯತ್ನಿಸಿದರೆಂದು, ಧಾರವಾಡ ಜಿಲ್ಹಾ ಸೆಶನ್ಸಕೋರ್ಟಿನಲ್ಲಿ ನಡೆದ ಖಟ್ಲೆಯಲ್ಲಿ ಶ್ರೀ ಮಹಮ್ಮದ ದಾದಾ ಮತ್ತು ಇವರಿಗೆ ಸಹಾಯ ಮಾಡಿದರೆಂದು ಹೇಳಲ್ಪಟ್ಟ ಮೆಹರಜಾನ ಇವರು ನಿರ್ದೋಷಿಗಳೆಂದು ಬಿಡುಗಡೆ ಮಾಡಲ್ಪಟ್ಟರು.

ಧಾರವಾಡ ಹುಚ್ಚರ ಅಸ್ಪತ್ರೆಯ ಡಾಕ್ಟರರ ಕೆಲವು ಸಂಬಂಧಿಕರಲ್ಲಿ ಅವರು ಊರಿಗೆ ಹೊರಟಾಗ ಅವರ ಸಾಮಾನುಗಳಲ್ಲಿ ಲಂಚ ನಿರ್ಮೂಲನ ಶಾಖೆಯವರಿಗೆ ಇಂಜಕ್ಶನ ಟ್ಯೂಬ ಲಿಂಟ ಮೊದಲಾದವುಗಳು ದೊರೆತ ಸಂಬಂಧದಲ್ಲಿ ಡಾಕ್ಟರರು ಈಗ ಸಸ್ಪೆಂಡ ಮಾಡಲ್ಪಟ್ಟಿರುವರು.

ಬೆಳಗಾವಿ

ಖಾಸಬಾಗ ಶ್ರೀ ಸಂಗಮೇಶ್ವರ ಪ್ರಸಾದ ನಿಲಯದ ೮೫ ಬಡ ವಿದ್ಯಾರ್ಥಿಗಳಿಗೆ ಹೂಲಿ ಶ್ರೀಗಳವರು ಉಚಿತವಾಗಿ ಆಶೀರ್ವದಿಸಿದ ಶಾಲೆಯ ಸಾಹಿತ್ಯ ಸಾಮಾನ ಮೊದಲಾದ್ದನ್ನು ಹಂಚುವ ಸಮಾರಂಭ ಶ್ರೀ ಭೂಸನೂರಮಠ ಇವರ ಅಧ್ಯಕ್ಷತೆಯಲ್ಲಿ ನೆರವೇರಿ ಅವರ ಉಪದೇಶಪರ ಭಾಷಣವಾಯಿತು.

ಬೆಳಗಾವಿಯ ಮಾರುತಿಗಲ್ಲಿಯಲ್ಲಿರುವ ವೀರಶೈವ ಫ್ರೀ ಬೋರ್ಡಿಂಗಿಗೆ ದೇಶನೂರ ಶ್ರೀ ಸಿದ್ಧಲಿಂಗಮಹಾಸ್ವಾಮಿಗಳು ತಿಗಡಿಯಲ್ಲಿಯ ತಮ್ಮ ೬ ಎಕರೆ ಭೂಮಿಯನ್ನು ಒಂದು ಕೋಣೆಯ ಬಗ್ಗೆ ೫೦೧ ರೂಪಾಯಿಗಳನ್ನು ಕೊಟ್ಟಿದ್ದಾರೆ. ಇದರಂತೆ ಹಲಸಿಯ ಶ್ರೀ ವೀರಭದ್ರಪ್ಪ ಹವಾಲದಾರ ಇವರು ೧೦೦೦ ರೂಪಾಯಿ ಬೆಲೆಬಾಳುವ ಹೊಲವನ್ನು ಕೊಟ್ಟಿರುವರು.

ಮಾಧ್ಯಮಿಕ ಶಿಕ್ಷಣದ ಪರಿಸ್ಥಿತಿಯನ್ನು ವಿಚಾರಿಸುವದಕ್ಕಾಗಿ ಸರಕಾರದವರು ನೇಮಿಸಿದ ಸಮಿತಿಯ ಶ್ರೀ ಪಿ. ಡಿ. ಘಾಟೆ ಮತ್ತು ಆರ್. ವಿ. ಪರುಳೇಕರ ಇವರು ಕಳೆದವಾರ ಬೆಳಗಾವಿಗೆ ಬಂದಿದ್ದರು. ಪ್ರಮುಖ ಶಿಕ್ಷಣಜ್ಞರನ್ನು ಕಂಡು ವಿಚಾರವಿನಿಮಯ ಮಾಡಿದರು. ಮುಂಬಯಿಯಂಥ ದೊಡ್ಡ ನಗರ ಮತ್ತು ಉಳಿದ ನಗರಗಳಿಗೆ ಅನ್ವಯಿಸುವಂತೆ ಎರಡು ಸಂಬಳ ಪ್ರಮಾಣವನ್ನು ಮಾತ್ರ ಮಾಡಬೇಕೆಂದು ಮುಂತಾಗಿ ಸಮಿತಿಯವರ ಅಭಿಪ್ರಾಯವಿದೆಂದು ತಿಳಿಯುತ್ತದೆ.

ಅಥಣಿ ತಾಲೂಕ ಸನದೀ ಪರಿಷತ್ತು ೨೬ ಕ್ಕೆ ಶಾಸನಸಭೆಯ ಸದಸ್ಯರಾದ ಶ್ರೀ ದಳವಾಯಿ ವಕೀಲರ ಅಧ್ಯಕ್ಷತೆಯಲ್ಲಿ ಜರುಗಿತು. ಸ್ವಾಗತಾಧ್ಯಕ್ಷರು ಎ. ಎಸ್. ಕುಲಕರ್ಣಿಯವರಿದ್ದು ಉದ್ಘಾಟನೆಯನ್ನು ಜಿಲ್ಹಾ ಕಾಂಗ್ರೆಸ ಅಧ್ಯಕ್ಷರಾದ ಶ್ರೀ ಶೇಖಸಾಹೇಬರು ಮಾಡಿದರು. ಸನದಿಗಳಿಗೆ ಸಂಬಂಧಿಸಿದ ಕೆಲ ಗೊತ್ತುವಳಿಗಳು ಸ್ವೀಕೃತವಾದವು.

ವಿಜಾಪುರ

ಪುನರ್ನಿಯೋಜನೆ ಶಾಖೆಯ ಠರಾವಿನ ಪ್ರಕಾರ ಸರಕಾರ ನವಂಬರ ೧ರಿಂದ ವಿಜಾಪೂರ ಜಿಲ್ಹೆಯಲ್ಲಿ ಟ್ರ್ಯಾಕ್ಟರ ರೆಂಟಿ ಹೊಡೆಯುವ ಕಾರ್ಯಪ್ರಾರಂಭವಾಗುವದು. ಇದರ ಲಾಭ ಪಡೆಯ ಬಯಸುವವರು ತಾಲೂಕ ಒಕ್ಕಲತನ ಅಸಿಸ್ಟಂಟರ ಮುಖಾಂತರ ಜಿಲ್ಹಾ ರೂರಲ್ ಡೆವಲಪ್‌ಮೆಂಟ ಬೋರ್ಡ ಸೆಕ್ರೆಟರಿಗೆ ಬೇಗನೆ ಅರ್ಜಿ ಕಳಿಸಬೇಕು. ಒಂದು ಹಳ್ಳಿಯಲ್ಲಿ ಇಂಥ ಕ್ಷೇತ್ರ ೫೦೦ ಎಕರೆಗಿಂತ ಕಡಿಮೆ ಇರಬಾರದು.

ವಿಜಾಪುರ ನಗರ ಸಭೆಗೆ ಶ್ರೀ ಜಿ. ಎ. ಕೆ. ಭೋರಿಯವರು ಅವಿರೋಧ ಅಧ್ಯಕ್ಷರು ಶ್ರೀ ಎಂ. ಆರ್. ಕಂಭಾವಿಯವರು ಉಪಾಧ್ಯಕ್ಷರಾಗಿ ಆರಿಸಲ್ಪಟ್ಟರು. ಪಾಯಣ್ಣವರರೂ ಉಪಾಧ್ಯಕ್ಷಪದಕ್ಕೆ ನಿಂತಿದ್ದರು ಆದರೆ ಪರಾಭವ ಹೊಂದಿದರು.

ಮುಂಬಯಿ ಸರಕಾರದ ಒಕ್ಕಲತನದ ಮಂತ್ರಿಗಳಾದ ಶ್ರೀ ಎಂ. ಪಿ. ಪಾಟೀಲರು ವಿಜಾಪುರ ಬಾಗಲಕೋಟೆ ಯಲಗೂರ ಮುಂತಾದ ಸ್ಥಳಗಳಿಗೆ ಭೆಟ್ಟಿಗೊಟ್ಟು ನೀರಾವರಿ ಯೋಜನೆಗಳ ಸಂಬಂಧದಲ್ಲಿ ವಿವರಣೆ ಮಾಡಿದರು.

ನರೇಗಲ್ಲಿನ ಪ್ರಮುಖರೂ ಹತ್ತೀ ಅರಳೆಯ ಜಿನ್ ಒಡೆಯರೂ ಆದ ಶ್ರೀ ಬಂದನಗೌಡ ಸಂಕನಗವಡರ ಇವರಿಗೆ ಹತ್ತೀಕಾಳಿನ ಸುಳ್ಳು ಲೆಕ್ಕ ಇಟ್ಟ ಬಗ್ಗೆ ರೋಣದ ೧ ನೇ ವರ್ಗದ ಮ್ಯಾಜಿಸ್ಟ್ರೇಟರು ಒಂದು ದಿನ ಶಿಕ್ಷೆ ಮತ್ತು ೧೦೦ ರೂ. ದಂಡ ವಿಧಿಸಿದ್ದಾರೆ.

ಸಂಬಳ ಸ್ಕೇಲನ್ನು ಪ್ರಾಂತದಲ್ಲಿ ಜಾರಿಯಲ್ಲಿ ತರುವದನ್ನು ವಿಲಂಬಿಸುತಿರುವದನ್ನು ನಿಷೇಧಿಸುವದಕ್ಕಾಗಿ ಧಾರವಾಡ ಜಿಲ್ಹಾ ನೌಕರ ಸಂಘದವರು ಸಂಪನ್ನು ಪ್ರಾರಂಭಿಸಬೇಕೆಂದು ವಿಚಾರ ನಡೆಸಿದ್ದರಷ್ಟೇ. ಆದರೆ ಈ ವಿಷಯವನ್ನು ಸಪ್ಟಂಬರ ೨ ರ ವರೆಗೆ ಮುಂದರಿಸಲಾಯಿತು. ಈ ಅವಧಿಯಲ್ಲಿ ಸರಕಾರದಗೂಡ ಪತ್ರವ್ಯವಹಾರ ನಡೆಸಬೇಕೆಂದು ನಿರ್ಧರಿಸಲಾಯಿತು.

ಬಳ್ಳಾರಿ

ಕೂಡ್ಲಗಿ ಬೋರ್ಡ ಹಾಯಸ್ಕೂಲ ವಿದ್ಯಾರ್ಥಿಗಳು ವಿದ್ಯಾರ್ಥಿ ಕಾಂಗ್ರೆಸ ಸ್ಥಾಪಿಸಿಕೊಂಡು ಕೆ. ಯುವರಾಜ ಸಿಂಗರನ್ನು ಅಧ್ಯಕ್ಷರನ್ನಾಗಿಯೂ ಬಿ. ಗೋವಿಂದರಾಜ ಗುತ್ತರನ್ನು ಕಾರ್ಯದರ್ಶಿಗಳನ್ನಾಗಿಯೂ ಆರಿಸಲಾಯಿತು.

ಹರಿಮಾಣದ ಗರ್ಜಪ್ಪನ ಗುಡಿಯಲ್ಲಿ ಶ್ರೀ ದೇವೇಂದ್ರಗೌಡರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಏಕೀಕರಣ ಸಂಘ ಸ್ಥಾಪಿಸಲಾಯಿತು. ಶ್ರೀ ಶಿ. ವೆ. ದೇಸಾಯಿಯರು ಏಕೀಕರಣ ನಾಡಿನ ಏಳ್ಗೆಯನ್ನು ಕುರಿತು ಮಾತಾಡಿದರು. ೧೧೦ ಜನ ಸಭೆಯಲ್ಲಿಯೇ ಸದಸ್ಯರಾದರು. ೪೫ರೂ. ಕಾಣಿಕೆ ವಸೂಲಾಯಿತು.

ಹೂವಿನ ಹಡಗಲಿ ತಾಲೂಕ ವಿದ್ಯಾರ್ಥಿ ಕಾಂಗ್ರೆಸ ಸಮಿತಿಯವರು ಸಭೆ ಸೇರಿ ಬಳ್ಳಾರಿ ಜಿಲ್ಹೆಯನ್ನು ಆಂಧ್ರ ವಿಶ್ವವಿದ್ಯಾಲಯಕ್ಕೆ ಸೇರಿಸಿಕೊಳ್ಳಲು ಆಂಧ್ರರು ನಡೆಸಿದ ಚಟುವಟಿಕೆಗಳನ್ನು ಖಂಡಿಸಿದರು.

ಕನ್ನಡ ಸಂಸ್ಥಾನ

ಶ್ರೀ ಜನಾರ್ದನರಾವ ದೇಸಾಯರು ಹೈದರಾಬಾದ ಸಂಸ್ಥಾನ ಕರ್ನಾಟಕ ಪ್ರಾಂತ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾಗಿ ಅವಿರೋಧ ಆರಿಸಿ ಬಂದರು.

ಮಹಾಲಿಂಗಪುರದಲ್ಲಿ ಶ್ರೀ ಮನ್ನಿರಂಜನ ಮೃತ್ಯುಂಜಯ ಸ್ವಾಮಿಗಳ ಅಧ್ಯಕ್ಷತೆಯಲ್ಲಿ ೨೩ ನೇ ದಿನ ಸಂಸ್ಥಾನದ ಒಡ್ಡರ ಪರಿಷತ್ತು ಸೇರಿ ಸಮಾಜದ ಹೆಣ್ಣುಮಕ್ಕಳು ಕುಪ್ಪಸ ತೊಡುವ ಪದ್ಧತಿ ಪ್ರಾರಂಭಿಸಬೇಕು. ಒಡ್ಡರಿಗೆ ಸಾರ್ವಜನಿಕ ದೇವಾಲಯ ಹಾಟೆಲ ಪ್ರವೇಶ ಕೊಡಲು ವಿನಂತಿಸುವದು ಮೊದಲಾದ ಠರಾವು ಪಾಸಾದವು.

ಚಿತ್ರದುರ್ಗ ಪೌರಸಭಾಧ್ಯಕ್ಷಪದಕ್ಕೆ ಶ್ರೀ ಭೀಮಪ್ಪ ನಾಯಕರು ಬಹುಮತದಿಂದ ಆರಿಸಿ ಬಂದರು. ಇವರಿಗೆ ೧೩ ಮತಗಳು ವಿರೋಧಿಗಳಾದ ವೆಂಕಟಾಚಲಯ್ಯನವರಿಗೆ ೭ ಮತಗಳು ದೊರೆತವು.

ಡಚ್ ಸಾರ್ವಭೌಮತ್ವದ ವಿರುದ್ಧ ಹೋರಾಡುತಿರುವ ಇಂಡೋನೇಶಿಯನ್ರಿಗೆ ಅಖಿಲ ಭಾರತ ಹಿಂದುಮಹಾಸಭೆಯು ತನ್ನ ಸಹಾನುಭೂತಿಯನ್ನು ವ್ಯಕ್ತಪಡಿಸುತ್ತದೆ. ಎಂದು ಹಿಂದು ಮಹಾಸಭೆಯ ಅಧ್ಯಕ್ಷರಾದ ಶ್ರೀ ಭೋಪಟಕರರು ಪ್ರಕಟಿಸುತ್ತಾರೆ.

ಕೆಲಗುಂಡದ ಶ್ರೀ ಪಟ್ಟಾಭಿರಾಮನ್‌ರು ಕೋಲಾರ ತಾಲೂಕಿನಲ್ಲಿ ಗೋಶಾಲೆ ತೆರೆಯಲು ೫೧ ಎಕರೆ ಜಮೀನನ್ನು ಮೇವಿಗಾಗಿ ಮತ್ತು ಒಂದು ಎಕರೆ ಭೂಮಿಯನ್ನು ಗೋಶಾಲೆಗಾಗಿಯೂ ದಾನಮಾಡಿದ್ದಾರೆ.

ಗುಡಗೇರಿಯಲ್ಲಿ ತರುಣಸಂಘದ ಕಚೇರಿಯಲ್ಲಿ ಈಶ್ವರಗೌಡರ ಅಧ್ಯಕ್ಷತೆಯಲ್ಲಿ ಪ್ರಮುಖರ ಸಭೆಸೇರಿ ಶಿರಹಟ್ಟಿ ಸಂಸ್ಥಾನ ಪ್ರಜಾಪರಿಷತ್ತನ್ನು ಗುಡಗೇರಿಯಲ್ಲಿ ಕೂಡಿಸುವದು ಗೊತ್ತಾಯಿತು.

ಸಂಯುಕ್ತ ವಿಧಾಯಕ ಮಂಡಳದ ಸಲುವಾಗಿ ಎರಡು ಗುಂಪುಗಳಾಗಿದ್ದು ಸಾಂಗಲಿ, ಫಲ್ಟಣ, ರಾಮದುರ್ಗ, ಭೋರ, ಹಿರಿಯ ಕುರಂದವಾಡ ಔಂಧ ಬುಧಗಾಂವ ಇವು ಒಂದು ಗುಂಪಿಗೆ ಸೇರಿದ್ದು ಉಳಿದವುಗಳು ಕೊಲ್ಹಾಪುರ ಗುಂಪಿಗೆ ಸೇರಿವೆ. ಕೊಲ್ಹಾಪುರ ಗುಂಪಿನ ಕಚೇರಿ ಕೊಲ್ಹಾಪುರದಲ್ಲಿ ಮತ್ತು ಎರಡನೆ ಗುಂಪಿನ ಕಚೇರಿ ಸಾಂಗಲಿಯಲ್ಲಿ ಸ್ಥಾಪಿತವಾಗುವದು.

ಉತ್ತರ ಕನ್ನಡ

ಉತ್ತರ ಕನ್ನಡ ಜಿಲ್ಹಾ ಕಾರಕೂನ ಸಂಘದವರು ತಿಂಗಳಿಗೆ ೧೦ ರೂ. ನಗರ ಭತ್ತೆ, ೪೫ ರೂ. ತುಟ್ಟಿ ಭತ್ತೆ ಈಗಿನ ಇತ್ತುವಿ ದೊಣೆಗೆ, ೧೨೦ ರೂಪಾಯಿ ಪ್ರಾರಂಭದ ಸಂಬಳ ಕೊಡಬೇಕೆಂದು ಬೇಡಿಕೆ ಮುಂಡಿಸಿರುವರು. ಮತ್ತು ಈ ಬಗ್ಗೆ ಅವರು ಹೂಡಲಿದ್ದ ಸಂಘಟಿತ ಸಂಪನ್ನು ಒಂದು ತಿಂಗಳ ವರೆಗೆ ಮುಂದೂಡಿದ್ದಾರೆ.

ಕಾರವಾರ ಜಿಲ್ಹೆಗೆ ಡಿಸಂಬರ ಕೊನೆಯ ವರೆಗೆ ೭೬೦೦ ಟನ್ ಆಹಾರ ಧಾನ್ಯ ಬೇಕಾಗು ತಿದ್ದು ಈಗ ಕೇವಲ ೭೦೦೦ ಟನ್ ಸಂಗ್ರಹವಿರುವದರಿಂದ ಅಕ್ಕಿ ಸೀದಾದಲ್ಲಿ ಕಡಿತ ಮಾಡುವ ಪ್ರಸಂಗ ಬಂದಿದೆಂದು ತಿಳಿಯುತ್ತದೆ.

ಜಿಲ್ಹಾ ಮ್ಯಾಜಿಸ್ಟ್ರೇಟರ ಹುಕುಮು ಮುರಿದ ಬಗ್ಗೆ ಬಂಧಿಸಲ್ಪಟ್ಟ ಧಾರವಾಡಕರ ಮತ್ತು ಮಹೊತ್ತಬ್ಬ ಕಮ್ಯುನಿಸ್ಟರಿಗೆ ೧ ತಿಂಗಳ ಕಠಿಣ ಶಿಕ್ಷೆ ೨೫ ರೂಪಾಯಿ ದಂಡ ದೇರೆ ತುಂಬದಿಗೆ ೧೫ ದಿವಸ ಕೈದು ಹೀಗೆ ಶಿಕ್ಷೆ ವಿಧಿಸಲಾಯಿತು.

ಕಾರವಾರ ಮುನಿಸಿಪಾಲಿಟಿಯ ಚುನಾವಣೆ ಬರುವ ಸಪ್ಟಂಬರ ೨೩ಕ್ಕೆ ಆಗಲಿದೆಯಷ್ಟೇ. ಆದರೆ ಈ ಚುನಾವಣೆಗಳು ಪ್ರತ್ಯೇಕ ಮತದಾರ ಸಂಘಗಳ ಪರವಾಗಿ ಆಗುವದು ಅನಿಷ್ಟವಾದ್ದರಿಂದ ಸಂಯುಕ್ತ ಮತದಾರ ಸಂಘಗಳ ದ್ವಾರಾ ಆಗುವ ಏರ್ಪಾಡು ಆಗುವ ವರೆಗೆ ಚುನಾವಣೆಗಳನ್ನು ಮುಂದಕ್ಕೆ ಹಾಕಬೇಕೆಂದು ಕೊಂಕಣ ಪರಿಷತ್ತಿನ ಕಾರ್ಯದರ್ಶಿಗಳಾದ ಎಂ. ಎಂ. ಶಾನಭಾಗರು ಸ್ಥಾನಿಕ ಸ್ವರಾಜ್ಯ ಶಾಖೆಯ ಮಂತ್ರಿಗಳ ಕಡೆಗೆ ಮನವಿ ಮಾಡಿಕೊಂಡಿದ್ದಾರೆ.

ಮುಂಡಗೋಡದಲ್ಲಿ ದಿನಾಂಕ ೨೮ ರಾತ್ರಿ ಸಂತೆಗೆ ಬಂದ ಗಾಡಿಗಳಲ್ಲಿ ಅಕ್ಕಿ ಮತ್ತು ಅವಲಕ್ಕಿಗಳನ್ನು ತೆಗೆದುಕೊಂಡು ಹೋಗುತಿರುವರೆಂದು ತಿಳಿದು ಬಂದದ್ದರಿಂದ ಪೋಲೀಸರು ಎಲ್ಲ ಗಾಡಿಗಳಲ್ಲಿ ಶೋಧಿಸಲಾಗಿ ಎರಡು ಗಾಡಿಗಳಲ್ಲಿ ಅವಲಕ್ಕಿ ತೆಗೆದುಕೊಂಡು ಹೋಗುತಿರುವದು ಕಂಡು ಬಂತು. ಶಿಗ್ಗಾಂವಿ ಮತ್ತು ಧುಂಡಸಿಯ ಎರಡು ಗಾಡಿಗಳನ್ನು ಹಿಡಿದು ಮುಂದಿನ ಕ್ರಮ ಕೈಕೊಳ್ಳಲು ಅಧಿಕಾರಿಗಳಿಗೆ ಒಪ್ಪಿಸಲಾಯಿತು.

ಕೊಲ್ಹಾಪುರ ಸಂಸ್ಥಾನ ಹಲವು ವಿಶಿಷ್ಟ ಕರಾರುಗಳನ್ನು ಹಾಕಿ ಹಿಂದುಸ್ತಾನ ಘಟನಾ ಸಮಿತಿಯಲ್ಲಿ ಸೇರಲು ನಿರ್ಧರಿಸಿದೆಂದು ತಿಳಿಯುತ್ತದೆ.

ಕೊಲ್ಹಾಪುರ ರೆಸಿಡೆನ್ಸಿ ಕಚೇರಿಯನ್ನು ಬೆಳೆಸುವ ಕೆಲಸ ಮುಗಿದಂತಾಗಿದೆ. ಕಚೇರಿಯಲ್ಲಿದ್ದ ಮಹತ್ವದ ಕಾಗದ ಪತ್ರಗಳಲ್ಲಿ ಕೆಲವುಗಳನ್ನು ಲಂಡನದಲ್ಲಿಯ ಹಿಂದುಸ್ತಾನದ ಹಾಯ ಕಮೀಶನರ ಕಚೇರಿಗೆ ಮತ್ತು ಕೆಲವನ್ನು ದಕ್ಷಿಣ ಸಂಸ್ಥಾನಗಳಿಗೆ ಒಪ್ಪಿಸಲಾಗುವದೆಂದು ತಿಳಿಯುತ್ತದೆ.

ಮಾಲವಣ ಬಂದರವು ಹಿಂದೆ ಕೊಲ್ಹಾಪುರ ರಾಜ್ಯದಲ್ಲಿದ್ದಿತಾದ್ದರಿಂದ ಕೊಲ್ಹಾಪುರಕ್ಕೆ ಬಂದರವಿಲ್ಲದೆ ಅದರ ಅಭಿವೃದ್ಧಿಯಾಗುವ ಸಂಭವವಿಲ್ಲವಾದ್ದರಿಂದ ಕೊಲ್ಹಾಪುರ ಸಂಸ್ಥಾನಕ್ಕೆ ಆ ಬಂದರವನ್ನು ಬೇಡಲು ನ್ಯಾಯ್ಯವಾದ ಹಕ್ಕಿದೆಂದು ಹಿಂದು ಮಹಾಸಭೆಯ ಅಧ್ಯಕ್ಷ ಶ್ರೀ ಭೋಪಟಕರರು ಅಭಿಪ್ರಾಯ ಪಡುತ್ತಾರೆ.

ತೇರದಾಳ ಮಹಾಲದ ಯಾವತ್ತೂ ದಪ್ತರಗಳು ಅಂದರೆ ಸಬ್ ರಜಿಸ್ಟ್ರಾರ ಕಚೇರಿ, ಮುಲ್ಕಿ ಕಚೇರಿ ಮತ್ತು ಗ್ರಾಮದ ದಪ್ತರಗಳ ಭಾಷೆ ಕನ್ನಡ ಮಾಡಬೇಕೆಂದೂ ಅದರಂತೆ ಗ್ಯಾಜಿಟ ಪ್ರಕಟಣೆ ಮೊದಲಾದವುಗಳನ್ನು ಇನ್ನು ಮುಂದೆ ಕನ್ನಡದಲ್ಲಿ ಪ್ರಸಿದ್ಧಿಸಬೇಕೆಂದೂ ರಬಕವಿಯಲ್ಲಿ ೨೬ ಕ್ಕೆ ಕೂಡಿದ ಸಭೆಯಲ್ಲಿ ನಿರ್ಣಯ ಕೈಕೊಳ್ಳಲಾಯಿತು. ಕರ್ನಾಟಕ ಭಾಗದಲ್ಲಿ ಕನ್ನಡ ಅಧಿಕಾರಿಗಳನ್ನೇ ನೇಮಿಸಬೇಕೆಂದೂ ಕೇಳಿಕೊಳ್ಳಲಾಯಿತು.

ಮುಂಬಯಿ

ಹಿಂದೀ ಸ್ವಾತಂತ್ರ್ಯ ದಿನೋತ್ಸವದ ನಿಮಿತ್ತ ಆಗಸ್ಟ ೧೪, ೧೫, ೧೬ ನೆಯ ದಿನಗಳಲ್ಲಿ ಸಾರ್ವಜನಿಕ ಸೂಟಿಯನ್ನು ಕೊಡಬೇಕೆಂಬ ಸೂಚನೆಯನ್ನು ಮಹಾರಾಷ್ಟ್ರ ಪ್ರಾಂ. ಕಾಂ. ಕಮಿಟಿಯ ಕಾರ್ಯದರ್ಶಿಗಳಾದ ಶ್ರೀ ಜ. ವಿ. ದೇಶಪಾಂಡೆಯವರು ಮುಂಬಯಿ ಸರಕಾರದವರಿಗೆ ಮಾಡಿದ್ದಾರೆ.

ಮಹಾತ್ಮಾ ಗಾಂಧಿಯವರ ನವಜೀವನ ಮುದ್ರಣಾಲಯದ ವಿಶ್ವಸ್ತರಾದ ಶ್ರೀ ಜೀವನಜಿ ದೇಸಾಯಿಯವರಿಗೆ ಮುಂಬಯಿ ಸರಕಾರವು ೫೫ ಸಾವಿರ ರೂಪಾಯಿ ನಷ್ಟ ಭರ್ತಿ ಮಾಡಿಕೊಡಲೊಪ್ಪಿದೆ.

ಮುಂಬಯಿ ಮತ್ತು ಉಪನಗರಗಳ ಶಾಲೆ ಕಾಲೇಜುಗಳ ಸುಮಾರು ೫೦ ಸಾವಿರ ವಿದ್ಯಾರ್ಥಿಗಳು ಜುಲೈ ೨೪ ರಲ್ಲಿ ಹರತಾಳ ಪಾಲಿಸಿ ವಿದ್ಯಾರ್ಥಿ ಸಂಘದ ಬಿನ್ನಹದಮೇರೆಗೆ 'ವಿದ್ಯಾರ್ಥಿಗಳ ಬೇಡಿಕೆಯ ದಿನ'ವನ್ನು ಆಚರಿಸಿದರು.

ರಾಮದಾಸ ಹಡಗದ ಜಲಸಮಾಧಿಯಲ್ಲಿ ಕಾಣೆಯಾದ ಜನರಲ್ಲಿ ಒಟ್ಟು ೨೩೨ ಜನರು ಪಾರಾಗಿದ್ದಾರೆಂದು ಇಂಡಿಯನ್ ಕೋಆಪರೇಟಿವ್ ನ್ಯಾವಿಗೇಶನ್ ಕಂಪನಿಯವರು ತಿಳಿಸುತ್ತಾರೆ.

ಮದ್ರಾಸ

ವಿ. ಸತ್ಯನಾರಾಯಣರಾವ್ ಹಾಗೂ ಪಿ. ಗೋವಿಂದ ಮೆನನ್ ಅವರು ಮದ್ರಾಸ ಹೈಕೋರ್ಟಿನ ಅಡಿಶನಲ ಜಜ್ಜರಾಗಿ ನಿಯಮಿಸಲ್ಪಟ್ಟಿದ್ದಾರೆ. ನ್ಯಾಯಮೂರ್ತಿ ಹ್ಯಾಪೆಲರು ರಜೆ ತೆಗೆದುಕೊಂಡದ್ದರಿಂದ ಅವರ ಸ್ಥಳದಲ್ಲಿ ಅಫಿಸಿಯಲ ರಿಸೀವರರಾದ ವಿ. ತ್ಯಾಗರಾಜರನ್ನು ಜಜ್ಜರಾಗಿ ನಿಯಮಿಸಲಾಗಿದೆ.

ಆಗಸ್ಟ ೧೫ ಕ್ಕೆ ಜರುಗುವ ಸ್ವಾತಂತ್ರ್ಯೋತ್ಸವದ ನಿಮಿತ್ತ ಮದ್ರಾಸ ಸರಕಾರವು ಪ್ರಾಂತದಲ್ಲಿರುವ ೧೬ ಸಾವಿರ ಕೈದಿಗಳಲ್ಲಿ ಸುಮಾರು ೨೫೦೦ ಕೈದಿಗಳನ್ನು ಬಿಡುಗಡೆ ಮಾಡಲಿದೆಯೆಂದೂ ಇದರಲ್ಲಿ ರಾಜಕೀಯ ಕೈದಿಗಳನ್ನು ಕೂಡಿಸಿಲ್ಲವೆಂದೂ ಅವರ ಪ್ರಕರಣಗಳನ್ನು ಇನ್ನೂ ಸರಕಾರ ಪರಿಶೀಲಿಸುತ್ತಿದೆಯೆಂದೂ ತಿಳಿಯುತ್ತದೆ.

ಆಗಸ್ಟ ೧೪ ರ ನಂತರ ಮದ್ರಾಸ ಪ್ರಾಂತದಲ್ಲಿ ಗವರ್ನರರ ಸರ್ಜನರಾದ ಮೇಜರ ಡಬ್ಲ್ಯು. ಎಚ್. ಡಿ. ರೀಡರನ್ನು ಬಿಟ್ಟು ಉಳಿದ ಎಲ್ಲ ಐ ಎಂ ಎಸ್ ಅಧಿಕಾರಿಗಳನ್ನು ನೌಕರಿಯಿಂದ ತೆಗೆಯಬೇಕೆಂದು ಮದ್ರಾಸ ಸರಕಾರ ನಿರ್ಧರಿಸಿದೆ.

ದೇವದಾಸೀ ಪದ್ಧತಿಯನ್ನು ನಿರ್ಮೂಲಗೊಳಿಸಲು ಸರಕಾರದವರು ಒಂದು ಮಸೂದೆ ತಯಾರಿಸಿರುವರೆಂದು ಜುಲೈ ೨೪ ರ ಸರಕಾರಿ ಗಝೆಟ್ಟಿನಲ್ಲಿ ಪ್ರಕಟಿಸಲಾಗಿದೆ.

ಆಗಸ್ಟ ೧೫ ಕ್ಕೆ ಸೇರಲಿರುವ ಮದ್ರಾಸ ಶಾಸನ ಸಭೆಯ ಅಧಿವೇಶನವು ಸಪ್ಟಂಬರ ೧೫ ರ ವರೆಗೆ ಮುಂದೆ ಬೀಳುವದೆಂದು ಹೇಳಲಾಗುತ್ತಿದೆ. ವಿಧಿಮಂಡಲದ ಅಧಿವೇಶನವೂ ಮುಂದೆ ಬೀಳಬಹುದು.

ಯುಕ್ತಪ್ರಾಂತ

ಫಿರೋಜಪುರದಲ್ಲಿ ಟೋನ ಜಾತಿಯ ಐವರು ಪಿಸ್ತೂಲುಗಳನ್ನು ಧರಿಸಿ, ತಮ್ಮ ಕಾರಿನಲ್ಲಿ ಹೋದಾಗ ಅದೇ ದಾರಿಯಿಂದ ಹೊರಟ ಬೇರೆ ಜಾತಿಯ ದಾರಿಕಾರರ ಮೇಲೆ ಹಲ್ಲೆಮಾಡಿ ಇಬ್ಬರನ್ನು ಕೊಂದು ಒಬ್ಬನನ್ನು ತೀವ್ರ ಗಾಯಗೊಳಿಸಿದ್ದಾರೆ. ಪೋಲೀಸರು ಶೋಧ ನಡೆಸಿದ್ದಾರೆ.

ಬನಾರಸ ಪಟ್ಟಣದ ಸುತ್ತಲಿನ ಗಂಗಾನದಿಯ ಕೊಳ್ಳದಲ್ಲಿ ಮಹಾಪೂರವು ಏರಿಕೆಯಲ್ಲಿರುವುದು ಜನರನ್ನು ಭೀತಿಗೊಳಿಸಿತೆಂದು ಜುಲೈ ೨೬ ರಲ್ಲಿ ತಿಳಿದು ಬಂದಿತು.

ಈಗ ಮುಖ್ಯ ಪ್ರಧಾನರಾಗಿರುವ ಪಂಡಿತ ಗೋವಿಂದ ವಲ್ಲಭಪಂತರೇ ಸಂಯುಕ್ತಪ್ರಾಂತದ ಗವರ್ನರರಾಗುವರೆಂದು ಲಖನೌದ ನಿಕಟವರ್ತಿಗಳ ಹೇಳಿಕೆಯಿರುವುದು.

ಯುಕ್ತಪ್ರಾಂತದ ಮುಖ್ಯ ಪ್ರಧಾನರಾದ ಶ್ರೀ ಗೋವಿಂದ ವಲ್ಲಭಪಂತರು ಜುಲೈ ೨೬ ರಲ್ಲಿ ಆಗಸ್ಟ ೧೫ ರ ಸ್ವಾತಂತ್ರ್ಯ ದಿನಾಚರಣೆಯನ್ನು ಸರಕಾರ ಹೇಗೆ ಆಚರಿಸುವದೆಂಬುದನ್ನು ಲಖನೌದ ಪತ್ರಿಕಾ ಪ್ರತಿನಿಧಿಗಳ ಸಭೆಯಲ್ಲಿ ಹೇಳಿದರು.

ರಶಿಯದಲ್ಲಿ ಹಿಂದೀರಾಯಭಾರಿಗಳಾಗಿ ನಿಯೋಜಿತರಾದ ಶ್ರೀಮತಿ ವಿಜಯಲಕ್ಷ್ಮಿ ಪಂಡಿತರು ಒಂದು ಪತ್ರಿಕಾಪ್ರತಿನಿಧಿಗಿತ್ತ ಸಂದರ್ಶನದಲ್ಲಿ ತಮ್ಮ ನೇಮಕವು ಕೇವಲ ಒಂದು ವರ್ಷದ ವರೆಗೆ ಇರುವುದಾಗಿ ಹೇಳಿದರು. ರಶಿಯದಿಂದ ಮರಳಿ ಬಂದ ಬಳಿಕ ತಾವು ಅಲಹಾಬಾದದಲ್ಲಿ ವಾಸಿಸಲು ಬಯಸುವದಾಗಿ ಹೇಳಿದರು.



ಹೊಸದಿಲ್ಲಿ

ಘಟನಾಸಮಿತಿಯ ಪ್ರಕಟನಾಶಾಖೆಯ ಅಧಿಕಾರಿಗಳು ಸ್ವತಂತ್ರ ಹಿಂದುಸ್ಥಾನದ ರಾಷ್ಟ್ರಧ್ವಜದ ಅಧಿಕೃತ ನಕ್ಷೆಯನ್ನು ಘಟನಾ ಸಮಿತಿಯವರು ಮಾನ್ಯ ಮಾಡಿದ ವರ್ಣಗಳಲ್ಲಿ ದಪ್ಪ ಬ್ಯಾಂಕ ಕಾಗದಗಳಲ್ಲಿ ದಟ್ಟವಾಗಿ ಮುದ್ರಿಸಿ ಸಿದ್ಧಪಡಿಸಿದ್ದಾರೆ.

ಮಾಸ್ಕೋದಲ್ಲಿಯ ಹಿಂದೀ ರಾಯಭಾರಿ ಕಚೇರಿಗೆ ಅರ್ಥಿಕ ಸಲಹೆಗಾರರನ್ನು ಜೋಡಿಸಲಾಗುವುದೆಂದೂ ಸುಧೀರ ಸೇನರು ಅದಕ್ಕೆ ನೇಮಕ ಹೊಂದುವ ಸಂಭವವಿದೆಯೆಂದೂ ತಿಳಿಯುತ್ತದೆ.

ಹೊಸದಿಲ್ಲಿಯ ಪೋಲೀಸರು ಜುಲೈ ೨೪ ರ ರಾತ್ರಿ ಖಾಕ್ಸರರನ್ನು ಮುತ್ತಿ ೩೦ ಜನರನ್ನು ಸೆರೆಹಿಡಿದದ್ದಲ್ಲದೆ ಫತ್ತೇಪುರ ಮಸೀದೆಯಲ್ಲಿ ನೆರೆದ ಖಾಕ್ಸರರನ್ನು ಚದುರಿಸಲು ಅಶ್ರುವಾಯು ಉಪಯೋಗಿಸಿದರು. ಆಗ ನಡೆದ ಘರ್ಷಣೆಯಲ್ಲಿ ಇಬ್ಬರು ಪೋಲೀಸರು ಮತ್ತು ಮೂವರು ಖಾಕ್ಸರರಿಗೆ ಗಾಯಗಳಾದವು.

ತಿರುವಾಂಕೂರು ಸಂಸ್ಥಾನ ಕಾಂಗ್ರೆಸ್ಸಿನ ಉಪಾಧ್ಯಕ್ಷರಾದ ಶ್ರೀ ಟಿ. ಎಂ. ವರ್ಗೀಸರು ಜುಲೈ ೨೬ರಲ್ಲಿ ಹೊಸದಿಲ್ಲಿಯ ವೈ. ಎಂ. ಸಿ. ಎ. ಯಲ್ಲಿ ಮಾತನಾಡುತ್ತ ಹಿಂದೆ ಎಂದೂ ಇಲ್ಲದ ಒಮ್ಮತವು ಇಂದು ತಿರುವಾಂಕೂರು ಪ್ರಜೆಗಳಲ್ಲಿ ಸಂಸ್ಥಾನವು ಹಿಂದೀ ಒಕ್ಕೂಟಕ್ಕೆ ಸೇರತಕ್ಕದು ಎಂಬ ವಿಷಯದಲ್ಲಿ ಉಂಟಾಗಿದೆಯೆಂದು ಮುಂದಾಗಿ ಹೇಳಿದರು.

ಹಿಂದುಸ್ಥಾನ ಸರಕಾರದವರು ಒಂದು ಪ್ರಕಟನೆ ಹೊರಡಿಸಿ ಸ್ವಾತಂತ್ರ್ಯ ದಿನದ ನಿಮಿತ್ತ ಹೊರಡಿಸುವ ವೃತ್ತಪತ್ರಿಕೆಗಳ ಬಗ್ಗೆ ಕಾಗದ ನಿಯಂತ್ರಣ ಕಾನೂನು ಅನ್ವಯಿಸುವುದಿಲ್ಲವೆಂದು ಸಾರಿದ್ದಾರೆ.

ಹಿಂದುಸ್ಥಾನದಲ್ಲಿ ಹೊಲಿಯುವ ಯಂತ್ರಗಳ ಮತ್ತು ಸೂಜಿಗಳ ಕಾರಖಾನೆಗಳು ಬೇಕೆಂದು ಹೊಲಿಗೆ ಬಟ್ಟೆಗಳ ಬಗ್ಗೆ ನಿಯಮಿತವಾದ ಔದ್ಯೋಗಿಕ ಮಂಡಲದ ಜುಲೈ ೨೭ ರಲ್ಲಿ ಪ್ರಸಿದ್ಧವಾದ ವರದಿಯಲ್ಲಿದೆ. ದೇಶದ ಔದ್ಯೋಗಿಕ ಬೆಳವಣಿಗೆಯ ಬಗ್ಗೆ ಸಲಹೆ ಕೊಡಲು ನಿಯಮಿತವಾದ ೨೯ ಮಂಡಲಗಳಲ್ಲಿ ಮೇಲಿನದು ಒಂದು.

ಗೋವಧಪ್ರತಿಬಂಧದ ಸಂಘದ ಅಧ್ಯಕ್ಷರಾದ ಶೇಟ ರಾಮಕೃಷ್ಣ ದಾಲ್ಮಿಯಾರವರು ಒಂದು ಪ್ರಕಟನೆಯನ್ನು ಹೊರಡಿಸಿ ಹಿಂದುಸ್ಥಾನದಲ್ಲಿ ಸರಕಾರವು ಗೋಹತ್ಯ ಪ್ರತಿಬಂಧವನ್ನು ಕೂಡಲೇ ಕೈಕೊಳ್ಳಬೇಕೆಂದೂ ಆಗಸ್ಟ ೧೦ ರ ದಿನವನ್ನು ಪವಿತ್ರವಾದ ಗೋದಿನವೆಂದು ಆಚರಿಸಬೇಕೆಂದೂ ವಿನಂತಿ ಮಾಡಿಕೊಂಡಿದ್ದಾರೆ.

ಮಧ್ಯಪ್ರಾಂತ ಮತ್ತು ವರ್‍ಹಾಡಗಳಿಂದ ಆರಿಸಿ ಬಂದ ಘಟನಾಸಮಿತಿಯ ಸದಸ್ಯರು ಜುಲೈ ೨೨ ರಲ್ಲಿ ಸಭೆ ಸೇರಿ "ವರ್‍ಹಾಡದ ಮೇಲಿನ ನಿಜಾಮರ ಹಕ್ಕು ಕೂಡಲೆ ಕೊನೆಗಾಣಬೇಕು." ಎಂಬ ಗೊತ್ತುವಳಿಯನ್ನು ಸ್ವೀಕರಿಸಿದರು.

ಮಧ್ಯಪ್ರಾಂತ

ಅ. ಭಾ. ಮಹಿಳಾ ಪರಿಷತ್ತಿನ ಸ್ಥಾಯಿ ಸಮಿತಿಯು ಜುಲೈ ೨೭ ರಲ್ಲಿ ಜಬ್ಬಲಪುರದಲ್ಲಿ ಸಭೆ ಸೇರಿ ಪರಿಷತ್ತಿನ ೨೦ ನೆಯ ಅಧಿವೇಶನಕ್ಕೆ ಮಧ್ಯಪ್ರಾಂತದ ಶಾಸನ ಸಭೆಯ ಹಿಂದಿನ ಉಪಾಧ್ಯಕ್ಷೆಯರಾದ ಶ್ರೀಮತಿ ಅನಸೂಯಾಬಾಯಿ ಕಾಳೆಯವರನ್ನು ಅವಿರೋಧವಾಗಿ ಅಧ್ಯಕ್ಷಿಯರನ್ನಾಗಿ ಆರಿಸಿತು.

ಬಿಹಾರ

ಸಿಡ್ರಾ ವಿದ್ಯುತ್ ಕಾರಖಾನೆಯಲ್ಲಿ ಕೂಲಿಕಾರರ ಸಂಪು ಪ್ರಾರಂಭವಾದುದರಿಂದ ಝರಿಯಾ ಪಟ್ಟಣದಲ್ಲಿ ಹಾಗೂ ಸುತ್ತಲಿನ ಕಲ್ಲಿದ್ದಲಿನ ಖಣಿಗಳಲ್ಲಿ ಗಂಭೀರ ಪರಿಸ್ಥಿತಿಯುಂಟಾಗಿದೆಯೆಂದು ಜುಲೈ ೨೬ರ ರಾತ್ರಿ ಅಲ್ಲಿಂದ ಮರಳಿದ ಓಡಿಸಾದ ಕಂದಾಯ ಮಂತ್ರಿ ಶ್ರೀಕೃಷ್ಣವಲ್ಲಭ ಸಹಾಯರವರು ಪತ್ರಿಕೆಗಳಿಗೆ ತಿಳಿಸಿರುವರು.

ಗಡಿನಾಡು

ನಸಾರಪೂರ ರೇಲ್ವೆ ನಿಲ್ದಾಣದಲ್ಲಿ ಅಮೃತಸರಕ್ಕೆ ಸಾಗಿಸಲ್ಪಡುತ್ತಿದ್ದ ೬ ಕಾಯಿಪಲ್ಲೆಗಳ ಬುಟ್ಟಿಯಲ್ಲಿ ಪೋಲೀಸರು ಕೆಲವು ಬಂದೂಕು, ಪಿಸ್ತೂಲು, ಗುಂಡು ಮತ್ತು ಬ್ಯಾಟರಿಗಳನ್ನು ಕಂಡು ವಶಪಡಿಸಿಕೊಂಡರು.

ಪಂಜಾಬ

ಪಂಜಾಬ ಸರಕಾರದವರು ಹಾಕಿದ ನಿರ್ಬಂಧಗಳನ್ನು ಮುರಿದು ಸುಮಾರು ೧೦ ಸಾವಿರ ಶೀಖರು ನಾನಕಾನ ಸಾಹೀಬದಲ್ಲಿ ಸರ್ವಪಕ್ಷೀಯ ಶೀಖ ಪರಿಷತ್ತನ್ನು ಸರದಾರ ದಿಲಿಪಸಿಂಗರ ಅಧ್ಯಕ್ಷತೆಯಲ್ಲಿ ನೆರವೇರಿಸಿ ಶೀಖರಿಗೆ ನ್ಯಾಯ ಸಮ್ಮತವಾದ ರೀತಿಯಲ್ಲಿ ಸೀಮಾ ಸಮಿತಿಯವರು ನಿರ್ಣಯ ಕೊಡಬೇಕು, ಶೀಖರ ಪವಿತ್ರ ಸ್ಥಳವಾದ ನಾನಕಾನ ಸಾಹೀಬವನ್ನು ಪೂರ್ವ ಪಂಜಾಬದಲ್ಲಿ ಸೇರಿಸಬೇಕು ಎಂಬ ಗೊತ್ತುವಳಿ ಸ್ವೀಕರಿಸಿದರು.

ಯಾವ ಸಂಘ ಸಂಸ್ಥೆಯಾಗಲಿ, ವ್ಯಕ್ತಿಯಾಗಲಿ ಪಂಜಾಬ ಸೀಮಾ ಸಮಿತಿಯವರು ಕೊಡುವ ನಿರ್ಣಯದ ಬಗ್ಗೆ ತಮ್ಮ ಉದ್ದೇಶ ಅಥವಾ ಇಚ್ಛೆಯನ್ನು ವ್ಯಕ್ತಪಡಿಸುವ ಪ್ರಕಟನೆಗಳ ಮೇಲೆ ೨೧ ದಿನಗಳ ವರೆಗೆ ಪೂರ್ವ ಪರಿಶೀಲನ ನಿರ್ಬಂಧ ಹಾಕಿದೆಯೆಂದು ಪಂಜಾಬ ಗವರ್ನರರು ಆಜ್ಞೆ ಹೊರಡಿಸಿದ್ದಾರೆ.

ಅಂಗ್ಲೋ ಇಂಡಿಯನ್ ಮತದಾರ ಸಂಘದಿಂದ ಪಂಜಾಬ ಶಾಸನ ಸಭೆಗೆ ಆರಿಸಲ್ಪಟ್ಟ ಸಿ. ಇ. ಗಿಬ್ಬನ್ನರ ಸದಸ್ಯತ್ವವನ್ನು ಚುನಾವಣೆ ನ್ಯಾಯ ಮಂಡಲದವರು ಅವರ ಪ್ರತಿಸ್ಪರ್ಧಿಯಾದ ಎಸ್. ಆರ್. ಲಾಯಿಸರ ಚುನಾವಣೆಯ ಅರ್ಜಿಯನ್ನು ಮಾನ್ಯ ಮಾಡಿ ರದ್ದುಪಡಿಸಿದ್ದಾರೆ. ಲಾಯಿಸರ ನಾಮಪತ್ರವನ್ನು ರದ್ದು ಮಾಡಿದ್ದು ನ್ಯಾಯವಲ್ಲೆಂದು ಅವರು ಉಲ್ಲೇಖಿಸಿದ್ದಾರೆ.

ಜುಲೈ ೨೮ ರ ಮಧ್ಯಾಹ್ನ ಅಮೃತಸರದ ಸೆಶನ್ಸ ಕೋರ್ಟಿನ ಅಂಗಳದಲ್ಲಿ ಬಾಂಬು ಸಿಡಿದು ೪೮ ಜನರು ಗಾಯಗೊಂಡರು.

ಅಮೃತಸರದಿಂದ ೧೫ ಮೈಲು ದೂರದಲ್ಲಿರುವ ತಾರಣವೆಂಬ ಪಟ್ಟಣದಲ್ಲಿ ಜುಲೈ ೨ ರಿಂದ ಮಧ್ಯರಾತ್ರಿಯಲ್ಲಿ ಶೋಧ ನಡೆದಾಗ ಒಂದು ಸಣ್ಣ ಬಾಂಬಿನ ಕಾರಖಾನೆ ಕಾಣಿಸಿತು. ಅಮೃತಸರದ ಜಿಲ್ಲಾ ಮ್ಯಾಜಿಸ್ಟ್ರೇಟರೂ ಪೋಲೀಸ ಸುಪರಿಂಟೆಂಡೆಂಟರೂ ಡೆಪ್ಯುಟಿ ಪೋಲೀಸ ಕಮಿಶನ್ನರೂ ಆ ಕಾರಖಾನೆಯನ್ನು ಮುತ್ತಿ ವಶಪಡಿಸಿಕೊಂಡರು.

ಪೂರ್ವ ಹಾಗೂ ಪಶ್ಚಿಮ ಪಂಜಾಬ ಸರಕಾರಗಳು ಆಗಸ್ಟ ೫ ರಿಂದ ಪ್ರತ್ಯೇಕವಾಗಿ ಕಾರ್ಯನಿರ್ವಾಹ ಪ್ರಾರಂಭಿಸುವವೆಂದು ತಿಳಿದು ಬರುತ್ತದೆ. ಗಡಿ ಸಮಿತಿಯ ನಿರ್ಣಯವು ಹೊರಬೀಳುವ ವರೆಗೆ ಎರಡೂ ಸರಕಾರಗಳ ಕಚೇರಿಗಳು ಲಾಹೋರದಲ್ಲಿಯ ಸದ್ಯದ ಸರಕಾರಿ ಕಚೇರಿಯಲ್ಲೇ ನಡೆಯುವವು.

ವಿವಾದಾಸ್ಪದವಾದ ಲಾಹೋರ, ಅಮೃತಸರ, ಗುರುದಾಸಪುರ ಈ ಮೂರು ಜಿಲ್ಲೆಗಳಲ್ಲಿ ಶಾಂತತೆ ಕಾಯಲು ಉಗ್ರರಕ್ಷಣೋಪಾಯಗಳನ್ನು ಯೋಚಿಸಲಾಗಿದೆಯೆಂದು ತಿಳಿದುಬರುತ್ತದೆ.

ಹಿಂದುಸ್ಥಾನ ಕಮ್ಯುನಿಸ್ಟ್ ಪಕ್ಷಕ್ಕೆ ಪಾಕಿಸ್ತಾನ ಕಮ್ಯುನಿಸ್ಟ್ ಪಕ್ಷದ ಸಂಬಂಧವೇನೂ ಇಲ್ಲವೆಂದು ಅ. ಭಾ. ಕ. ಪಕ್ಷದ ಕಾರ್ಯದರ್ಶಿಗಳು ಪ್ರಕಟಿಸಿದ್ದಾರೆ.

ಸಿಂಧ

ಸಿಂಧದ ಅಲ್ಪಸಂಖ್ಯಾಕರ ಸಂಘವು ಪಾಕಿಸ್ತಾನದ ನಿಯೋಜಿತ ಗವರ್ನರ ಜನರಲರಾದ ಬ್ಯಾ. ಜಿನ್ನಾರವರಿಗೆ ಅಲ್ಪ ಸಂಖ್ಯಾಕರ ಬೇಡಿಕೆಗಳನ್ನೊಳಗೊಂಡ ಒಂದು ಮನವಿಯನ್ನು ಒಪ್ಪಿಸಬೇಕೆಂದು ನಿರ್ಧರಿಸಿದೆ.

ಬಸ್ರಾದಲ್ಲಿ ಸಂಭವಿಸಿದ ವಿಮಾನಾಪಘಾತದಲ್ಲಿ ಗಾಯಗೊಂಡ ಶ್ರೀ ಜಗಜೀವನರಾಮರು ಜುಲೈ ೨೮ ರಲ್ಲಿ ಕರಾಚಿಗೆ ಬಂದರು ಮತ್ತು ತಮಗೆ ಗುಣವಾಗಿದೆಯೆಂದು ಹೇಳಿದರು.

ಸಂಯುಕ್ತರಾಷ್ಟ್ರಗಳಿಗೆ ಹಿಂದುಸ್ಥಾನ ಸರಕಾರದ ವಿಶೇಷ ಪ್ರತಿನಿಧಿಯಾದ ಡಾ. ಪಿ. ಪಿ ಪಿಳ್ಳೈಯವರು ಹಿಂದುಸ್ಥಾನದ ಹೊಸ ರಾಷ್ಟ್ರಧ್ವಜವನ್ನು ತೆಗೆದುಕೊಂಡು ಹೋಗಿದ್ದಾರೆ. ಈ ಎರಡೂ ದೇಶಗಳಲ್ಲಿ ಹಿಂದುಸ್ಥಾನ ಸರಕಾರದ ಪರವಾಗಿ ಹೊಸ ರಾಷ್ಟ್ರಧ್ವಜಗಳು ಹಾರಾಡುವುವೆಂದು ಡಾ. ಪಿಳ್ಳೈಯವರು ಹರ್ಷೋದ್ಗಾರ ತೆಗೆದರು.

ಬಂಗಾಲ

ಪೂರ್ವ ಬಂಗಾಲದ ಸರಕಾರದ ಕಚೇರಿಗಳ ಸಲುವಾಗಿ ಡಾಕಾ ನಗರದ ಶಾಲೆಗಳ ಕಟ್ಟಡಗಳನ್ನು ಬಳಸಲಾಗುವುದರಿಂದ ಅಲ್ಲಿಯ ಶಾಲೆಗಳು ೨ ತಿಂಗಳು ಮುಚ್ಚಲ್ಪಡುವುವು.

ಪೂರ್ವ ಬಂಗಾಲದ ಹಿಂದುಗಳ ಸಮಸ್ಯೆಗಳ ಪರಿಹಾರಕ್ಕೆ ಸ್ಥಾನಾಂತರವೊಂದು ಔಷಧಿಯಲ್ಲ. ಅವರು ಅಲ್ಲಿಯೇ ಇರಲು ನಿಶ್ಚಯಿಸಿ ಪರಿಸ್ಥಿತಿಯ ಸದುಪಯೋಗ ಮಾಡಿಕೊಳ್ಳಬೇಕೆಂದು ಬಂಗಾಲ ವಿಭಜನಾ ಸಮಿತಿಯ ಸದಸ್ಯರಾದ ಶ್ರೀ ಎನ್. ಆರ್. ಸರಕಾರರು ಒಂದು ಪ್ರಕಟನೆ ಹೊರಡಿಸಿ ಹೇಳಿದರು.

ಶ್ರೀ ಶರಚ್ಚಂದ್ರ ಬೋಸರು ಬಂಗಾಲ ಪ್ರಾಂತಿಕ ಕಾಂಗ್ರೆಸ ಸಮಿತಿಯ ಹಾಗೂ ಅದರ ಕಾರ್ಯಕಾರಿ ಮಂಡಲದ ಸದಸ್ಯತ್ವಕ್ಕೆ ಕೊಟ್ಟ ರಾಜೀನಾಮೆಯನ್ನು ಜುಲೈ ೨೫ ರಲ್ಲಿ ಮೈಮನಸಿಂಗದಲ್ಲಿ ಸಭೆ ಸೇರಿದ ಉಕ್ತ ಕಾಂಗ್ರೆಸ ಸಮಿತಿಯು ಸ್ವೀಕರಿಸಿತು.

"ಪೂರ್ವ ಪಾಕಿಸ್ತಾನದ ರಾಜಧಾನಿಯು ಡಾಕಾ ನಗರಕ್ಕೆ ಇಷ್ಟರಲ್ಲಿಯೆ ವರ್ಗಾಯಿಸಲ್ಪಡುವುದರಿಂದ ಬಂಗಾಲ ಸೆಕ್ರೆಟರಿಯೆಟ್ಟಿನ ಶಾಖೆಗಳಲ್ಲಿ ಬದಲಾವಣೆಗಳಾಗುವುವೆಂದು ತಿಳಿಯುತ್ತದೆ. ಸೆಕ್ರೆಟರಿಯೆಟ್ಟಿನಲ್ಲಿಯ ಹಾಗೂ ಕಲಕತ್ತೆಯ ಪೋಲೀಸ ಶಾಖೆಯಲ್ಲಿಯ ಮುಖ್ಯ ಮುಖ್ಯ ಸ್ಥಳಗಳಿಗೆ ಹೊಸ ಅಧಿಕಾರಿಗಳನ್ನು ನಿಯಮಿಸಲಾಗುವುದು.

ಪೂರ್ಣ ಸ್ವಾತಂತ್ರ್ಯದ ಬದಲು ನಮಗೆ ಸಾಮಂತ ರಾಜ್ಯ ದೊರೆಯಿತು. ಸಂಪೂರ್ಣ ಸ್ವಾತಂತ್ರ್ಯದಬಗ್ಗೆ ನಾವುಹೋರಾಟಮಾಡದಿದ್ದರೆ ನಾವು ಕಡೆತನಕ ಈ ಸ್ಥಿತಿಯಲ್ಲೇ ಇರಬೇಕಾದೀತು" ಎಂದು ಬಂಗಾಲ ನಾಗರಿಕ ಸ್ವಾತಂತ್ರ್ಯ ಸಮಿತಿಯ ಆಶ್ರಯದಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ಶ್ರೀ ಶರಚ್ಚಂದ್ರ ಬೋಸರು ಹೇಳಿದರು.

ನೇತಾಜಿ ಸುಭಾಷಚಂದ್ರ ಬೋಸರ ಮೇಲಿನ ಎಲ್ಲ ಖಟ್ಲೆಗಳನ್ನು ಬಂಗಾಲ ಸರಕಾರವು ಹಿಂತೆಗೆದುಕೊಂಡಿರುವುದೆಂದೂ ಅವರು ಸತ್ತಿರುವರೆಂದು ನಂಬಿರುವುದರಿಂದ ಖಟ್ಲೆಗಳನ್ನು ಮುಂದೆ ಸಾಗಿಸುವ ಅವಶ್ಯವಿಲ್ಲೆಂದೂ ಸರಕಾರದ ಅಪ್ಪಣೆಯಲ್ಲಿ ಉಲ್ಲೇಖಿಸಲಾಗಿದೆ.

ನೌಖಾಲಿ ದುರಂತದ ಮೂಲ ಪುರುಷ ಮೌಲವಿ ಗುಲಾಮ ಸಾರವಾರನನ್ನು ನೌಖಾಲಿಯ ಸೆಶನ್ಸ ಜಜ್ಜರು ೧೦ ಸಾವಿರ ರೂಪಾಯಿಗಳ ಜಾಮೀನಿನ ಮೇಲೆ ಬಿಟ್ಟಿದ್ದಾರೆ.

ಹಿಂದುಸ್ಥಾನ ಸರಕಾರದ ಪಾಲಿಗೆ ಬಂದ ಸೈನ್ಯಪಡೆಗಳಲ್ಲಿ ಕೆಲವು ಪಡೆಗಳು ಈಗಾಗಲೇ ಕಲಕತ್ತೆಗೆ ಕಳುಹಿಸಲ್ಪಟ್ಟಿವೆ. ಈಗ ಅಲ್ಲಿರುವ ಸೈನ್ಯದ ಜೊತೆಗೆ ಈ ಪಡೆಗಳೂ ಶಾಂತಿರಕ್ಷಣೆಗಾಗಿ ಉಳಿಯುವುವು.

ಬಂಗಾಲ ಗವರ್ನರರಾದ ಸರ್ ಫ್ರೆಡರಿಕ್ ಬರೋರು. ಆಗಸ್ಟ ೧೫ ಕ್ಕೆ ನಿವೃತ್ತರಾಗಲಿರುವರೆಂದು ತಿಳಿಯುತ್ತದೆ. ಅನಂತರ ಸರ್ ಫ್ರೆಡರಿಕರು ಇಂಗ್ಲಂಡಿಗೆ ತೆರಳುವರು.

ಆಗಸ್ಟ ೧೫ ರೊಳಗೆ ಉತ್ತರ ಮತ್ತು ಪೂರ್ವ ಬಂಗಾಲಕ್ಕೆ ಭೆಟ್ಟಿಕೊಟ್ಟು, ಪೂರ್ವ ಪಾಕಿಸ್ತಾನ ಭಾಗದಲ್ಲಿಯ ಹಿಂದುಗಳಿಗೆ ಸಂರಕ್ಷಣೆಯ ಆಶ್ವಾಸನ ಕೇಳಲು ಬ್ಯಾ. ಜಿನ್ನಾರ ಕಡೆಗೆ ಒಂದು ಶಿಷ್ಟಮಂಡಲವನ್ನು ಕಳಿಸಬೇಕೆಂದು ಕಲಕತ್ತೆಯಲ್ಲಿ ಜುಲೈ ೨೭ ರಲ್ಲಿ ಸರ್ ಯದುನಾಥ ಸರಕಾರರ ಅಧ್ಯಕ್ಷತೆಯಲ್ಲಿ ಸೇರಿದ ಸಾರ್ವಜನಿಕ ಸಭೆಯಲ್ಲಿ ನಿರ್ಣಯವಾಯಿತು.

ಸಿಂಧದ ಮುಖ್ಯಮಂತ್ರಿಗಳಾದ ಶೇಖ ಗುಲಾಮ ಹುಸೇನ ಹಿದಾಯತ ಉಲ್ಲಾರವರನ್ನು ಸಿಂಧದ ಗವರ್ನರರನ್ನಾಗಿ ನಿಯಮಿಸುವದು ನಿಶ್ಚಿತವಾದ ಬಗ್ಗೆ ಅವರನ್ನಭಿನಂದಿಸಲು ಸತ್ಕಾರಕೂಟವೊಂದನ್ನು ಏರ್ಪಡಿಸಿದಾಗ ಪಾಕಿಸ್ತಾನ ದಿನೋತ್ಸವದಲ್ಲಿ ಎಲ್ಲ ಪಕ್ಷದವರೂ ಭಾಗವಹಿಸುವದಾಗಿ ಮಂತ್ರಿಗಳಿಗೆ ಆಶ್ವಾಸನವಿತ್ತರು.

ಅನೇಕ ಪೆಟ್ರೋಲು ಕಾರಖಾನೆಯ ಕೆಲಸಗಾರರ ಸಂಪಿನ ಮೂಲಕ ಉತ್ತರ ಹಿಂದುಸ್ಥಾನಕ್ಕೆ ಕರಾಚಿಯಿಂದ ಹೋಗುವ ಪೆಟ್ರೋಲ, ಸೀಮೆಯ ಎಣ್ಣೆ ಮತ್ತು ಯಂತ್ರದ ಎಣ್ಣೆಯ ಪೂರೈಕೆಯನ್ನು ತಾತ್ಕಾಲಿಕವಾಗಿ ತಡೆಹಿಡಿಯಲಾಗಿದೆ.

ಸುಮಾರು ೫ ಕೋಟಿ ರೂಪಾಯಿಗಳ ವರೆಗೆ ಬಂಡವಾಲ ಹಾಕಿ ದೊಡ್ಡ ದೊಡ್ಡ ಉದ್ಯೋಗಗಳನ್ನು ಕರಾಚಿಯಲ್ಲಿ ತೆರೆಯುವ ಯೋಜನೆಯನ್ನು ಮಾಡಲಾಗಿದೆ. ಈ ಸಂಬಂಧದಲ್ಲಿ ಮುಂಬಯಿಯ ೮ ಉದ್ಯೋಗಸ್ಥರು ಇಂಗ್ಲಂಡ ಅಮೇರಿಕೆಗಳಲ್ಲಿ ೩ ತಿಂಗಳ ಪ್ರವಾಸ ಮಾಡಿ ಬಂದಿದ್ದಾರೆ.

ನಾಲ್ಕು ಮಾತು — ರಂಗನಾಥ ದಿವಾಕರ

ಕಾಂಗ್ರೆಸ್ಸಿನ ಭವಿತವ್ಯ

ಪೂರ್ಣ ಸ್ವರಾಜ್ಯಕ್ಕಾಗಿ ಶಾಂತ ಹಾಗೂ ಉಚಿತ ಮಾರ್ಗಗಳಿಂದ ಹೋರಾಡುತ್ತ ಬಂದ ಕಾಂಗ್ರೆಸ್ಸು ಈಗ ತನ್ನ ಉದ್ದೇಶವನ್ನು ಸಾಧಿಸಿದೆ ಎಂದು ಹೇಳಲು ಅಡ್ಡಿ ಇಲ್ಲ. ಇನ್ನೂ ಸಾಮಂತ ಸ್ವರಾಜ್ಯವಷ್ಟೇ ಪ್ರಾಪ್ತವಾಗಿದೆ. ಪೂರ್ಣ ಸ್ವರಾಜ್ಯ ಎಲ್ಲಿದೆ ಎಂದು ಹಲವರು ಕೇಳಬಹುದು. ಆದರೆ ಇಂಡಿಯಾ 'ಇಂಡಿಪೆಂಡೆನ್ಸ ಆ್ಯಕ್ಟ' ಎಂಬ ಮೊನ್ನೆ ಪಾರ್ಲಿಮೆಂಟಿನಲ್ಲಿ ಪಾಸಾದ ಕಾನೂನನ್ನು ಓದಿದರೆ ಅದರಲ್ಲಿ ಹಿಂದುಸ್ತಾನಕ್ಕೆ ನಿಜವಾದ ಸ್ವಾತಂತ್ರ್ಯವು ದೊರೆತಿದೆಯೊ ಇಲ್ಲವೊ ಎಂಬುದು ಗೊತ್ತಾಗುವದು, 'ಇನ್ನು ಮುಂದೆ ಪಾರ್ಲಿಮೆಂಟಿನಲ್ಲಿ ಪಾಸಾದ ಯಾವದೇ ಕಾನೂನು ಹಿಂದುಸ್ತಾನಕ್ಕೆ ಅನ್ವಯಿಸುವದಿಲ್ಲ. ಇಷ್ಟವಿದ್ದರೆ ಹಿಂದುಸ್ತಾನದ ಶಾಸನ ಮಂಡಲದವರು ಆಯಾ ಕಾನೂನು ತಮಗೆ ಅನ್ವಯಿಸಬೇಕು, ಎಂದು ಕಟ್ಟಳೆ ಮಾಡಿಕೊಂಡರೆ ಮಾತ್ರ ಅದು ಹಿಂದುಸ್ತಾನಕ್ಕೆ ಅನ್ವಯಿಸುವದು' ಎಂಬ ಸ್ಪಷ್ಟವಾದ ಕಲಮು ಹೊಸ ಆ್ಯಕ್ಟಿನಲ್ಲಿದೆ. ಸಾಮಂತ ಸ್ವರಾಜ್ಯದಲ್ಲಿರಬೇಕೊ ಇರಬಾರದೊ ಎಂಬುದು ಸಹ ಕೇವಲ ನಮ್ಮ ಇಚ್ಛೆಯನ್ನೇ ಅವಲಂಬಿಸಿದೆ. ಆದುದರಿಂದ ಇನ್ನು ಕೇವಲ ಶಬ್ದಚ್ಛಲ ಮಾಡುತ್ತ ಕೂಡುವದರಲ್ಲಿ ಅರ್ಥವಿಲ್ಲ. ವಾಸ್ತವವಾದಿಗಳಾಗುವದು ಅವಶ್ಯ. ಆದುದರಿಂದ ಇನ್ನು ಕಾಂಗ್ರೆಸ್ಸಿನ ಭವಿತವ್ಯವೇನು ?

× × ×

ಇನ್ನೊಂದು ಮಹತ್ವದ ಮಾತಿನಲ್ಲಿ ಕಾಂಗ್ರೆಸ್ಸಿಗೆ ಅಸಮಾಧಾನವಿದೆ ಎಂಬುದು ಎಲ್ಲರಿಗೂ ಗೊತ್ತಿದ್ದ ವಿಷಯ. ಪೂರ್ಣ ಸ್ವರಾಜ್ಯದ ಧ್ಯೇಯವನ್ನಿಟ್ಟುಕೊಂಡು ಹೊರಟಾಗ ಇಡೀ ಹಿಂದುಸ್ತಾನವು ಅಖಂಡವಾಗಿಯೆ ಉಳಿಯಬೇಕೆಂಬ ಭಾವನೆ ಹಾಗೂ ಉದ್ದೇಶವು ಇತ್ತು ಎಂಬುದು ಸ್ಪಷ್ಟವು. ಆದರೆ ಆ ಸಂದರ್ಭದಲ್ಲಿ ಸದ್ಯಕ್ಕಂತೂ ಕಾಂಗ್ರೆಸ್ಸಿಗೆ ಸಮಾಧಾನವಿಲ್ಲ. ಆದರೆ ವಿಭಕ್ತವಾಗಿರುವ ಎರಡೂ ಭಾಗಗಳೂ ಸ್ವತಂತ್ರವಾಗಿರುವವು. ಅವುಗಳಲ್ಲಿ ಯಾವುದೂ ದಾಸ್ಯದಲ್ಲಿಲ್ಲ ಎಂಬುದು ಲಕ್ಷ್ಯದಲ್ಲಿಡತಕ್ಕ ಮಾತಾಗಿದೆ. ಏನೇ ಇರಲಿ. ಸಂಪೂರ್ಣ ಅಖಂಡ ಹಿಂದುಸ್ತಾನಕ್ಕೆ ಪೂರ್ಣ ಸ್ವಾತಂತ್ರ್ಯವು ದೊರೆತಿದ್ದರೆ ಯಾವ ಆನಂದವು ನಮ್ಮಲ್ಲಿ ತುಂಬಿ ತುಳುಕುತ್ತಿತ್ತೊ ಅದು ಈಗ ಸಾಧ್ಯವಿಲ್ಲ ಎಂಬುದು ಸ್ಪಷ್ಟವು.

× × ×

ಈ ಸಂದರ್ಭದಲ್ಲಿ ಕಾಂಗ್ರೆಸ್ಸಿನ ಧ್ಯೇಯಾದಿಗಳಲ್ಲಿ ಬದಲಾವಣೆಯಂತೂ ಆಗಲಿಕ್ಕೇ ಬೇಕು. ಆದರೆ ಆ ವಿಷಯದತ್ತ ಹೊರಳುವದಕ್ಕಿಂತ ಮೊದಲು ಕಾಂಗ್ರೆಸ್ಸು ಇನ್ನು ಉಳಿಯಬಾರದೆಂದು ಹೇಳುವವರೂ ಇದ್ದಾರೆ ! ಆ ಮಾತನ್ನು ವಿಚಾರಿಸುವದು ಅವಶ್ಯ. ಹೀಗೆ ಅವರು ಅನ್ನಲು ಕಾರಣವೇನು ? ಬೇರೆ ಬೇರೆ ಜನರು ಬೇರೆ ಬೇರೆ ಕಾರಣಗಳಿಗಾಗಿ ಹೀಗೆ ಅನ್ನುತಿರುವರೆಂಬುದು ಸ್ಪಷ್ಟವು. ರಾಜಕೀಯ ಸ್ವರಾಜ್ಯವೆ ಕಾಂಗ್ರೆಸ್ಸಿನ ಇಷ್ಟಸಾಧ್ಯವಿತ್ತು, ಅದು ಪೂರೈಸಿತೆಂದ ಬಳಿಕ ಇನ್ನು ಅದರ ಅವತಾರ ಕಾರ್ಯ ಮುಗಿಯಿತು. ಇನ್ನು ಅದು ವಿಸರ್ಜನೆ ಹೊಂದುವದೆ ಯೋಗ್ಯ ಎಂದು ಹಲವರು ಹೇಳುವರು. ಆದರೆ ನಿಜವಾಗಿ ನೋಡಿದರೆ ಕೇವಲ ರಾಜಕೀಯ ಸ್ವರಾಜ್ಯವಷ್ಟೆ ಕಾಂಗ್ರೆಸ್ಸಿನ ಧ್ಯೇಯವಿರಲಿಲ್ಲ. ವಿಶೇಷತಃ ಕಾಂಗ್ರೆಸ್ಸಿನಲ್ಲಿ ಗಾಂಧೀಯುಗವು ಪ್ರಾರಂಭವಾದಂದಿನಿಂದ ಅಂದರೆ ೧೯೨೦ ರಿಂದ ಕಾಂಗ್ರೆಸ್ಸು ಒಂದು ವಿಶಿಷ್ಟವಾದ ಆರ್ಥಿಕ ಸಾಮಾಜಿಕ ಕ್ರಾಂತಿಯ ಸಲುವಾಗಿ ಪ್ರಯತ್ನಿಸುತಿದೆ. ಆ ಪ್ರಯತ್ನವನ್ನು ಇನ್ನು ಹೆಚ್ಚು ಆಸ್ಥೆಯಿಂದ ಕೈಕೊಳ್ಳುವದು ಕಾಂಗ್ರೆಸ್ಸಿನ ಕರ್ತವ್ಯವಾಗುವದು. ಕಾಂಗ್ರೆಸ್ಸು ಹಲವರ ಅಂಕಿತಕ್ಕೆ ಒಳಗಾಗಿ ನಡೆಯುವದು ಕೆಲವರ ಮನಸ್ಸಿಗೆ ಬರುವದಿಲ್ಲ, ಬಂದಿಲ್ಲ. ಆದುದರಿಂದ ಅವರು ಅದರ ಮುಕ್ತಾಯವಾಗಬೇಕೆಂದು ಪ್ರತಿಪಾದಿಸುವರು. ಯಾವದೇ ದೊಡ್ಡ ಸಂಸ್ಥೆಯ ಮುಕ್ತಾಯ ಮಾಡಲು ಇದು ಸಾಕಷ್ಟು ಕಾರಣವಾಗಲಾರದು. ಕಾಂಗ್ರೆಸ್ಸಿನಲ್ಲಿ ಅನೇಕ ದೋಷಗಳು, ವಿಶೇಷತಃ ಅಧಿಕಾರದ ಬಗ್ಗೆ ಮೇಲಾಟ ಹೆಚ್ಚಾಗಿರುವದರಿಂದ ಅದನ್ನು ವಿಸರ್ಜಿಸಿ ಬಿಡಬೇಕೆಂದು ಹೇಳುವವರು ಹಲವರು. ಆದರೆ ಈ ಮಾತಾದರೂ ಸಮಂಜಸವಾಗಲಾರದು. ಆಯಾ ದೋಷಗಳನ್ನು ಹೋಗಲಾಡಿಸಲು ಯತ್ನಿಸುವದು ನಮ್ಮ ಕರ್ತವ್ಯವೇವಿನಾ ಆ ಸಂಸ್ಥೆಯನ್ನೆ ನಿರ್ನಾಮಗೊಳಿಸುವದು ನಮ್ಮ ಕರ್ತವ್ಯವೆನಿಸಲಾಗದು. ಒಟ್ಟಿಗೆ ನೋಡಲಾಗಿ ಕಾಂಗ್ರೆಸ್ಸಿನ ಮುಕ್ತಾಯ ಮಾಡುವದು ಇಷ್ಟವಾಗಲಾರದು. ಈಗ ೬೨ ವರುಷ ಕೆಲಸ ಮಾಡುತ್ತ ಬಂದ ಸಂಸ್ಥೆಯನ್ನು ಮಾರ್ಪಡಿಸಿ ಮತ್ತೆ ಹೊಸ ಹೊಸ ಕೆಲಸಗಳಿಗಾಗಿ ಉಪಯೋಗಿಸುವದೇ ಜಾಣತನವು.

× × ×

ಮುಖ್ಯ ಮಾರ್ಪಾಡು ಅದರ ಉದ್ದೇಶದಲ್ಲಿಯೆ ಆಗಬೇಕು. ನಿಜವಾದ ಜನತಾ ರಾಜ್ಯದಸ್ಥಾಪನೆ, ಕೂಲಿಕಾರರು, ಒಕ್ಕಲಿಗರು, ಬುದ್ಧಿಯಿಂದ ದುಡಿಯುವವರು ಒಟ್ಟಿಗೆ ದುಡಿಮೆಗಾರರು ಯಾವ ಸಮಾಜದಲ್ಲಿ ಪ್ರತ್ಯಕ್ಷ ಅಧಿಕಾರಾರೂಢರಿರುವರೊ ಅಂಥ ಸಮಾಜವನ್ನು ಸ್ಥಾಪಿಸುವದೆ ಕಾಂಗ್ರೆಸ್ಸಿನ ಧ್ಯೇಯವಾಗುವದು ಉಚಿತವು. ಈಗ ರಾಜಕೀಯ ಅಧಿಕಾರಗಳು ಜನರ ಕೈಯಲ್ಲಿ ಬಂದಿದ್ದರೂ ಅನೇಕ ಸಾಮಾಜಿಕ ಆರ್ಥಿಕ ಅಸಮಾನತೆ ಅಥವಾ ವಿಷಮತೆಗಳ ಮೂಲಕ ಇನ್ನು ಜನಸಾಮಾನ್ಯರ ಪೂರ್ಣ ಕಲ್ಯಾಣವಾಗುವಂತೆ ಸದ್ಯಕ್ಕೆ ವಿಶೇಷವೇನೂ ಮಾಡಲಿಕ್ಕೆ ಬರುವಂತಿಲ್ಲ. ಈ ಪರಿಸ್ಥಿತಿಯನ್ನು ಸುಧಾರಿಸಿ ಒಂದು ಬಗೆಯ ಸಾಮಾಜಿಕ ಹಾಗೂ ಆರ್ಥಿಕ ಕ್ರಾಂತಿಯನ್ನು ಜರುಗಿಸುವದೆ ಕಾಂಗ್ರೆಸ್ಸಿನ ಧ್ಯೇಯವಾಗಬೇಕು. ಅದರ ಹೊರತು ಇನ್ನು ಕಾಂಗ್ರೆಸ್ಸಿಗೆ ಎರಡನೆ ಕೆಲಸವು ಉಳಿದಿಲ್ಲ.

× × ×

ಕಾಂಗ್ರೆಸ್ಸಿನ ಧ್ಯೇಯವು ಬದಲಾದಂತೆ ಅದರ ಘಟನೆಯು ಬದಲಾಗುವದು ಅವಶ್ಯವಾದೀತು. ಯಾಕೆಂದರೆ ಇನ್ನು ಅದೊಂದೇ ಒಂದು ಪಕ್ಷದ ಸಂಘಟನವಾಗಬಲ್ಲದು. ಸದ್ಯಕ್ಕೆ ಬ್ರಿಟಿಶರ ವಿರುದ್ಧರಿರುವವರೆಲ್ಲರೂ ಅದರಲ್ಲಿ ಒಟ್ಟುಗೂಡಿದ್ದರು. ಇನ್ನು ಆರ್ಥಿಕ ಸಾಮಾಜಿಕ ಕ್ಷೇತ್ರಗಳಲ್ಲಿ ಒಂದೇ ವಿಚಾರದವರಿದ್ದವರು ಮಾತ್ರ ಈ ಸಂಸ್ಥೆಯಲ್ಲಿ ಇರುವದು ಸಾಧ್ಯವಾಗಬಹುದು. ಉಳಿದವರು ತಮ್ಮ ತಮ್ಮ ಗುಂಪುಗಳನ್ನಾಗಲಿ ಪಕ್ಷಗಳನ್ನಾಗಲಿ ಪ್ರತ್ಯೇಕವಾಗಿ ಕಟ್ಟಿಕೊಳ್ಳಬೇಕಾದೀತು. ಇತರ ದೇಶದ ಪಾರ್ಲಿಮೆಂಟುಗಳಲ್ಲಿ ಯಾವ ರೀತಿ ಪಕ್ಷೋಪಪಕ್ಷಗಳಿರುವವೊ ಅದೇ ರೀತಿ ಇಲ್ಲಿಯೂ ಪಕ್ಷೋಪಪಕ್ಷಗಳುಂಟಾಗುವದು ಅನಿವಾರ್ಯವೆ ಇರುವದು. ಆ ಬಗೆಯ ಪಕ್ಷವೊಂದನ್ನು ನಿರ್ಮಾಣ ಮಾಡಬೇಕಾಗಿದ್ದರೆ ಕಾಂಗ್ರೆಸ್ಸಿನ ಘಟನೆ ಏನಿರಬೇಕು, ಎಂಬ ವಿಚಾರದಿಂದ ನಾವು ಮುಂದೆ ಹೆಜ್ಜೆ ಇಡಬೇಕಾಗುವದು. ಇಂಗ್ಲಂಡದಲ್ಲಿ ಕಾನ್‌ಸರವ್ಹೇಟಿವ್ಹ ಪಾರ್ಟಿ, ಲೇಬರ ಪಾರ್ಟಿ, ಮುಂತಾದವುಗಳಿವೆ. ಅಮೇರಿಕೆಯಲ್ಲಿ ರಿಪಬ್ಲಿಕನ್ ಪಾರ್ಟಿ, ಡೆಮಾಕ್ರೆಟಿಕ್ ಪಾರ್ಟಿ ಎಂಬವು ಇವೆ. ಅದೇ ರೀತಿ ಹಿಂದುಸ್ತಾನದ ಪಾರ್ಲಿಮೆಂಟಿನಲ್ಲಿ ಸಹ ಬೇರೆ ಬೇರೆ ಪಕ್ಷಗಳಾಗುವವು. ಕಾಂಗ್ರೆಸ್ಸು ಅಂಥ ಪಕ್ಷಗಳಲ್ಲಿ ಒಂದು ಆಗಿ ತೀರಬೇಕಾಗುವದು. ಅದೇ ಎಲ್ಲಕ್ಕೂ ದೊಡ್ಡ ಪಕ್ಷವಾಗುವದು. ಇದೇ ಲೋಕಪ್ರಿಯತೆಯು ಕೊನೆಯ ವರೆಗೆ ಉಳಿಯಬೇಕಾದರೆ ಕಾಂಗ್ರೆಸ್ಸು ಸತತವಾಗಿ ಜನತೆಯ ಉತ್ತಮೋತ್ತಮ ಸೇವೆಯನ್ನು ಮಾಡಬೇಕಾದೀತು ಹಾಗೂ ಎಲ್ಲರಿಗೂ ಸಮಾಧಾನವಾಗುವಂತೆ ಕಾರ್ಯಕ್ರಮವನ್ನಿಟ್ಟುಕೊಂಡು ದುಡಿಯಬೇಕಾದೀತು. ಕಾಂಗ್ರೆಸ್ಸಿನ ಈ ಸಮಸ್ಯೆ ಈಗ ಬಂದು ನಿಂತಿದೆ ಎದುರು.

ಸಂಸ್ಥಾನಗಳ ಸಮಸ್ಯೆ

ಸಂಸ್ಥಾನಗಳ ಸಮಸ್ಯೆಯನ್ನು ಇಷ್ಟು ತೊಡಕಿನದಾಗಿ ಮಾಡಿದುದಕ್ಕೆ ಹೊಣೆಗಾರಾರು, ಎಂಬುದು ದೊಡ್ಡ ಪ್ರಶ್ನೆ. ಬ್ರಿಟಿಶ ಸರಕಾರವು ಇಲ್ಲಿಂದ ಹಿಂಸೆಯಿಂದ ತಳ್ಳಲ್ಪಟ್ಟಿದ್ದರೆ ಅಥವಾ ಇಲ್ಲಿ ರಕ್ತ ಕ್ರಾಂತಿಯಾಗಿ ಅವರು ಹೋಗುವ ಪ್ರಸಂಗ ಬಂದಿದ್ದರೆ ಮಾತು ಬೇರೆ. ಅಂಥ ಸಂದರ್ಭದಲ್ಲಿ ಅವರು ಸಂಸ್ಥಾನಿಕರಿಗೆ, 'ನಿಮ್ಮ ಭವಿಷ್ಯ ನೀವು ಕಂಡುಕೊಳ್ಳಿರಿ. ಹೊಸ ಸರಕಾರದೊಡನೆ ನಿಮ್ಮ ಮನ ಬಂದಂತೆ ನಡೆದುಕೊಳ್ಳಿರಿ' ಎಂದು ಹೇಳಿದರೆ ಅದು ಸಮರ್ಥನೀಯವಾಗಬಹುದಾಗಿತ್ತು. ಆದರೆ ಶಾಂತಿಯಿಂದ ಸತ್ತಾಂತರವಾದ ಈಸಂದರ್ಭದಲ್ಲಿ, ಪಾರ್ಲಿಮೆಂಟಿನ ಒಂದು ಆ್ಯಕ್ಟಿನ ಮುಖಾಂತರ ಈ ಸತ್ತಾಂತರವಾದ ಪ್ರಸಂಗದಲ್ಲಿ ಬ್ರಿಟಿಶ ಸರಕಾರದವರು ಈ ರೀತಿ ಸಂಸ್ಥಾನಿಕರನ್ನು ಕೊಳ್ಳು ಹರಿದು ಅತಂತ್ರವಾಗಿ ಬಿಟ್ಟುಬಿಟ್ಟದ್ದು ಬಹಳ ವಿಲಕ್ಷಣವಾಗಿ ತೋರುವದು ! ಇಕೋ, ನಾವು ಯಾವ ಅಧಿಕಾರದಲ್ಲಿದ್ದೆವೊ ಆ ಅಧಿಕಾರಕ್ಕೆ ಇವರು ಬಂದಿರುವರು. ಇನ್ನು ಮುಂದೆ ನೀವು ನಮ್ಮೊಡನೆ ಈ ವರೆಗೆ ನಡೆದಂತೆ ಇವರೊಡನೆ ನಡೆಯಬೇಕು, ಎಂದು ಹೇಳಲು ಬ್ರಿಟಿಶರಿಗೆ ಯಾವ ಅಡ್ಡಿ ಆತಂಕಗಳಿದ್ದವು ? ಹೀಗೆ ಹೇಳಿದ್ದರೆ ಯಾವ ಕಟ್ಟಳೆಗೆ ವಿರುದ್ಧ ನಡೆದಂತಾಗುತ್ತಿತ್ತು ? ಸಂಸ್ಥಾನಿಕರು ಬಂಡಾಯ ಹೂಡಬಹುದೆಂದು ಬ್ರಿಟಿಶರು ಭಾವಿಸಿದ್ದರೊ? ಅಥವಾ ಅದಾವ ಅಡಚಣಿಯ ಮೂಲಕ ಬ್ರಿಟಿಶರು ಹೀಗೆ ಮಾಡಿದರು? ಸಂಸ್ಥಾನಿಕರೊಡನೆ ಬ್ರಿಟಿಶರು ಮಾಡಿದ ಒಪ್ಪಂದ, ಕರಾರು ಮುಂತಾದವುಗಳು ಅಡ್ಡ ಬಂದವೊ? ಹಾಗೆ ಅಂದರೆ, ನಾವು ಬೇಕಾದಾಗ ಹಿಂದುಸ್ತಾನವನ್ನು ಬಿಟ್ಟು ಹೋಗಬಹುದು, ಆಗ ನಿಮ್ಮದನ್ನು ನೀವು ನೋಡಿಕೊಳ್ಳಬೇಕು, ಎಂದು ಆ ಕರಾರಿನಲ್ಲಿ ಏನಾದರೂ ಇದೆಯೆ? ಯಾವದೇ ದೃಷ್ಟಿಯಿಂದ ನೋಡಿದರೂ ಬ್ರಿಟಿಶರು ಸಂಸ್ಥಾನಗಳ ಬಗ್ಗೆ ತಳೆದ ಧೋರಣವು ತೀರ ಅಸಮರ್ಥನೀಯವೆಂದೇ ತೋರುವದು.

× × ×

ಆ ಅಸಮರ್ಥನೀಯವಾದ ಬ್ರಿಟಿಶ ಧೋರಣದ ಮೂಲಕವೆ ಈಗ ಈ ಸಂಸ್ಥಾನಗಳ ಸಮಸ್ಯೆ ಉಂಟಾಗಿದೆ. ಇನ್ನೇನೂ ಇಲ್ಲ. ಸಂಸ್ಥಾನಿಕರಿಗೆ ಹುಚ್ಚೆದ್ದು ಕುಣಿಯಲು ಆಸ್ಪದವಾದಂತಾಗಿದೆ. ಅವರಿಗೂ ದಿಕ್ಕು ಕಾಣದಂತಾಗಿದೆ. ಒಬ್ಬ ಹೊಸಬನನ್ನು ದೊಡ್ಡ ಪಟ್ಟಣದ ನಡುಮಧ್ಯದಲ್ಲಿ ತಂದು ಬಿಟ್ಟರೆ ಅವನ ಗತಿ ಏನಾಗುವದೊ ಅದೇ ರೀತಿ ಅವರ ಗತಿ ಆಗಿದೆ. ಮೇಲಾಗಿ ಬ್ರಿಟಿಶರು ತಾವು ಅವರಿಗೆ ಯಾವದೇ ಬಗೆಯ ಸಹಾಯ ಮಾಡಲು ಸಿದ್ಧರಿಲ್ಲ ಎಂದು ಹೇಳಿರುವರು. ಡೊಮಿನಿಯನ್ ಸಂಘದಲ್ಲಿ ಸೇರಿಸಿಕೊಳ್ಳಲು ಸಿದ್ಧರಿಲ್ಲ. ಸ್ವತಂತ್ರ ಒಪ್ಪಂದ ಮಾಡಿಕೊಳ್ಳಲೂ ಸಿದ್ಧರಿಲ್ಲ. ಅರ್ಥಾತ್ ಸಂಸ್ಥಾನಗಳು ಹಿಂದುಸ್ತಾನದಲ್ಲಿಯ ಪಾಕಿಸ್ತಾನ ಇಲ್ಲವೆ ಇಂಡಿಯಾ ಡೊಮಿನಿಯನ್ನಗಳಲ್ಲಿ ಒಂದನ್ನು ಸೇರಲೇ ಬೇಕು ಎಂದು ಮೌಂಟಬೇಟನ್ನರು ಈಗ ಅವರಿಗೆ ಒತ್ತಾಯ ಪಡಿಸುತಿರುವರು. ಸಹಜವಾಗಿ ಸರಳವಾಗಿ ಆಗಬಹುದಾದುದನ್ನು ಈಗ ಪ್ರತ್ಯಕ್ಷ ಅಪ್ರತ್ಯಕ್ಷ ಒತ್ತಾಯದಿಂದ ಸಂಸ್ಥಾನಿಕರ ಕಡೆಯಿಂದ ಮಾಡಿಸುವ ಗೊಂದಲದಲ್ಲಿ ಅವರು ಬಿದ್ದಿರುವರು! ದ್ರಾವಿಡೀ ಪ್ರಾಣಾಯಾಮವು ನಡೆದಿದೆ ಎಂದು ಹೇಳಿದರೆ ಅತಿಶಯೋಕ್ತಿಯಾಗಲಿಕ್ಕಿಲ್ಲ.

× × ×

ನಿಜವಾಗಿ ನೋಡಿದರೆ ಸಂಸ್ಥಾನಿಕರು ಇಷ್ಟೊಂದು ವಿಚಾರ ಮಾಡುತ್ತ ಕೂಡುವ ಕಾರಣವಿರಲಿಲ್ಲ. ಆಕಸ್ಮಾತ್ತಾಗಿ ದೊರೆತ ಸ್ವಾತಂತ್ರ್ಯವಿದು. ಅವರ ಶೌರ್ಯ ಕರ್ತೃತ್ವಾದಿಗಳಿಂದ ಇದು ದೊರೆತುದಲ್ಲ. ಅಂದ ಬಳಿಕ ಮೊದಲಿನ ಸರಕಾರದೊಡನೆ ಯಾವ ಸಂಬಂಧಗಳಿದ್ದವೊ ಅವೇ ಸಂಬಂಧಗಳನ್ನಿಟ್ಟುಕೊಂಡು ನಿಮ್ಮೊಡನೆ ಇರುವೆವು ಎಂದು ಸಸೂತ್ರವಾಗಿ ಒಪ್ಪಿಕೊಂಡು ನಡೆದರೆ ಯಾವ ತೊಂದರೆಯೂ ಆಗಲಾರದು. ಆದರೆ ಇಷ್ಟು ಸಾದಾ ವ್ಯಾವಹಾರಿಕ ಮಾತನ್ನು ತಿಳಿದುಕೊಳ್ಳುವಷ್ಟು ಜಾಣತನ ಕೂಡ ಅನೇಕ ಸಂಸ್ಥಾನಿಕರಲ್ಲಿಲ್ಲ! ಅವರು ಅವನನ್ನೂ ಕೇಳು, ಇವನನ್ನೂ ಕೇಳು, ಎಂದು ಅನೇಕರನ್ನು ಕೇಳುತ್ತ ಹೋಗಿ ಕೊನೆಗೆ ಏನು ಮಾಡಬೇಕೆಂದು ತಿಳಿಯದೆ ಇನ್ನೂ ಅನಿಶ್ಚಿತ ಸ್ಥಿತಿಯಲ್ಲಿಯೆ ಅನೇಕರು ಇರುವರು!

× × ×

ಈ ಸಂದರ್ಭದಲ್ಲಿ ಆಯಾ ಸಂಸ್ಥಾನದ ಪ್ರಜೆಗಳ ಕರ್ತವ್ಯವು ಅತ್ಯಂತ ಸ್ಪಷ್ಟವಿರುವದು. ತಮ್ಮ ನೆರೆಹೊರೆಯ ಹಿಂದೀಯರೊಡನೆ ಇದ್ದ ತಮ್ಮ ಸಂಬಂಧವನ್ನು ಪುನಃ ಸ್ಥಾಪಿಸಲು ಈಗ ಉತ್ತಮೋತ್ತಮ ಸಂಧಿ ದೊರೆತಿದೆ. ಹಿಂದುಸ್ತಾನದೊಡನೆ ತಾವು ಇದ್ದು ಯೋಗ್ಯವಾಗಿ ಘಟಕಗಳಂತೆ ನಡೆಕೊಳ್ಳಬೇಕು, ಹಿಂದುಸ್ತಾನ ಯೂನಿಯನ್ನ ತಮ್ಮದು, ಎಂದು ಪ್ರಜೆಗಳು ಹಟ ಹಿಡಿಯಲಿಕ್ಕೆ ಬೇಕು. ಈಗ ಸದ್ಯಕ್ಕೆ ಇದೇ ಮುಖ್ಯವಾದ ಮಾತು. ಎರಡನೇ ಮಾತೆಂದರೆ ಪೂರ್ಣ ಜವಾಬ್ದಾರ ರಾಜ್ಯ ಪದ್ಧತಿ ಸಂಸ್ಥಾನದೊಳಗೆ, ಪೂರ್ಣ ಜವಾಬ್ದಾರ ರಾಜ್ಯ ಪದ್ಧತಿ ಸಂಸ್ಥಾನದ ಹೊರಗೆ ಇಂಡಿಯನ್ ಯೂನಿಯನ್ನಿನೊಡನೆ ಕೂಡಿಕೊಳ್ಳುವದು, ಇವೇ ಎರಡು ಮುಖ್ಯ ಮಾತುಗಳನ್ನಿಟ್ಟುಕೊಂಡು ಸಂಸ್ಥಾನೀ ಪ್ರಜೆಗಳು ಸರ್ವತೋಪರಿ ಶಾಂತಿಮಯ ಆಂದೋಲನವನ್ನು ಹೂಡಲಿಕ್ಕೆಬೇಕು. ಅಂದರೆ ಅವರಿಗೆ ತಕ್ಕ ಸಹಾಯವು ಸಿಕ್ಕು ಉಭಯತೋಪರಿ ಹಿತಸಾಧನೆಯಾಗುವದು.

ಖೋಟಾ ನಾಣ್ಯಗಳ ತಯಾರಿಕೆಗೆ ಬೇಕಾದ ಸಾಮಾನುಗಳು ಪತ್ತೆಯಾಗಿ ಪ್ರಾಂತಿಕ ಸಿ. ಐ. ಡಿ.ಗಳು ಬೆಂಗಳೂರಿನ ಸೇಗು ಲಕ್ಷ್ಮೀನಾರಾಯಣ ಸೆಟ್ಟಿ ಮತ್ತು ಅವರ ಸಹೋದರ ಸೇಗು ರಾಮಯ್ಯ ಸೆಟ್ಟಿ ಎಂಬವರ ಮೇಲೆ ನಗರದ ಮ್ಯಾಜಿಸ್ಟ್ರೇಟ ಕೋರ್ಟಿನಲ್ಲಿ ಜುಲೈ ೨೨ರಲ್ಲಿ ಮೊಕದ್ದಮೆ ಹೂಡಿದರು. ಅಪಾದಿತರನ್ನು ತಾತ್ಪೂರ್ತಿಕವಾಗಿ ಸೆರೆಮನೆಗೆ ಕಳುಹಲಾಯಿತು. ವಿಚಾರಣೆಯನ್ನು ಮುಂದೆ ಹಾಕಿದರು.

ಹೊಸ ರಾಷ್ಟ್ರಧ್ವಜ

ಶ್ರೀ ಕೆ. ಎಂ. ಮುನಶಿಯವರ ಅಭಿಪ್ರಾಯ

ಈ ಧ್ವಜವನ್ನು ಗಾಂಧೀಜಿಯು ಪಮಗೆ ಕೊಟ್ಟದ್ದು. ಇದು ಸತ್ಯ ಮತ್ತು ಅಹಿಂಸೆಗಳ ಪ್ರತೀಕ; ಮತ್ತು ರಾಷ್ಟ್ರವನ್ನು ಕತ್ತಲಿಂದ ಬೆಳಕಿಗೊಯ್ದ ಆ ತಂದೆಯ ಕುರುಹು. ಕದಿರಿಲ್ಲದಿದ್ದರೂ ಚರಕವು ಧ್ವಜದ ಮೇಲೆ ನಿಂತಿದೆ.

ಅಶೋಕನ ಭಾರತದ ಸ್ವಾತಂತ್ರ್ಯ, ಗೌರವಗಳನ್ನು ಗಾಂಧೀಜಿಯು ಭಾರತವು ಪುನಃ ಪಡೆದಿದೆಯೆಂಬ ಅತ್ಯಂತ ಮಹತ್ವದ ವಿಷಯಕ್ಕೆ ಚಕ್ರವು ಸಾಕ್ಷಿಯಾಗಿದೆ. ಅಂದು ಆ ಮಹಾವಿಜೇತನಾದ ಅಶೋಕನು ಧರ್ಮದಿಂದ ರಾಜ್ಯವಾಳುತ್ತಿದ್ದರೆ ಇಂದು ನಮ್ಮ ಈ ಮಹಾವಿಜೇತನು ಧರ್ಮದಿಂದ ಭಾರತಕ್ಕೆ ಸ್ವಾತಂತ್ರ್ಯವನ್ನು ಗೆದ್ದುಕೊಟ್ಟಿದ್ದಾನೆ. ೨೫೦೦ ವರ್ಷಗಳ ದೈವನಿಯುಕ್ತ ಇತಿಹಾಸ—ಪರಕೀಯರ ಗೆಲುವುಗಳು, ಹೋರಾಟಗಳು, ಅವಮಾನಗಳು, ಬೆಂಕಿಯಂತಹ ವಾತಾವರಣಗಳು ಮತ್ತು ಭಾಗ್ಯೋದಯ! ಈಗ ನಾವು ವಿಜಯಿಗಳಾಗಿ ಹೊರಬಿದ್ದೆವು. ಗಾಂಧೀಜಿಯು ಚರಕದಿಂದ ಅಶೋಕನ ಧರ್ಮಚಕ್ರಕ್ಕೆ ತಿರುಗಿದ ನನ್ನ ಮನಸ್ಸು ಶ್ರೀಕೃಷ್ಣನ ಸುದರ್ಶನ ಚಕ್ರದತ್ತ ಹರಿಯುತ್ತದೆ—ಮಾನವನ ಇತಿಹಾಸದಲ್ಲಿ ಅದ್ವಿತೀಯವಾದ ಜೀವನನ್ಯೆರಂತರ್ಯವಿಲ್ಲಿದೆ. ರಾಷ್ಟ್ರಗಳ ತಾಯಿಯಾದ ಭಾರತವು ಸುಮೇರಿಯ, ಈಜಿಪ್ತ, ಗ್ರೀಸುಗಳಿಗಿಂತ ಪುರಾತನವಾದುದು. ಅವುಗಳಕಾಲ ಸಂದಿತು. ಭಾರತಮಾತೆಯಾದರೋ ಸಮರ್ಥಳೂ ಜಯಶಾಲಿನಿಯೂ ಆಗಿ ಬಾಳುತ್ತಿದ್ದಾಳೆ; ಮತ್ತು ಧ್ವಜದ ಮೇಲಿನ ಚಕ್ರವು ಮಾನವ ಕುಲದ ಉದ್ಧಾರಕ್ಕಾಗಿ ವಿಧಾಯಕ ಪ್ರಯತ್ನಗಳನ್ನು ಮಾಡಬೇಕೆಂಬ ಅವಳ ಅವ್ಯವಚ್ಛಿನ್ನವಾದ ಅಂತಃ ಪ್ರೇರಣೆಯ ಪ್ರತೀಕವಾಗಿದೆ.

(೪ ನೇ ಪುಟದಿಂದ)

ಮಾಡಬಹುದು. ಒಕ್ಕೂಟಕ್ಕೊಪ್ಪಿಸಿದ ಅಧಿಕಾರಗಳ ಬಗ್ಗೆ ಕಾಯದೆ ಮಾಡುವ ಹಕ್ಕು ಒಕ್ಕೂಟದ್ದು.

● ಒಕ್ಕೂಟದ ಅಧ್ಯಕ್ಷರಿಗೆ ಸಹಾಯ ಮಾಡಲು ಒಂದು ಮಂತ್ರಿಮಂಡಲವಿರಬೇಕು. ಅದರ ಮುಖ್ಯ ಮಂತ್ರಿಯನ್ನು ಅಧ್ಯಕ್ಷರು ನೇಮಿಸಬೇಕು. ಅವನು ಉಳಿದ ಮಂತ್ರಿಗಳನ್ನು ಆರಿಸಿಕೊಳ್ಳಬೇಕು. (ಅಂದರೆ ಅಧ್ಯಕ್ಷನು ಶಾಸನ ಸಭೆಯ ಬಹುಮತ ಪಕ್ಷದ ನಾಯಕನನ್ನು ಮುಖ್ಯ ಮಂತ್ರಿಯಾಗಿ ನೇಮಿಸಿ ಅವನು ತನ್ನ ಪಕ್ಷದ ಮಂತ್ರಿಮಂಡಲ ರಚಿಸಬೇಕು.) ಮಂತ್ರಿಮಂಡಲ ಒಕ್ಕೂಟ ಶಾಸನ ಸಭೆಗೆ ಹೊಣೆಗಾರವಾಗಿರಬೇಕು.

● ಒಕ್ಕೂಟದ ಮೇಲ್ಮನೆಗೆ ಆರ್ಥಿಕ ಮಸೂದೆಗಳನ್ನು ಮಂಡಿಸುವ ಅಧಿಕಾರವಿಲ್ಲ. ಆದರೆ ಅದು ಕೆಳಮನೆಯಿಂದ ಪಾಸಾಗಿ ಬಂದ ಮೇಲೆ ತಿದ್ದುಪಡಿ ಸೂಚಿಸಿ ತಿರುಗಿ ಕಳಿಸಬಹುದು. ಆದರೆ ಅಲ್ಲಿ ಇನ್ನೊಮ್ಮೆ ಪಾಸಾದರೆ ಅದನ್ನು ಮೇಲ್ಮನೆ ತಡೆಯಲಾರದು.

● ಒಕ್ಕೂಟದ ನ್ಯಾಯಸ್ಥಾನದ ನೇಮಕದ ವಿಷಯದಲ್ಲಿ ತದುದ್ದೇಶ ಸಮಿತಿಯವರು ಸೂಚಿಸಿದ ಪದ್ಧತಿಯನ್ನು ಸ್ವೀಕರಿಸಲಾಯಿತು. ವರಿಷ್ಠ ನ್ಯಾಯಾಲಯದ ನ್ಯಾಯಾಧೀಶನು ದುರ್ವರ್ತನೆಯವನೆಂದು ಇಲ್ಲವೆ ಅಯೋಗ್ಯನೆಂದು ಸಿದ್ಧವಾಗಿ ಎರಡೂ ಶಾಸನ ಸಭೆಗಳು ರಾಷ್ಟ್ರಪತಿಗೆ ಬಿನ್ನವಿಸಿದರೆ ಮಾತ್ರ ಅವನನ್ನು ರಾಷ್ಟ್ರಪತಿ ತೆಗೆದುಹಾಕಬಹುದೆಂದು ಅದರಲ್ಲಿ ನಿರ್ದೇಶಿಸಲಾಗಿದೆ.

● ಒಕ್ಕೂಟದ ಚುನಾವಣೆಗಳನ್ನು ಒಕ್ಕೂಟ ಸರಕಾರದ ಮತ್ತು ಪ್ರಾಂತಿಕ ಚುನಾವಣೆಗಳನ್ನು ಪ್ರಾಂತಿಕ ಸರಕಾರದ ನಿಯಂತ್ರಣಕ್ಕೊಳಪಡಿಸಲಾಗಿದೆ.

ಪ್ರಾಂತ—ಒಕ್ಕೂಟಗಳ ನಡುವೆ ಅಧಿಕಾರಗಳನ್ನು ಹೇಗೆ ಹಂಚಬೇಕು, ಎಂಬಿತ್ಯಾದಿ ಹಲವು ವಿಷಯಗಳ ಚರ್ಚೆಯನ್ನು ಮುಂದೆ ಹಾಕಲಾಗಿದೆ.

ವಿಭಜನೆಯ ಸಮಸ್ಯೆ !

ಪಂಜಾಬ ಬಂಗಾಲಗಳಲ್ಲಿ ಮುಂದೆ ಬಂದಿರುವ ವಿಭಜನೆಯ ಸಮಸ್ಯೆಗಳಲ್ಲಿ ಆಯಾ ವಿಶ್ವವಿದ್ಯಾಲಯಗಳನ್ನು ಹಂಚಿಕೊಳ್ಳುವಾಗ ಈಗ ಪಾಸಾಗಿರುವ ವಿದ್ಯಾರ್ಥಿಗಳನ್ನು ಹೇಗೆ ಹಂಚಿಕೊಳ್ಳಬೇಕೆಂಬದೂ ಒಂದಂತೆ! ಬಂಗಾಲದಲ್ಲಿ ಪ್ರಾಂತಿಕ ಅಪರಾಧಿಗಳನ್ನು ಹೇಗೆ ಹಂಚಿಕೊಳ್ಳಬೇಕೆಂಬ ತೊಂದರೆಯೆದ್ದು ಕೊನೆಗೆ ವ್ಯಕ್ತಿಗಳ ಜನ್ಮಸ್ಥಾನದ ಆಧಾರದಿಂದ ಹಂಚಬೇಕೆಂದು ತೀರ್ಮಾನವಾಯಿತಂತೆ! ಮುಂದೆ ಘಟನಾ ಸಮಿತಿ ಪಾರ್ಲಮೆಂಟಿನ ರೂಪದಲ್ಲಿ ಕಾರ್ಯಮಾಡಬಹುದು.

ದಕ್ಷಿಣ ಕನ್ನಡ

ಮಂಗಳೂರಿನ ಬಸವನ ಗುಡಿಯಬಳಿ ಹೊಸ ಸಬ್ ಪೋಸ್ಟಾಫೀಸನ್ನು ತೆರೆಯಲಾಗಿದೆ.

ರಶಿಯದ ಹಿಂದೀ ರಾಯಭಾರಿಗಳಾದ ಶ್ರೀಮತಿ ವಿಜಯಲಕ್ಷ್ಮಿ ಪಂಡಿತರ ಮುಖ್ಯಾಲೋಚಕರಾಗಿ ಮಂಗಳೂರು ಜಿಲ್ಲೆಯ ಶ್ರೀ ಅಮ್ಮೆಂಬಳ ವಿಟ್ಠಲಶೆಣೈಗಳು ನಿಯಮಿಸಲ್ಪಟ್ಟಿರುವರು.

ಜುಲೈ ೨೫ರಲ್ಲಿ ಮಂಗಳೂರಿನ ಬೆಸೆಂಟ್ ಬಾಲಿಕಾ ಪಾಠ ಶಾಲೆಯಲ್ಲಿ ತಿರುವಾಂಕೂರಿನ ಕೆ. ವಿ. ಭಾಸ್ಕರನ್ನರ ನೃತ್ಯ ನಡೆಯಿತು.

ಕನ್ನಡ ಕಲಿಸುವ ಪಂಡಿತರ ತರಬೇತಿಯ ವರ್ಗವೊಂದು ಮಂಗಳೂರು ಸರಕಾರೀ ಕಾಲೇಜಿನಲ್ಲಿ ತೆರೆಯಲ್ಪಡುವದೆಂದು ಪ್ರಕಟವಾಗಿದೆ.

ಒತ್ತಾಯದ ಶಿಕ್ಷಣವು ಜುಲೈ ೨೫ರಿಂದ ಕುಂದಾಪುರ ತಾಲೂಕಿನ ೫ ಕೇಂದ್ರಗಳಲ್ಲೂ, ಉಡುಪಿ ತಾಲೂಕಿನ ೮ ಕೇಂದ್ರಗಳಲ್ಲೂ ಕಾರ್ಕಳದ ೫ ಕೇಂದ್ರಗಳಲ್ಲೂ ಮಂಗಳೂರಿನ ೪, ಪುತ್ತೂರಿನ ೩ ಹಾಗೂ ಕಾಸರಗೋಡಿನ ೬ ಕೇಂದ್ರಗಳಲ್ಲೂ ಜಾರಿಗೆ ಬಂದಿದೆ.

ಸುರತ್ಕಲ್ಲಿನ ವಿದ್ಯಾದಾಯಿನಿ ಹೈಸ್ಕೂಲಿನ ವಿದ್ಯಾರ್ಥಿ ಕಾಂಗ್ರೆಸ್ಸಿನ ಉದ್ಘಾಟನೆಯು ಜುಲೈ ೨೪ರಲ್ಲಿ ಶ್ರೀ ವಿ. ಕೆ. ನಾರಾಯಣರಾವ ಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ ಎಂ ವಾಸುದೇವರಾಯರ ಅಧ್ಯಕ್ಷತೆಯಲ್ಲಿ ಜರುಗಿತು.

ಉಡುಪಿ ತಾಲೂಕಿನ ಖಾಸಗೀ ಶಾಲಾ ಶಿಕ್ಷಕರ ವೃಂದದ ಸದಸ್ಯರು ವೇತನ ವೃದ್ಧಿಗಾಗಿ ಸೆಪ್ಟೆಂಬರಿಂದ ಸಂಪು ಹೂಡಬೇಕೆಂದು ಜುಲೈ ೧೯ರ ಸಭೆಯಲ್ಲಿ ನಿರ್ಧರಿಸಿದರು. ಸುಮಾರು ೪೦೦ ಮಂದಿ ಶಿಕ್ಷಕ ಶಿಕ್ಷಕಿಯರು ಸಂಪಿನ ಪವಿತ್ರಧಾರಣ ಮಾಡಿರುವರು.

ಬಟ್ಟೆ ಮತ್ತು ಕಾಗದ ತಯಾರಿಸುವ ಕಾರಖಾನೆಯೊಂದು ಮೂಡಬಿದರೆಯಲ್ಲಿ ಸ್ಥಾಪಿಸಲಾಗುವುದೆಂದು ಸುದ್ದಿ.

ಕಾಸರಗೋಡಿನ ಕಣ್ವಾಶ್ರಮದ ಆಶ್ರಯದಲ್ಲಿ ಸ್ಥಾಪಿಸಲ್ಪಟ್ಟ ವಿಜಯ ಭಾರತೀಯ ರಚನಾತ್ಮಕ ಪ್ರೌಢ ವಿದ್ಯಾಲಯಕ್ಕೆ ಸೇರಿದರೆ ವಿದ್ಯಾರ್ಜನೆಗೆ ವಿವಿಧ ಅನುಕೂಲಗಳು ದೊರಕುವವೆಂದು ಪ್ರಸಿದ್ಧಿಸಲಾಗಿದೆ.

ಕುಂಬಳೆ ಫಿರ್ಕೆಗೆ ಒಳಪಟ್ಟ ೬ ಗ್ರಾಮಗಳಲ್ಲಿ ಒತ್ತಾಯದ ಶಿಕ್ಷಣ ಸದ್ಯದಲ್ಲೇ ಪ್ರಾರಂಭಿಸಲ್ಪಡುವುದೆಂದು ತಿಳಿಯುತ್ತದೆ.

ಕಾಸರಗೋಡು ತಾಲೂಕಿನ ಶಾಲಾ ಶಿಕ್ಷಕರ ಸಂಘದ ಸಮರ ಸಮಿತಿಯು ಜುಲೈ ೨೦ರಲ್ಲಿ ಸಭೆಸೇರಿ ಮುಷ್ಕರವನ್ನು ಅನಿಶ್ಚಿತಕಾಲ ಮುಂದೂಡುವ ಮತ್ತು ಮಧುರೆಯ ಶಿಕ್ಷಕ ಮುಷ್ಕರಕ್ಕೆ ಸಹಾನುಭೂತಿ ತೋರುವ ಗೊತ್ತುವಳಿಯನ್ನು ಅಂಗೀಕರಿಸಿತು.

ಪುತ್ತೂರು ವಿಭಾಗದ ದಕ್ಷಿಣ ಭಾಗದಲ್ಲಿ ಆಹಾರದ ಕೊರತೆ ಬಹಳ ಹೆಚ್ಚಾಗಿದೆಯೆಂದೂ ಸರಕಾರವು ಅಕ್ಕಿ ಸಮನ ಕೊಡುವುದು ಅತ್ಯಗತ್ಯವೆಂದೂ ಅಭಿಪ್ರಾಯ ಪಡಲಾಗಿದೆ.


ಮಂಗಳೂರಲ್ಲಿ ಅನೇಕ ಕಲೆಗಾರರು ಕೂಡಿ "ಪೃಥ್ವೀ ಥಿಯೆಟರ್ಸ್" ಮಾದರಿಯ ಒಂದು ನೂತನ ಸುಧಾರಿತ ನಾಟಕ ಕೂಟವನ್ನು ಏರ್ಪಡಿಸಿ ರಂಗಭೂಮಿಯಲ್ಲಿ ಪ್ರಶಂಸಾರ್ಹ ಸುಧಾರಣೆಗಳನ್ನು ತರಲು ಮುಂದಾಗಿರುವರೆಂಬುದು ಮಂಗಳೂರಿಗೆ ಹೆಮ್ಮೆಯ ಸುದ್ದಿ.

ಉಡುಪಿಯಲ್ಲೊಂದು ಆರ್ಟ್ಸ್ ಕಾಲೇಜನ್ನು ತೆರೆಯಲು ಅನುಮತಿ ಪಡೆಯಲು ಉಡುಪಿ ಮಹಾಜನರ ಪರವಾಗಿ ಶಿಷ್ಟಮಂಡಲದವರು ಮದ್ರಾಸ ವಿಶ್ವವಿದ್ಯಾಲಯದ ವೈಸಚಾನ್ಸಲರನ್ನು ಭೆಟ್ಟಿಯಾಗಲು ತೆರಳಿದ್ದಾರೆ. ಅನುಮತಿ ದೊರೆತರೆ ಇದೇ ತಿಂಗಳಲ್ಲಿ ಇಂಟರ್ ಮೀಡಿಯೆಟ್ ತರಗತಿ ಏರ್ಪಡಿಸುವ ವ್ಯವಸ್ಥೆ ನಡೆದಿದೆ.

ರಮ್ಜಾನಿನ ಸಂಬಂಧವಾಗಿ ಮಂಗಳೂರಿನ ಪ್ರತಿ ಮುಸ್ಲಿಂ ಗೃಹಸ್ಥನಿಗೂ ಜುಲೈ ೧೫ ರಿಂದ ಅಗಸ್ಟ ೧೫ ರ ವರೆಗೆ ದ್ವಿಗುಣ ಪ್ರಮಾಣದಿಂದ [illegible] ಕೊಡಲು ಕಲೆಕ್ಟರರ ಅಪ್ಪಣೆಯಾಗಿದೆ.

ಮಂಗಳೂರಿನ "ವೀನಸ್ ರೋವರ್" ದಳದವರು ಜುಲೈ ೧೩ ರಲ್ಲಿ ಮಿಯಾಪದವು ಎಂಬಲ್ಲಿಗೆ ಸೈಕ್ಲಿಂಗ್ ಪ್ರವಾಸ ನಡೆಸಿದರು. ಮಿಯಾಪದವಿನ ಶಾಲೆಯಲ್ಲಿ ಮಕ್ಕಳನ್ನು ಒಟ್ಟುಗೂಡಿಸಿ ಹೊಸ ಮಂಡಲ ರಚಿಸಿ ಉದ್ಘಾಟಿಸಲಾಯಿತು.

ಮೈಸೂರು ಸಂಸ್ಥಾನಕ್ಕೆ ಆಗಲೆ ಕೊಡಬೇಕಾದ ನಿರ್ದೇಶನವಾದ ೨೦೦೦ ಟನ್ ತೊಗರಿ ಕೊಡುವುದಲ್ಲದೆ ಮತ್ತೆ ೩೦೦೦ ಟನ್ನನ್ನು ಕೇಂದ್ರ ಸರಕಾರ ಕೊಡಲೊಪ್ಪಿದೆ.



ಮುಂಬಯಿ ಶೇರ ಪೇಟೆ

ತಾ ೨೦

ಮುಂಬಯಿ ಶೇರ ಪೇಟೆಯಲ್ಲಿ ಈ ವಾರ ಬೆಲೆಗಳು ಬಹಳ ಇಳಿ ಮುಖವಾದವು. ಸ್ಟೀಲ ಪಾಲುಗಳ ಮೇಲಿನ ಲಾಭಾಂಶ ಇಳಿಯುವದೆಂದು ಅನೇಕರು ವರ್ತಿಸುತ್ತಾರೆ. ಜವಳಿ ಪಾಲುಗಳೂ ಕೆಳದರ್ಜೆಯಲ್ಲಿಯೆ ಇವೆ. ಬಟ್ಟೆಯ ಬೆಲೆಯನ್ನು ಏರಿಸ ಕೂಡದೆಂದು ದಿಲ್ಲಿಯಲ್ಲಿ ಸೇರಿದ ಬಟ್ಟೆ ಪರಿಷತ್ತು ನಿರ್ಣಯಿಸಿದೆ. ಈ ಎಲ್ಲ ಕಾರಣಗಳಿಂದ ಕೊಳ್ಳುವವರಲ್ಲಿ ಹುರುಪು ಉಡುಗಿ ಹೋಗಿದೆ. ಟಾಟಾ ಸ್ಟೀಲು ಡೆಫರ್ಡ ೨೦೩೬—೪—೦ ರಿಂದ ೨೦೬೨—೮—೦ ಕ್ಕೆ ಇಳಿಯಿತು. ಇಂಡಿಯನ್ ಅಯರ್ನ ೨೭೮—೦—೦ ರಿಂದ ೨೬೧—೦—೦ ಕ್ಕೂ ಅಸೋಸಿಯೇಟೆಡ ಸಿಮೆಂಟ್ಸ ೧೭೬-೦-೦ ರಿಂದ ೧೬೧—೪—೦ಕ್ಕೂ ಇಳಿದವು ಜವಳಿ ಪಾಲುಗಳಲ್ಲಿ ಕೋಹಿನೂರು ಎಲ್ಲದಕ್ಕಿಂತ ಹೆಚ್ಚು ಹೊಡೆತ ತಿಂದಿತು. ೬೫೯-೦-೦ ರಿಂದ ೬೦೧-೦-೦ಕ್ಕೆ ಅದು ಬಿತ್ತು. ಫಿನ್ಲೆ ೩೧೮-೮-೦ ರಿಂದ ೩೦೪-೦-೦ ಕ್ಕೂ ಡಾಯಿಂಗ ೧೧೬೬—೦—೦ ರಿಂದ ೧೦೯೦-೦-೦ ಕ್ಕೂ ಸ್ವದೇಶಿ ೬೬೧-೦-೦ ರಿಂದ ೬೧೫—೦—೦ ಕ್ಕೂ ಇಳಿದವು. ಗೋಕಾಕ ೩೪೫-೦-೦ ರಿಂದ ೩೨೪-೦-೦ ಕ್ಕೂ ಇಳಿದವು. ಬ್ಯಾಂಕುಗಳಲ್ಲಿ ಸೆಂಟ್ರಲ ೧೧೧—೦—೦ ರಿಂದ ೯೬-೮-೦ ಕ್ಕೂ ರಿಝರ್ವ ೧೨೧—೦—೦ ರಿಂದ ೧೧೬-೦-೦ ಕ್ಕೂ ಇಂಪೀರಿಯಲ್ ಎಸ್. ಬಿ. ೨೨೫೦-೦-೦ ರಿಂದ ೨೧೯೦—೦—೦ ಕ್ಕೂ ಇಳಿದವು ಜಿ. ಪಿ. ನೋಟು ೧೦೦—೫—೩.

ಚಿನ್ನ--ಬೆಳ್ಳಿ

ಲಾಭ ಬಡಕರ ಕೈ ಮೇಲಾಗಿ ತಿರುಗಿ ಚಿನ್ನದ ಬೆಲೆ ಏರಿತು. ೧೦೮—೦—೦ ಯಿಂದ ಅದು ೧೧೦—೧೨—೦ಕ್ಕೇರಿ ೧೧೦—೦—೦ಕ್ಕಿಳಿಯಿತು ವಾಯಿದಾ ೧೦೯—೧೦—೦ ಬೆಳ್ಳಿ ೧೭೧-೦-೦ ರಿಂದ ೧೭೬—೧೪—೦ ಕ್ಕೇರಿತು ವಾಯಿದಾ ೧೭೬—೦—೦

ಅರಳಿ

ಸೆಪ್ಟೆಂಬರ ಅರಳಿ ೪೩೭—೮—೦ ಯಿಂದ ೪೪೦—೧೨—೦ ವರೆಗೇರಿ ತಿರುಗಿ ೪೩೬—೪—೦ ಕ್ಕಿಳಿಯಿತು. ದಿಲ್ಲಿಯ ಪರಿಷತ್ತಿನ ನಿರ್ಣಯ ಬೆಲೆಗಳ ಏರಿಕೆಗೆ ಪ್ರತಿಕೂಲವಿದ್ದುದರಿಂದಲೇ ಹೀಗಾಯಿತು.

ಎಣ್ಣೆ ಕಾಳು

ಶೇಂಗಾ	೧೭೫-೦-೦
ಅಗಸಿ	೩೧-೫-೦
ಅಗಸಿ ಎಣ್ಣೆ	೨೧-೬-೦

ಸಾಂಗಲಿ ಪೇಟೆ

ಅರಿಷಣ ಹೇರು	೧೦೫-೧೧೪
ಮೆಣಸಿನಕಾಯಿ ಹೇರು ,,	೧೦೦-೧೫೦
ಶೇಂಗಾ ಖಂಡಿ	೧೩೮

ಶಿವಮೊಗ್ಗೆ

ಜುಲೈ ತಾ|| ೨೯

ಅಡಿಕೆ ದೇಶಾವರ ನಂ ೧ ಮಣ ೧ಕ್ಕೆ	೫೩-೫೫
,, ,, ೨	೫೦-೫೨
,, ,, ೩	೪೮-೫೧
ಕೊರಸಾಲು	೪೮-೫೨
ಅಸ್ವಾವರ	೪೯-೫೩
ಸುಲಿ	೪೮-೫೦
ರಾಜಾಅಲವು	೪೮-೫೦
ಚಿಟ್ಟ ವಂತಿ	೩೨-೩೪
ಚಿಟ್ಟ	೨೮-೩೨

ಪೇಟೆಯಲ್ಲಿ ಸರಕು ಮತ್ತು ವಂತಿ ಚಿಟ್ಟಗೆ ಗಿರಾಕಿ ಚೆನ್ನಾಗಿದೆ.

ವರ್ತಕರು ಮಾತ್ರ ಧಾರಣೆ ಹೆಚ್ಚಬಹುದೆಂಬ ಆಸೆಯಿದೆ ಮಾಲನ್ನು ಕೈ ಬಿಡದೆ ಬಿಗಿ ಹಿಡಿಯುತ್ತಿದ್ದಾರೆ.

ಹುಬ್ಬಳ್ಳಿ

ಹೊಸ ಜಯವಂತ ಹತ್ತಿ ನಂ. ೧	೨೮೦-೨೮೫
,, ನಂ. ೨	೨೫೫-೨೭೦
,, ನಂ. ೩	೨೪೦-೨೫೫
ಹಳೇ ಜಯವಂತ ಹತ್ತಿ	೨೯೫-೩೦೧
ಅಪ್ಲಂಡ ಹತ್ತಿ	೨೮೦-೨೯೦
ಜಿನ ಹೊಸದು	೧೮೦-೧೮೫
ಜಿನ ಹಳೇದು	೧೯೫-೨೦೦
ಡಬಲರೋಲ	೧೮೦-೧೮೫
ಸಾಜಿನ	೧೮೦-೧೮೫

ಬೆಂಗಳೂರು-ಮೈಸೂರು

ಇದುವರೆಗೂ ವಾರಪತ್ರಿಕೆಯಾಗಿ ಪ್ರಕಟವಾಗುತ್ತಿದ್ದುದರ ಜೊತೆಗೆ ಜುಲೈ ೨೩ರಿಂದ ದಿನಪತ್ರಿಕೆಯಾಗಿ ಬೆಂಗಳೂರಿನ "ಪೌರವಾಣಿ" ಹೊರಡಲಾರಂಭಿಸಿತು.

ಜಗನ್ನಾಥ ಮೆಮೋರಿಯಲ್ ಫುಟ್‌ಬಾಲ್ ಫೈನಲ್ಸ್ ಪಂದ್ಯದಲ್ಲಿ ೩—೧ ಗೋಲುಗಳಿಂದ ಬಿ. ಯು. ಎಫ್. ಸಿ. ಯವರು "ಬೆಂಗಳೂರು ಬಾಯ್ಸ್"ರನ್ನು ಸೋಲಿಸಿದರು.

ಮೈಸೂರಿನ "ಸಾಧ್ವಿ" ಪತ್ರಿಕೆಯ ೫ನೆಯ ವಾರ್ಷಿಕೋತ್ಸವವು ಶ್ರೀ ಕೆ. ಟಿ. ಭಾಷ್ಯಂರವರ ಅಧ್ಯಕ್ಷತೆಯಲ್ಲಿ ಜುಲೈ ೨೦ರ ಸಂಜೆ ಸಾಧ್ವಿಯ ಕಾರ್ಯಾಲಯದಲ್ಲಿ ನಡೆಯಿತು. ಉತ್ಸವಕ್ಕೆ ನಗರದ ಪ್ರಮುಖ ಮಹಿಳೆಯರೂ ಮಹನೀಯರೂ ಆಗಮಿಸಿದ್ದರು.

ಪೌರ ಸಭಾಧ್ಯಕ್ಷರಾದ ಶ್ರೀ ಏ. ಜೆ. ಖಲೀಲರ ಅಧ್ಯಕ್ಷತೆಯಲ್ಲಿ ಜುಲೈ ೨೨ರಲ್ಲಿ ಬೆಂಗಳೂರ ನಗರ ಸಭೆಯು ಕೂಡಿ ಅಗಸ್ಟ ೧೫ರಲ್ಲಿ ಉತ್ಸವವನ್ನಾಚರಿಸಬೇಕೆಂದು ಮುಂತಾಗಿ ಗೊತ್ತುವಳಿಗಳನ್ನು ಸ್ವೀಕರಿಸಿತು.

ಬೆಂಗಳೂರ ಪೌರ ಸಭಾಸದಸ್ಯರಾದ ಶ್ರೀ ಎಂ. ಕೃಷ್ಣಸ್ವಾಮಿ ಪಿಳ್ಳೆಯವರಿಗೆ ಶ್ರೀ ಮನ್ಮಹಾರಾಜರವರಿತ್ತ ಸಾರ್ವಜನಿಕ ಸೇವಾ ಪದಕದ ಬಗ್ಗೆ ಮೆಚ್ಚುಗೆ ತೋರಿಸಲು ಬೆಂಗಳೂರ ಜಿಲ್ಲಾ ಸ್ಕೌಟ ಸಂಘದವರು ಜುಲೈ ೨೧ರಲ್ಲಿ ಸತ್ಕರಿಸಿದರು.

ಚಾಮರಾಜಪೇಟೆ ೧ನೆಯ ರಸ್ತೆಯಲ್ಲಿರುವ ಕಜೆಯರ ಸಂಘದ ವಿಶೇಷಸಭೆಯು ಜುಲೈ ೨೦ರಲ್ಲಿ ಸಂಘದ ಅಧ್ಯಕ್ಷರಾದ ಶ್ರೀ ಎಸ್. ಅಪ್ಪಣ್ಣನವರ ಅಧ್ಯಕ್ಷತೆಯಲ್ಲಿ ನಡೆಯಿತು.

ಬೆಂಗಳೂರು "ಸ್ವತಂತ್ರ ಕರ್ನಾಟಕ" ಕಾರ್ಯಾಲಯದಲ್ಲಿ ಜುಲೈ ೨೧ರಲ್ಲಿ ಕರ್ನಾಟಕ ಏಕೀಕರಣ ಕಾರ್ಯಕರ್ತರ ಸಭೆಯು ಮಾತೃಭೂಮಿಯ ಸಂಪಾದಕರಾದ ಶ್ರೀ ಎಂ. ಎಲ್ ಶ್ರೀ ಕಂಠಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು. ವ್ಯವಸ್ಥಾಪಕರಾದ ಶ್ರೀ ಶಿವಮೂರ್ತಿ ಶಾಸ್ತ್ರಿಗಳು ಸನ್ನಿಹಿತವಾದ ಪ್ರಾಂತರಚನೆಯ ಸಂಬಂಧದಲ್ಲಿ ಸೀಮಾರಕ್ಷಣೆಯ ಕಾರ್ಯಗಳನ್ನು ಕನ್ನಡಿಗರು ಕೈಕೊಳ್ಳಬೇಕೆಂದು ಮುಂತಾಗಿ ಹೇಳಿದರು.

ಮೈಸೂರು ಚೇಂಬರ್ ಆಫ್ ಕಾಮರ್ಸಿನ ಪರವಾಗಿ ಉಪಾಧ್ಯಕ್ಷರಾದ ಶ್ರೀ ಜಿ ಏ. ಆಚಾರ್ಯ, ಕಾರ್ಯದರ್ಶಿಗಳಾದ ಶ್ರೀ ಕೆ. ಶ್ಯಾಮ ಅಯ್ಯರ್ ಶ್ರೀ ಎಂ. ವಿ. ಕೃಷ್ಣಮೂರ್ತಿ ಮತ್ತು ಶ್ರೀ ಎಂ. ಶ್ರೀನಿವಾಸಾಚಾರ್ಯರವರು ಮೈಸೂರಲ್ಲಿ ಜುಲೈ ೨೩ ರಲ್ಲಿ ಅ. ಭಾ. ರೈಲ್ವೆ ವಿಚಾರಣೆಯ ಸಮಿತಿಯವರನ್ನು ಭೆಟ್ಟಿಮಾಡಿ ರೈಲ್ವೆ ಸುಧಾರಣೆಗಾಗಿ ಹಲವು ಸಲಹೆಗಳನ್ನುಳ್ಳ ಅರಿಕೆಯ ಪತ್ರವನ್ನು ಒಪ್ಪಿಸಿದರು.

ಬೆಂಗಳೂರಿನ ಶ್ರೀ ಮಲ್ಲಪ್ಪನವರು ವಿಶ್ವೇಶ್ವರಪುರದಲ್ಲಿರುವ ಅಶಕ್ತಪೋಷಕ ಸಭೆಗೆ ೨೦೦ ರೂಪಾಯಿಗಳನ್ನು ದಾನಮಾಡಿದರು.

ಪ್ರಜೆಗಳ ಅಭೀಷ್ಟ ಕೈಗೂಡದಿದ್ದರೆ ಸತ್ಯಾಗ್ರಹ!

ಮೈಸೂರ ಮುಂದಾಳುಗಳಾದ ಶ್ರೀ ಗೋಗಿಯವರ ಪ್ರಕಟನೆ

ಶಿವಮೊಗ್ಗದ ಜಿಲ್ಲಾ ಬೋರ್ಡ್ ಕಾಂಗ್ರೆಸ್ ಪಕ್ಷದ ಧುರೀಣರಾದ ಶ್ರೀ ವಾಸಪ್ಪ ಗೋಗ್ಗಿಯವರು ಈ ರೀತಿ ಪ್ರಕಟಿಸುತ್ತಾರೆ.

ಹಿಂದುಸ್ತಾನಕ್ಕೆ ಸ್ವಾತಂತ್ರ್ಯ ಸಿಕ್ಕಿತೆಂದು ಸಂತೋಷ, ತಮಗೆ ಸಿಗಲಿಲ್ಲವೆಂಬ ದುಃಖ—ಈ ರೀತಿ ಅಗಸ್ಟ ೧೫ ನ್ನು ಆಚರಿಸಬೇಕಾಗಿದೆ ಮೈಸೂರು ಪ್ರಜೆಗಳು.

ಮೈಸೂರು ಸಂಸ್ಥಾನವು ಹಿಂದೀ ಒಕ್ಕೂಟಕ್ಕೆ ಸೇರದಿರುವುದು, ನಡುಗಾಲ ಸರಕಾರ ರಚಿಸದಿರುವುದು—ಇವು ಪ್ರಜೆಗಳನ್ನು ಕ್ಷೋಭೆಗೊಳಿಸಿವೆ.

ಅಗಸ್ಟ ೧೫ ರೊಳಗೆ ಎಲ್ಲ ಪ್ರಾಂತಗಳಲ್ಲಿಯೂ ರಾಜಕೀಯ ಕೈದಿಗಳ ಬಿಡುಗಡೆಯ ಏರ್ಪಾಡು ನಡೆದಿದೆ. ನಮ್ಮ ಸಂಸ್ಥಾನದಲ್ಲಿ ಶ್ರೀ ಕೆ. ಹನುಮಂತಯ್ಯನವರನ್ನೂ ಮೈಸೂರು ಶ್ರವಣಬೆಳಗೊಳದ ರಾಜಕೀಯ ಕೈದಿಗಳನ್ನೂ ಬಿಡಬೇಕಾದುದು ಅತ್ಯಗತ್ಯ.

ಅಗಸ್ಟ ೯ ರಲ್ಲಿ ರಾಜಧಾನಿಯಲ್ಲಿ ಅ. ಮೈ. ಕಾಂ. ಕಮಿಟಿಯ ಅಧಿವೇಶನ ನಡೆಯಲಿದೆ. ನಮ್ಮ ಅಭೀಷ್ಟ ಅಷ್ಟರೊಳಗೆ ನೆರವೇರದಿದ್ದರೆ ಅಂದೇ ಸತ್ಯಾಗ್ರಹವನ್ನಾರಂಭಿಸಿ ಸೆರೆ ಮನೆಯಲ್ಲೇ ಅಗಸ್ಟ ೧೫ ನ್ನು ಆಚರಿಸುತ್ತ ಮಹಾರಾಜರಿಗೆ ಸದ್ಬುದ್ಧಿ ಬರಲೆಂದು ದೇವರನ್ನು ಪ್ರಾರ್ಥಿಸೋಣ. ಸತ್ಯಾಗ್ರಹವು ಅನಿವಾರ್ಯವೆನಿಸಿದರೆ ಅದಕ್ಕೆ ತನು ಮನಧನಗಳಿಂದ ಪ್ರಜೆಗಳು ಬೆಂಬಲ ಕೊಡಬೇಕೆಂದು ಪ್ರಾರ್ಥಿಸುತ್ತೇನೆ.

ಭಾರತ ಸರಕಾರದಲ್ಲಿ ಪ್ರಾಚೀನ ವಸ್ತು ಸಂಶೋಧನ ಶಾಖೆಯ ಮುಖ್ಯಾಧಿಕಾರಿಗಳಾಗಿರುವ ಡಾ. ಮಾರ್ಟಿಮರ್ ವೀಲರು ವಿಶ್ವವಿದ್ಯಾಲಯದ ಇತಿಹಾಸ ಸಂಘದ ಆಶ್ರಯದಲ್ಲಿ ಜುಲೈ ೨೦ರಲ್ಲಿ ಆರಂಭ ಭಾಷಣ ಮಾಡುತ್ತ ಮೈಸೂರು ಸಂಸ್ಥಾನದಲ್ಲಿರುವ ಪ್ರಾಚೀನ ವಸ್ತುಗಳ ಸಂಶೋಧನೆಯ ವಿಚಾರವಾಗಿ ಅನೇಕ ವಿವರಗಳನ್ನಿತ್ತರು.

ಕಾರ್ಯಕಾರಿ ಸಮಿತಿಯು ಸಿದ್ಧಗೊಳಿಸಿದಂತೆ ಬೆಂಗಳೂರು ನಗರ ಸಭೆಯು ೧೯೪೭-೪೮ನೆಯ ಸಾಲಿನ ಮುಂಗಡ ಪತ್ರಿಕೆಯನ್ನು ಜುಲೈ ೨೩ ರಲ್ಲಿ ಸೇರಿದ್ದ ಸಭೆಯಲ್ಲಿ ಅಂಗೀಕರಿಸಿ ಅದರೊಡನೆ ಸದಸ್ಯರು ಸೂಚಿಸಿದ ಕೆಲವು ನಿರ್ಣಯಗಳೂ ಸ್ವೀಕೃತವಾದವು.

ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯದರ್ಶಿಯವರು ಈರೀತಿ ಪ್ರಕಟಿಸುತ್ತಾರೆ.—

೧. ಸಂಭಾವನೆಗೆ ಗ್ರಂಥಗಳನ್ನು ಕಳುಹಿಸಬೇಕೆಂದು ಗೊತ್ತುಪಡಿಸಿದ್ದ ಅವಧಿಯನ್ನು ಜುಲೈ ೩೧ರಿಂದ ಅಗಸ್ಟ ೨೦ರ ವರೆಗೆ ಹೆಚ್ಚಿಸಿದೆ.


೨. ಪರಿಷತ್ತಿನ ಗಮಕ ತರಗತಿಗೆ ಸೇರಲಿಚ್ಛಿಸುವವರು ಸದಸ್ಯ ಇಲ್ಲವೆ ಅಭಿಮಾನಿಯಾಗಿರಬೇಕು. ಕನ್ನಡದಲ್ಲಿ ಪರಿಶ್ರಮ ಪಡೆದವರಿರಬೇಕು. ಮತ್ತು ಸಂಗೀತ ಸ್ವಲ್ಪ ತಿಳಿದಿರಬೇಕು.

೩. ಕನ್ನಡ ಸಾಹಿತ್ಯ ಪರೀಕ್ಷೆಗಳನ್ನು ಕನ್ನಡಾಭಿಮಾನಿಗಳು ತಮ್ಮ ತಮ್ಮ ಊರುಗಳಲ್ಲಿ ಸಾಹಿತ್ಯ ತರಗತಿಗಳ ಏರ್ಪಾಟಿನಲ್ಲಿ ಭಾಗವಹಿಸಿ ನಡೆಸಿಕೊಡಬೇಕಾಗಿ ಪ್ರಾರ್ಥನೆ.



ಜುಲೈ ೧೯ ರಲ್ಲಿ ಘಟನಾ ಸಮಿತಿಯ ಅಧ್ಯಕ್ಷರಾದ ಡಾ. ರಾಜೇಂದ್ರ ಪ್ರಸಾದರೊಡನೆ ಮೈಸೂರು ದಿವಾಣರಾದ ಸರ್ ಆರ್ಕಾಟ ರಾಮಸ್ವಾಮಿ ಮೊದಲಿಯಾರರು ಸದಸ್ಯತ್ವದ ಪುಸ್ತಕದಲ್ಲಿ ಸಹಿಮಾಡಿದ ಬಳಿಕ ಹಸ್ತಾಂದೋಲನ ಮಾಡುತ್ತಿರುವುದು.

ಈ ವಾರದ ಕತೆ



ಅನಂತರಾಯರು ತಮ್ಮ ಕೊನೆಯ ನಿರ್ಧಾರದ ಪತ್ರವನ್ನು ಬರೆದು ನಿಟ್ಟುಸಿರೊಂದನ್ನು ಬಿಟ್ಟರು. ಇಂದು ಅವರ ಮನದ ಹೊಯ್ದಾಟ ಕೊಂಚ ಶಮನವಾದಂತೆ ತೋರಿತವರಿಗೆ; ಗೃಹ ಕಲಹ ಸಮೂಲವಾಗಿ ನಾಶಮಾಡಲು ಹುಡುಕಿದ ಯೋಜನೆ ಯಶಸ್ವಿಯಾಗುವದೆಂಬ ಸಮಾಧಾನದಿಂದ ಅವರು ಸಹಜವಾಗಿ ಗಡಿಯಾರದ ಕಡೆಗೆ ದೃಷ್ಟಿ ಬೀರಿದರು. ಎರಡು ಗಂಟೆಯಾಗಿದ್ದಿತು. ಕಳೆದ ನಾಲ್ಕು ದಿನಗಳಿಂದ ಇಡೀ ರಾತ್ರಿ ಜಾಗರೂಕರಾಗಿಯೇ ಕಳೆದಿದ್ದರು. ಇನ್ನು ಮೇಲಾದರೂ ಹಾಯಾಗಿ ನಿದ್ದೆಮಾಡಬೇಕೆಂಬ ಹಂಬಲದಿಂದ ದೀಪ ಆರಿಸಿ ಪಲ್ಲಂಗದ ಮೇಲೆ ಒರಗಿದರು.

ರಾಯರು ಅತ್ತಿಂದಿತ್ತ, ಇತ್ತಿಂದತ್ತ ಉರುಳಾಡಿದರೇ ಹೊರತು, ಅವರಿಗೆ ನಿದ್ರಾದೇವಿ ವಶಳಾಗಲಿಲ್ಲ. ಕೊನೆಗೆ ನಿರುಪಾಯರಾಗಿ ಕತ್ತಲ್ಲಲ್ಲೇ ಕಣ್ಣು ತೆರೆದುಕೊಂಡು ಮನೆಯ ಗಳಗಳನ್ನು ಎಣಿಸತೊಡಗಿದರು. ಸ್ಮೃತಿಪಟಕ್ಕೆ ಬರದೆ ಇದ್ದ ಅವರ ಚಿತ್ತ ಕಳೆದ ವಾರ ಘಟಿಸಿದ ವಿಷಯವನ್ನು ಕುರಿತು ಮತ್ತೆ ವಿಚಾರ ಮಾಡಹತ್ತಿತು.

ಆ ದಿವಸ ರಾಯರು ಊಟಕ್ಕೆ ಕುಳಿತ ವೇಳೆಯಲ್ಲಿ ಅವರ ಪತ್ನಿ– ಕಮಲೆಯು ಮಾತಿಗಾರಂಭಿಸಿದ್ದಳು.

“ಸುಶೀಲೆಯ ಪತ್ರ ಬಂದಿದೆ.”

“ಯಾವ ಸುಶೀಲೆ?” ಅನಂತರಾಯರು ಕೇಳಿದ್ದರು.

“ಇಶ್ ಹೀಗೇಕೆ ಮಾಡುವಿರಿ. ಅವಳು ನನ್ನ ಜೀವದ ಗೆಳತಿಯಲ್ಲವೇ? ಈ ವರುಷ ಬಿ. ಎ ಪರೀಕ್ಷೆಗೆ ಕೂಡುವವಳಿದ್ದಾಳೆ” ಕಮಲೆ ಉತ್ತರವಿತ್ತಳು.

“ಓ! ಹೀಗೋ, ಏನೆಂದು ಬರೆದಿರುವಳು?”

“ಬರೆಯುವದೇನು?...... ಅಷ್ಟೇಕೆ ನೀವೇ ಅವಳ ಪತ್ರ ಓದಿದ್ದಿತಲ್ಲ”

ಕಮಲೆ ಅನಂತರಾಯರ ಕೈಗೆ ಪತ್ರವನ್ನಿತ್ತಳು. ರಾಯರು ಪತ್ರ ಓದುವ ವೇಳೆಯಲ್ಲಿ ಕಮಲೆಯ ದೃಷ್ಟಿ ರಾಯರ ವದನಾರವಿಂದದ ಕಡೆಗಿದ್ದಿತು. ಪತ್ರದ ಕೊನೆಯ ಭಾಗವನ್ನು ಓದಿ ರಾಯರು ಗಂಭೀರರಾದರು. ಸುಶೀಲೆ ಪತ್ರದ ಕೊನೆಯ ಭಾಗದಲ್ಲಿ ಬರೆದಿದ್ದಳು:—

“ಕಮಲಾ, ನನ್ನ ಪರಿಸ್ಥಿತಿಯ ಬಗ್ಗೆ ನಿನಗೆ ಹೊಸದಾಗಿ ಪರಿಚಯ ಮಾಡಿಕೊಡುವ ಕಾರಣವಿಲ್ಲ. ಇನ್ನೂ ಪರೀಕ್ಷೆಗೆ ಮೂರು ತಿಂಗಳ ಅವಧಿ ಇದೆ ಎಂಟು ದಿನಗಳೊಳಗಾಗಿ ಪರೀಕ್ಷೆಯ ಫೀ ಎಪ್ಪತ್ತೈದು ರೂಪಾಯಿ ತುಂಬಿದಹೊರತು ಗತ್ಯಂತರವಿಲ್ಲ. ಸದ್ಯಕ್ಕೆ ನನ್ನ ಹತ್ತಿರ ವಿಷ ತೆಗೆದುಕೊಳ್ಳಲು ಒಂದು ಪೈಸಹ ಇಲ್ಲ. ನಿನ್ನ ಹೊರತು ನಾನು ಮತ್ತಾರ ಹತ್ತಿರ ಹೋಗಿ ಬೇಡಲಿ? ಸುದೈವದಿಂದ ನಿನಗೆ ಒಳ್ಳೆಯ ಪತಿ ದೊರೆತಿರುವರು. ಇಂದು ನೀನು ಸಮರ್ಥಳಿರುವೆ. ಇಂತಹ ವೇಳೆಯಲ್ಲಿ ಸಹಾಯ ಮಾಡಿದರೆ ಬಹಳ ಉಪಕಾರ ಮಾಡಿದಂತಾಗುವದು. ನಾನು ಬಿ. ಎ. ಪಾಸಾದ ನಂತರ ಎಲ್ಲಿಯಾದರೂ ಶಿಕ್ಷಕಿಯ ಕೆಲಸ ಮಾಡಿ ನಿನ್ನ ಹಣ ನಿನಗೆ ಮುಟ್ಟಿಸುವೆ. ಹೆಚ್ಚಿಗೆ ಏನು ಬರೆಯಲಿ? ನನಗೆ ಸಹಾಯ ಮಾಡುವೆಯೆಂದು ಪೂರ್ಣ ನಂಬಿರುವೆ. —ನಿನ್ನ ಸುಶಿ

ಅನಂತರಾಯರು ಮೌನವೃತ್ತಿ ತಾಳಿದುದನ್ನು ಕಂಡು ಕಮಲೆ ಅಳುತ್ತ ಕೇಳಿದಳು. “ಹಾಗಾದರೆ— ಏನು ವಿಚಾರ ಮಾಡಿದಿರಿ?”

“ನಿನ್ನ ವಿಚಾರವೇನಿದೆ?”

“ಕಳುಹಿಸಿದರಾಯಿತು. ನಂತರ ಅವಳು ಮುಟ್ಟಿಸುವಳು. ಇಂತಹ ವೇಳೆಯಲ್ಲಿ ಅವಳ ಆಶೆ ನಿರಾಶೆ ಮಾಡಕೂಡದು.” “ಕಮಲಾ” ತುಸು ತಡೆದು ರಾಯರು ಮಾತಿಗಾರಂಭಿಸಿದರು. “ನಿನಗೆ ವ್ಯವಹಾರಜ್ಞಾನವಿಲ್ಲ. ಬಂಧುಬಳಗದವರಿಗೆ ಹಾಗೂ ಗೆಳತಿಯರಿಗೆ ಕೊಟ್ಟ ಹಣ ಎಂದಾದರೂ ತಿರುಗಿಬರುವ ಸಂಭವವಿದೆಯೆ? ನನ್ನ ಹಣ ನಿನ್ನ ಸಲುವಾಗಿ ಇದೆ. ನನ್ನ ಮಕ್ಕಳ ಸಲುವಾಗಿ ಇದೆ. ಮಂದಿಯ ಸಲುವಾಗಿ ಇಲ್ಲ ತಿಳಿಯಿತೇ? ನೀನು ಸುಶಿಕ್ಷಿತಳಿರುವೆ. ಅವಳ ಬೇಡಿಕೆಯನ್ನು ಹೇಗಾದರೂ ಮಾಡಿ ನಿರಾಕರಿಸಿದರಾಯಿತು.”

ರಾತ್ರಿ ರಾಯರು ಕ್ಲಬ್ಬಿನಿಂದ ಬಂದ ವೇಳೆಯಲ್ಲಿ ಮಧ್ಯಾನ್ಹದ ಪ್ರಕರಣವನ್ನು ಮರೆತಿದ್ದರು. ಆದರೆ ಕಮಲೆಗೆ ಮಾತ್ರ ಮರೆಯಲು ಅಸಾಧ್ಯವಾಯಿತು. ಅಂದಿನ ಇಡೀ ದಿನವೂ ಅಸ್ವಸ್ಥತೆಯಲ್ಲೆ ಕಳೆದಿದ್ದಳು. ಅವಳ ಜೀವದ ಗೆಳತಿಯ ಆಶೆ ಈಡೇರಿಸದಿರುವುದು ಅವಳಿಗೆ ಕೆಡುಕೆನಿಸಿತು! ಕಮಲೆಯ ಹೆಸರಿನ ಮೇಲೆ ಬ್ಯಾಂಕಿನಲ್ಲಿ ಹಣವಿದ್ದಿತು. ಮನೆಯ ತಿಜೋರಿಯ ಬೀಗದ ಕೈ ಅವಳ ಹತ್ತಿರವಿದ್ದಿತು. ಆದರೆ ಪತಿದೇವರ ಅಜ್ಞೆ ಇಲ್ಲದೆ ಆ ಹಣ ವಿನಿಯೋಗಿಸುವಂತಿರಲಿಲ್ಲ; ಅರ್ಥಾತ್ ಅವಳಿಗೆ ಅರ್ಥಿಕ ಸ್ವಾತಂತ್ರ್ಯವಿದ್ದಿರಲಿಲ್ಲ. ಕಾರಣ ಆ ಹಣ ಅವಳದಿದ್ದಿರಲಿಲ್ಲ. ಅನೇಕ ಸಲ ಸುಶೀಲೆಗೆ ಮನಿ ಅರ್ಡರ ಮಾಡುವ ವಿಚಾರ ಬಂದಿದ್ದಿತು. ಆದರೆ... ಅನಂತರಾಯರು......

“ನಿಜವಾಗಿಯೂ ಈಗಲಾದರೂ ಹೇಳಿರೆಂದ್ರೆ ಸುಶೀಲೆಗೆ ಹಣ ಕಳುಹಲೋ ಬೇಡೋ? ರಾತ್ರಿ ಮನೆಗೆ ಬಂದ ಕೂಡಲೇ ಕಮಲೆ ಮತ್ತೊಮ್ಮೆ ವಿಚಾರಿಸಿದಳು.

“ನಾನು ಮಧ್ಯಾಹ್ನವೇ ಹೇಳಿದೆನಲ್ಲ, ನನ್ನ ವಿಚಾರ” ರಾಯರು ನುಡಿದರು.

“ಸರಿ” ಕಮಲೆ ಸಿಡಿಸಿಡಿಯಾಗಿ ನುಡಿದಳು. “ಅದು ನನಗೆ ಗೊತ್ತಿದೆ” ಅವಳ ಸ್ವರ ಕ್ಷೀಣವಾಯಿತು. “ಬ್ಯಾಂಕಿನಲ್ಲಿಯ ಹಣ ನನ್ನ ಸಲುವಾಗಿ ಇದೆ. ಆದರೆ ಅದನ್ನು ನಾನು ವೆಚ್ಚ ಮಾಡುವಂತಿಲ್ಲ. ಕಾರಣ ಆ ಹಣ ನಾನು ಸಂಪಾದಿಸಿದುದಲ್ಲ. ನನ್ನದೇನಿದೆ ಅದರ ಮೇಲೆ ಅಧಿಕಾರ?” ಕೋಪದಿಂದ ಬಡಬಡಿಸತೊಡಗಿದಳು ಕಮಲೆ.

“ಸುಮ್ಮ ಸುಮ್ಮನೆ ಒದರಾಡಿ ತಲೆ ಕೆಡಿಸಿಕೊಳ್ಳಬೇಡ” ರಾಯರೂ ಸಿಟ್ಟಿನಿಂದ ನುಡಿದರು.

“ಹಾಗಾದರೆ ಏನು ಮಾಡಲಿ”? ಅಳುತ್ತ ಕೇಳಿದಳು ಕಮಲೆ. ತದನಂತರ ಅವರೀರ್ವರಲ್ಲಿ ಬಹಳ ವೇಳೆಯ ವರೆಗೆ ವಾದವಿವಾದವಾಗಿ ಅದು ಕೊನೆಗೆ ಕಮಲೆಯ ಅಶ್ರುಬಿಂದುವಿನೊಂದಿಗೆ ಪರಿಸಮಾಪ್ತಿಯಾಯಿತು. ಅವಳು ತೌರುಮನೆಗೆ ಹೋಗುವ ಹಟ ಹಿಡಿಯಲು ಅನಂತರಾಯರು ಸಿಟ್ಟಿನ ಭರದಲ್ಲಿ ಮರುದಿನವೇ ಕಳುಹಿಸಿದರು.

ಎರಡು ಮೂರು ದಿವಸಗಳ ನಂತರ ಅನಂತರಾಯರಸಿಟ್ಟು ಇಳಿಯಿತು. ಆವೇಳೆಮತ್ತೆ ಅವರಿಗೆ ಕಮಲೆಯ ನೆನಪಾಗತೊಡಗಿತು. ಅವಳ ಹಸ್ತದಿಂದ ರುಚಿಯಾದ ಚಹ ಸಿಗದಿರದ ಮೂಲಕ ಅವರಿಗೆ ದಣಿವಾದಂತೆ ಭಾಸವಾಗತೊಡಗಿತು. ವಿದ್ಯಾವತಿ, ಸದ್ಗುಣಿಯಾದ ಪತ್ನಿಗೆ ವಿನಾಕಾರಣವಾಗಿ ತೊಂದರೆ ಕೊಟ್ಟುದರ ಬಗ್ಗೆ ಅವರಿಗೆ ಪಶ್ಚಾತ್ತಾಪವಾಗತೊಡಗಿತು. ಕಮಲೆಗೆ ಆದ ಅನ್ಯಾಯದ ದಂಡ ಯಾವ ವಿಧದಿಂದ ತೆರಬೇಕೆಂಬ ವಿಚಾರ ಎಷ್ಟು ವಿಚಾರ ಮಾಡಿದರೂ ಬಗೆ ಹರಿಯದಾಯಿತು. ಅಂತೆಯೇ ಅವರು ಮೂರು ನಾಲ್ಕು ದಿನಗಳಿಂದ ರಾತ್ರಿ ಜಾಗರೂಕರಾಗಿಯೇ ಕಳೆದರು. ಕೊನೆಗೆ ಸ್ತ್ರೀಯರ ಪರಾವಲಂಬಿತನವನ್ನು ನಷ್ಟ ಮಾಡಲು ಒಂದು ಉಪಾಯವನ್ನು ಹುಡುಕಿತೆಗೆದರು. ಅದೇ ಆ ಕೊನೆಯ ನಿರ್ಧಾರದ ಪತ್ರವನ್ನು ಬರೆದು ಒಂದು ನಿಟ್ಟುಸಿರುಬಿಟ್ಟರು. ನಾಳೆಯೇ ಕಮಲೆಯನ್ನು ಕರೆತರಬೇಕೆಂಬ ವಿಚಾರದಲ್ಲಿರುವಾಗಲೇ ಅವರು ನಿದ್ರಾದೇವಿಗೆ ವಶವಾದರು.

x x x x

ಬೆಳಿಗ್ಗೆ ಬಾಗಿಲು ಬಡಿವ ಸಪ್ಪಳದಿಂದ ರಾಯರು ಎಚ್ಚತ್ತರು. ಕಿಟಕಿಯಿಂದ ಸೂರ್ಯನ ಪ್ರಕಾಶವು ಒಳಗೆ ಬಿದ್ದಿದ್ದಿತು. ಹಾಲಿನವನು ಬಂದಿರಬಹುದೆಂದು ವಟಗುಟ್ಟುತ್ತ ಅವರು ಬಾಗಿಲ ತೆರೆದರು. ಆನಂದ ಹಾಗೂ ಆಶ್ಚರ್ಯದಿಂದ ಅವರು ಸ್ವಲ್ಪ ಹಿಂದೆ ಸರಿದರು. ಆರಾಧ್ಯ ದೇವತೆ ಮನೆಗೆ ಹಿಂತಿರುಗಿ ಬಂದಿದ್ದಳು. ಕುರುಡ ಒಂದು ಕಣ್ಣು ಬೇಡಿದರೆ, ದೇವರು ಎರಡು ಕೊಟ್ಟಂತೆ ಅನಂತರಾಯರ ಸ್ಥಿತಿಯಾಯಿತು. ಅವರು ಉದ್ವೇಗದಿಂದ ಅರುಣನನ್ನು ಎತ್ತಿಕೊಂಡು ಕಮಲೆಯ ಕಡೆಗೆ ದೃಷ್ಟಿ ಬೀರಿದರು. ಮುಗುಳು ನಗೆ ನಕ್ಕರು. ಇಬ್ಬರ ದೃಷ್ಟಿ ಕೂಡಿತು. ಎರಡು ಹೃದಯಗಳು ಮತ್ತೆ ಒಂದಾದವು.

“ಒಬ್ಬಿಂದೊಮ್ಮೆ ಹೇಗೆ ಬಂದೆ?” ಅನಂತರಾಯರು ಕೇಳಿದರು.

“ಮತ್ತೆ ಎಷ್ಟು ದಿನ ಇರಬೇಕು ತೌರುಮನೆಯಲ್ಲಿ?”

“ನಾನು ನಿನ್ನ ಕರೆತರಲು ಈ ದಿವಸ ಅಲ್ಲಿಗೆ ಬರುವವನಿದ್ದೆ”

“ಇರಬಹುದು,” ಕಮಲೆ ಮುಖ ತಿರುವಿ ಅವಿಶ್ವಾಸದ ಚಿಹ್ನೆ ವ್ಯಕ್ತಪಡಿಸಿದಳು.

“ನಿಜವಾಗಿಯೂ, ದೇವರಾಣೆಗೂ ಸುಳ್ಳಲ್ಲ” ಅನಂತರಾಯರು ಮುಂದುವರಿಸಿದರು. ನೀನು ಹೋದ ನಂತರ ನನಗೆ ಹೇಗೆಹೇಗಾಯಿತೆಂಬುದನ್ನು ನಾನು ಹೇಗೆ ವಿವರಿಸಲಿ? ಅನಂತರಾಯರು ಖಿನ್ನ ಮನಸ್ಕರಾಗಿ ನುಡಿಯುತ್ತ “ಮತ್ತೆ ಹೀಗಾಗಕೂಡದೆಂದು ಈ ವಿಚಾರವನ್ನು ಮಾಡಿರುವೆ ನೋಡು.”

ಅನಂತರಾಯರು ಒಂದು ಕಾಗದವನ್ನು ಕಮಲೆಯ ಕೈಗಿತ್ತರು. ಕಮಲೆ ಆತುರದಿಂದ ಎಲ್ಲವನ್ನೂ ಓದಿ ನೋಡಿ, “ಇಶ್, ಇದೇನಿದು? ಮನೆಯನ್ನು ವ್ಯವಸ್ಥಿಯಾಗಿ ಇಟ್ಟುಕೊಳ್ಳಲು ತಿಂಗಳಿಗೆ ೧೫ ರೂಪಾಯಿ ಸಂಬಳ. ಮಕ್ಕಳನ್ನು ಪೋಷಿಸುವ ಜವಾಬದಾರಿಯ ಪ್ರತಿಫಲ ೧೫ ರೂಪಾಯಿ, ಹಾಗೂ ನನ್ನ ಪ್ರೈವೇಟ್ ಸೆಕ್ರೆಟರಿ ಎಂದು ತಿಂಗಳಿಗೆ ೨೦ ರೂಪಾಯಿ ಸಂಬಳ–ಹೀಗೆ ತಿಂಗಳಿಗೆ ಒಟ್ಟು ೫೦ ರೂಪಾಯಿ. ನಾವೊಲ್ಲೆ ಹೋಗಿರಿ” ಕಮಲೆ ಅಸಮ್ಮತಿಯನ್ನು ವ್ಯಕ್ತಪಡಿಸಿದಳು.

“ಏ! ಇದರಲ್ಲಿ ಅಂತಹದೇನಿದೆ? ವಿವಾಹಿತ ಸ್ತ್ರೀಯರ ಅರ್ಥಿಕ ಪಾರತಂತ್ರ್ಯವನ್ನು ದೂರಮಾಡಲು ಇದೊಂದೇ ಮಾರ್ಗವಿದೆ” ಅನಂತರಾಯರು ತಮ್ಮ ನಿರ್ಧಾರವನ್ನು ಸಮರ್ಥಿಸಲು ಯತ್ನಿಸಿದರು. ಕೊನೆಗೆ ಕಮಲೆಗೆ ಅನಂತರಾಯರ ನಿರ್ಧಾರವನ್ನು ಒಪ್ಪಿಕೊಂಡಹೊರತು ಗತ್ಯಂತರವಿರಲಿಲ್ಲವೆನಿಸಿತು. ಅಲ್ಲದೆ ಅನಂತರಾಯರಿಗೆ ಒಂದು ತರಹದ ಆನಂದ ಉಂಟಾಗುವುದೆಂದು ಬಗೆದು ಅದರಂತೆ ಒಂದು ವೇಳೆ ನಡೆಯದಿದ್ದರೆ ಎಲ್ಲಿ ಮತ್ತೆ ಕ್ಲೇಶ ಉಂಟಾಗುವುದೋ ಎಂಬ ಅಳುಕಿನಿಂದ ತನ್ನ ಸಮ್ಮತಿಯನ್ನು ವ್ಯಕ್ತಪಡಿಸಿದಳು.

ಅರುಣೋದಯವಾದ ಕೂಡಲೇ ಪಕ್ಷಿಗಳ ಮಧುರವಾದ ಇಂಚರ ಪ್ರಾರಂಭವಾಯಿತು. ಮುಂಜಾನೆ ತಿರುಗಾಡಲು ಹೋಗುವವರ, ಹಾಗೂ ಹೋಗುವವರನ್ನು ನೋಡಲು ಧಾವಿಸುವವರ ಗದ್ದಲ ಅಧಿಕವಾಗತೊಡಗಿತು. ಸೂರ್ಯೋದಯವಾಗತೊಡಗಿತು. ಎಂದಿನಂತೆ ಕಾಲೇಜಿನ ವಿದ್ಯಾರ್ಥಿ, ವಿದ್ಯಾರ್ಥಿನಿಯರು ಕೈಯಲ್ಲಿ ರ್‍ಯಾಕೆಟ್ ಹಿಡಿದುಕೊಂಡು ಬ್ಯಾಡ್‌ಮಿಂಟನ್ ಆಡಲು ಹೊರಬಿದ್ದರು. ಹಾಲು ಮಾರುವವನು ನಿತ್ಯದಂತೆ ಸರಿಯಾದವೇಳೆಗೆ ಕಮಲೆಯ ಮನೆಗೆ ಹಾಲು ತೆಗೆದುಕೊಂಡು ಬಂದನು. ಎಂದಿನಂತೆ ಅನಂತರಾಯರು ಮುಂಜಾನೆ ೮ ಗಂಟೆಗೆ ಎದ್ದರು. ಎಲ್ಲವೂ ಎಂದಿನಂತೆ ಸಾಗಿದ್ದಿತು. ಸೃಷ್ಟಿಕರ್ತನ ಹಾಗೂ ಜನರ ವ್ಯವಹಾರದಲ್ಲಿ ಯಾವ ಬದಲಾವಣೆಯೂ ಆಗಿರಲಿಲ್ಲ. ಆದರೆ ಕಮಲೆಗೆ ಮಾತ್ರ ಆ ದಿನ ಎಂದಿನಂತೆ ಭಾಸವಾಗಲಿಲ್ಲ.

ಅವಳು ಅನಂತರಾಯರಿಗೆ ಚಹವಿತ್ತಳು. ಆದರಲ್ಲಿ ತನ್ನದೆಂಬ ಅಭಿಮಾನ ಹುಟ್ಟಲಿಲ್ಲ. ತನ್ನ ಮುದ್ದು ಕಂದ, ತನ್ನ ಮನೆ, ಅನಂತರಾಯರು ಎಲ್ಲರೂ ತನ್ನಿಂದ ದೂರ ದೂರ ಹೋಗುತ್ತಿರುವರೆಂದು ಅವಳಿಗೆ ಭಾಸವಾಯಿತು. ಅಂದಿನ ಇಡೀ ದಿನ ಅವಳಿಗೆ ಯಾವದೂ, ತೋಚದಂತಾಗಿ ಅದರಿಂದ ಅಸ್ವಸ್ಥಳಾದಳು. ಆ ದಿನ ಸುಶೀಲೆಗೆ ಹಣ ಕಳುಹಲು ಆಗಲಿಲ್ಲವಾದ್ದರಿಂದ ಅಸ್ವಸ್ಥಳಾಗಿದ್ದಳು. ಆದರೆ ಇಂದಿನ ಅಸ್ವಸ್ಥತೆ ಅಂದಿಗಿಂತಲೂ ಇಮ್ಮಡಿಯಾದಂತೆ ಭಾಸವಾಯಿತವಳಿಗೆ. ಜಗತ್ತಿನಲ್ಲಿ ತನ್ನವರೆಂಬುವರು ಯಾರೂ ಇಲ್ಲ, ಹಾಗೂ ತಾನು ಯಾರ ಸಲುವಾಗಿಯೂ ತ್ಯಾಗ ಮಾಡಲಿಲ್ಲವಲ್ಲ ಎಂಬ ಕಳಕಳಿಯಿಂದ ತನ್ನ ಆಯುಷ್ಯ ವ್ಯರ್ಥವೆಂದು ಅವಳು ಬಗೆದಳು.

ಅನಂತರಾಯರು ಆಫೀಸಿನಿಂದ ಬಂದ ಕೂಡಲೇ ಅವರ ಮುಂದೆ ಚಹದ ಕಪ್ಪು ಬರುವ ರೂಢಿಯಿದ್ದಿತು. ಅಂದು ಕಮಲೆ ಚಹದ ಬದಲು ನೋಟುಗಳನ್ನು ಮುಂದೆ ಒಗೆದ ಕೂಡಲೆ ರಾಯರು ಆವಾಕ್ಕಾದರು. ಅವರು ಮಾತನಾಡಬೇಕೆಂಬಷ್ಟರಲ್ಲಿಯೇ— “ಇಗೋ ತೆಗೆದುಕೊಳ್ಳಿ, ನಿಮ್ಮೀ ಐವತ್ತು ರೂಪಾಯಿಗಳನ್ನು” ಕಮಲೆ ಮಾತಿಗಾರಂಭಿಸಿದಳು. “ಇವೇ ಇಂದು ನನ್ನನ್ನು ಮನುಷ್ಯಳನ್ನಾಗಿ ಮಾಡಿವೆ. ನಿಮಗೆ ಹೇಗೆ ಅನಿಸುವದು? ಮನೆಯ ಪೂರ್ಣ ಜವಾಬದಾರಿ ಹೊತ್ತ ಗೃಹಿಣಿ ತನ್ನ ಕಷ್ಟದ ಪ್ರತಿಫಲ ಆರ್ಥಿಕ ಸ್ವರೂಪದಿಂದ ಅಪೇಕ್ಷಿಸುವಳೇ? ಮಕ್ಕಳನ್ನು ಪೋಷಿಸಲು ಸಂಬಳವೇ? ಆ ಮಕ್ಕಳು ಅವಳವೂ ಅಲ್ಲವೇ? ತಿಂಗಳಿಗೆ ವೇತನ ಪಡೆಯಲು ಅವಳೇನು ನೌಕರಳೇ? ಹೀಗೆ ಪ್ರತಿಯೊಂದಕ್ಕೂ ಪ್ರತಿಫಲ ಕೊಡುವದಿದ್ದರೆ, ಸ್ತ್ರೀ ಮಾನವನ ಕಾಮ ವಾಸನೆಯನ್ನು ತೃಪ್ತಿಗೊಳಿಸುವಳು ಎಂದು ವೇಶ್ಯೆಗೆ ಕೊಡುವ ಸಂಭಾವನೆ ಅವಳಿಗೂ ಕೊಡಬೇಕಾಗುವದು. ಅಂದ ಮೇಲೆ ನೀವು ಸ್ತ್ರೀಯರಿಗೆ ಹೀಗೆ ಬೆಲೆ ಕಟ್ಟುವಿರಾ? ಸ್ತ್ರೀಯ ಆಯುಷ್ಯ ತ್ಯಾಗಭರಿತವಾಗಿದೆ. ಸ್ತ್ರೀ ಮಾತೆಯಾಗಿ ಮಕ್ಕಳ ಸಲುವಾಗಿ ತ್ಯಾಗ ಮಾಡುವಳು, ಪತ್ನಿಯಾಗಿ ಪತಿಯ ಸಲುವಾಗಿ ತ್ಯಾಗ ಮಾಡುವಳು, ಗೃಹಿಣಿಯಾಗಿ ಕುಟುಂಬದ ಸಲುವಾಗಿ ತ್ಯಾಗ ಮಾಡುವಳು. ಹೀಗೆ ಅವಳ ಪ್ರತಿಯೊಂದು ಕೆಲಸದಲ್ಲೂ ತ್ಯಾಗ ತುಂಬಿತುಳುಕಾಡುತ್ತದೆ. ಈ ತ್ಯಾಗದಿಂದಲೇ ಅವಳು ಸಮಾಧಾನದ ಪರಮಾವಧಿ ಹೊಂದುವಳು. ಭಾರತ ಮಹಿಳೆಯರಿಗೆ ತ್ಯಾಗಕ್ಕಿಂತ ಅಧಿಕವಾದ ವಸ್ತು ಯಾವುದಿಲ್ಲ. ನಮಗೆ ಕೇವಲ ಕುಟುಂಬದ ಪ್ರೇಮ, ಪತಿಯ ಮಮತೆ ಇದ್ದರೆ ಸಾಕು. ಮನೆಯ ಹೊಣೆಯ ಸಲುವಾಗಿ ಅದರ ಪ್ರತಿಫಲ ಆರ್ಥಿಕ ಸ್ವರೂಪದಿಂದ ತೆಗೆದುಕೊಂಡರೆ ನಮಗೆ ಸರಿ ಬೀಳುವುವೆಂತು?” ಕಮಲೆಯ ಆವೇಶಪೂರ್ಣವಾದ ಭಾಷಣದಿಂದ ಅನಂತರಾಯರು ಸ್ತಬ್ಧರಾದರು. ಅವರಿಗೆ ಕಮಲೆಯ ವಿಷಯವಾಗಿ ಆದರ, ಅಭಿಮಾನ, ಉತ್ಪನ್ನವಾಯಿತು. ಅವರು ಹರುಷದಿಂದ ಅವಳನ್ನು ಬರಸೆಳೆದು ಅಪ್ಪಿಕೊಂಡು ಬೆನ್ನಿನ ಮೇಲೆ ಪ್ರೇಮಪೂರ್ವಕವಾಗಿ ಕೈಯಾಡಿಸುತ್ತ ಗುಣುಗುಟ್ಟಿದರು, “ಗೃ...ಹಿ...ಣಿ...ೀ”.



ಜ್ಯೋತಿಷಿ:-ಕೃಷ್ಣಶಾಸ್ತ್ರಿ ಭಿಡೆ, ಭವಿಷ್ಯಕಥನ ಆಫೀಸ ಖಡೇಬಜಾರ ಬೆಳಗಾವಿ

ಅಗಸ್ಟ ೪ ರಿಂದ ೧೦ ರ ವರೆಗೆ

ಮೇಷ

ನಿಮ್ಮ ಮತ್ತು ಹೆಂಡತಿಯ ಪ್ರಕೃತಿ ಉತ್ತಮ. ಆದರೆ ಆಪ್ತಜನರಲ್ಲಿ ಮನಃಸಮ್ಮಿಲನ ಕಡಮೆ. ಮಕ್ಕಳಿಂದ ಅಪ್ರಿಯ ವರ್ತನ. ಎಲ್ಲ ಪ್ರಾಪಂಚಿಕ ವಿಷಯಗಳಲ್ಲಿ ಮಾಡಿದ ವಿಚಾರಗಳಿಗೆ ವಿರುದ್ಧವಾಗಿಯೇ ನಡೆಯಬೇಕಾದ ಪ್ರಸಂಗ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಬಹಳ ಉತ್ತಮ. ಆದರೆ ಸಂಗ್ರಹದಲ್ಲಿ ಕೆಲವೊಂದು ಆಶ್ಚರ್ಯಕಾರಕ ಕಾರಣದಿಂದ ಬಹಳ ಹಾನಿ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಬಹಳ ಅನುಕೂಲತೆ. ಮಿತ್ರರಲ್ಲಿ ಕ್ಲೇಶ. ಪ್ರವಾಸ ಮತ್ತು ಪತ್ರವ್ಯವಹಾರ ಭೆಟ್ಟಿಗಿಂತ ಹೆಚ್ಚು ಅನುಕೂಲ. ಅಶ್ವಿನಿಯ ಕೊನೆಯ ೩ ಮತ್ತು ಭರಣಿಯ ೧ ನೇ ಚರಣಕ್ಕೆ ತೊಂದರೆ ಹೆಚ್ಚು. ತಾ. ೪, ೮, ೯ ಅನುಕೂಲ.

ವೃಷಭ

ಪ್ರಕೃತಿ ಉತ್ತಮ ಆದರೆ ಹೆಂಡತಿಗೆ ಸ್ವಲ್ಪ ಕ್ಲೇಶ ಅಲ್ಲದೆ ನಿಮ್ಮಲ್ಲಿ ಕಲಹ ವಿಶೇಷವಾಗುವದರಿಂದ ಜನರಲ್ಲಿ ನಗೆಗೇಡು. ಆದರೂ ಕುಟುಂಬದ ಭಾವೀ ಉತ್ಕರ್ಷಕ್ಕೆ ಪೋಷಕವಾಗುವಂಥ ಕೆಲ ಮಾತು ನಿಶ್ಚಯವಾಗಿ ಸಂಭವಿಸುವ ಯೋಗ. ಪ್ರಿಯಜನರ ಸಹವಾಸ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಉತ್ತಮ. ಮಿತ್ರತ್ವದಲ್ಲಿ ಬಹಳ ಒಡಕು. ಬಂಧುವರ್ಗದವರ ಗೂಢ ವಿರೋಧ- ವೇಳೆಯವರಿಂದ ಮನಸ್ಸಿಗೆ ಬಂದಂತೆ ದಂಭಾಚಾರ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉಭಯ ಪಕ್ಷಗಳಲ್ಲಿ ಸಮಾನ ಸ್ಥಿತಿ. ಪ್ರವಾಸ ಮತ್ತು ಭೆಟ್ಟಿಗಿಂತ ಪತ್ರವ್ಯವಹಾರ ಹೆಚ್ಚು ಅನುಕೂಲ. ರೋಹಿಣಿಯ ಕೊನೆಯ ೩ ಮತ್ತು ಮೃಗಾದ ೧ನೇ ಚರಣಕ್ಕೆ ತೊಂದರೆ ಕಡಮೆ. ತಾ. ೬, ೭, ೧೦ ಅನುಕೂಲ.

ಮಿಥುನ

ಪ್ರಕೃತಿ ಮತ್ತು ಸ್ತ್ರೀಸುಖ ಉತ್ತಮ. ಕುಟುಂಬದಲ್ಲಿಯ ಇತರರೊಡನೆ ಸ್ವಲ್ಪ ಕಲಹ ನಡೆದೆ ಇದ್ದರೂ ಬಹಳ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಉತ್ತಮ ಉದ್ಯೋಗದಲ್ಲಿ ಪ್ರಗತಿ ಮತ್ತು ಪ್ರತಿಷ್ಠೆ ಕಷ್ಟಸಾಧ್ಯ ಲಾಭ ತುಂಬ. ಹಳೆಯ ಮಿತ್ರರಿಂದ ಕೆಲವೊಂದು ಮಹತ್ವದ ಮಾತಿನಲ್ಲಿ ಒಳ್ಳೆ ಸಹಾಯ ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಒಳ್ಳೆ ಯಶಸ್ಸು. ಸ್ವಲ್ಪ ಅವಚಿತ ಲಾಭದ ಸಂಭವ. ಪ್ರವಾಸ ಮತ್ತು ಭೆಟ್ಟಿ ಮಧ್ಯಮ ಆದರೆ ಪತ್ರವ್ಯವಹಾರ ಉತ್ತಮ. ಆರಿದ್ರೆಯ ಕೊನೆಯ ೩ ಮತ್ತು ಪುನರ್ವಸುವಿನ ೧ ನೇ ಚರಣಕ್ಕೆ ತೊಂದರೆಯಿಂದಲೆ ಯಶಸ್ಸು. ತಾ. ೬—೭—೮—೯ ಅನುಕೂಲ.

ಕರ್ಕ

ಪ್ರಕೃತಿಗೆ ಸ್ವಲ್ಪ ಕ್ಲೇಶ ರತಿಸುಖ ಅನುಕೂಲ. ಆದರೆ ಉಳಿದ ಎಲ್ಲ ವಿಷಯಗಳಲ್ಲಿ ಹೆಂಡತಿ ಕಾಡಿಸಿಯಾಳು. ಮಕ್ಕಳಿಂದ ದುಃಸಹವರ್ತನೆ ಉದ್ಯೋಗದಲ್ಲಿ ಪ್ರಗತಿ ಮತ್ತು ಲಾಭ ಉತ್ತಮ ಆದರೆ ಪ್ರತಿಷ್ಠೆ ಕಡಮೆ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಹಿಮ್ಮೆಟ್ಟುವದು. ಭೆಟ್ಟಿ ಏತಕ್ಕೂ ಬಾರದು. ಆದರೆ ಪ್ರವಾಸ ಅನುಕೂಲ. ಪತ್ರವ್ಯವಹಾರ ವಿಶೇಷ ಗೊಂದಲದ್ದು. ಪುಷ್ಯದ ಕೊನೆಯ ೩ ಮತ್ತು ಅಶ್ಲೇಷಾದ ೧ ನೇ ಚರಣಕ್ಕೆ ಹೆಚ್ಚು ತೊಂದರೆ. ತಾ. ೬—೭—೮—೧೦ ಅನುಕೂಲ.

ಸಿಂಹ

ಪ್ರಕೃತಿಯು ಬಹಳ ಕೆಡುವ ಅಂಜಿಕೆ. ಹೆಂಡತಿಗೂ ಅದೇ ಅಂಜಿಕೆ ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಸಾಧಾರಣ ಅನುಕೂಲ. ಉದ್ಯೋಗದಲ್ಲಿ ಪ್ರಗತಿ ಉತ್ತಮ ಲಾಭ ತುಂಬ ಆದರೆ ಕ್ಷುಲ್ಲಕ ಮಾತಿನಿಂದ ಪ್ರತಿನಿಂದ ಪ್ರತಿಷ್ಠೆಗೆ ಲೋಪಕವಾದ ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಪೂರ್ಣ ಅಪಯಶಸ್ಸು ಬರುವ ಅಂಜಿಕೆ. ಮಿತ್ರಸುಖ ಉತ್ತಮ ಆದರೆ ಶತ್ರುಗಳಿಂದಲೂ ಅಷ್ಟೇ ತೊಂದರೆ. ಬಗೆಬಗೆಯ ವೆಚ್ಚದಿಂದ ಬೇಸರಗೊಳ್ಳುವ ಸರತಿ. ಪ್ರವಾಸ ಮತ್ತು ಪತ್ರವ್ಯವಹಾರವೂ ಭೆಟ್ಟಿಗಿಂತ ಹೆಚ್ಚು ಅನುಕೂಲ. ಮಘಾದ ಕೊನೆಯ ೩ ಮತ್ತು ಪೂರ್ವಾದ ೧ ನೇ ಚರಣಕ್ಕೆ ಹೆಚ್ಚು ತೊಂದರೆ. ತಾ. ೮—೯—೧೦ ಅನುಕೂಲ.

ಕನ್ಯಾ

ಪ್ರಕೃತಿ ಮತ್ತು ಪ್ರಾಪಂಚಿಕ ಸುಖ ಬಹಳ ಉತ್ತಮ. ಆದರೆ ಪ್ರತಿಯೊಂದರಲ್ಲಿಯೂ ಹೆಂಡತಿಯ ಕೈವಾಡ ಇದ್ದೇ ಇರುವದು. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಬಹಳ ಉತ್ತಮ. ಆದರೆ ವೆಚ್ಚವೂ ಪ್ರಮಾಣ ಮೀರಿ. ಎಲ್ಲ ವಿಷಯಗಳಲ್ಲಿ ಮಿತ್ರರಿಂದ ಸ್ವಲ್ಪ ಅಡ್ಡಿ ಬರಬಹುದು. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉಭಯಪಕ್ಷಗಳು ಹಟಮಾರಿತನದ ಧೋರಣ ವಹಿಸುವರು. ಪ್ರವಾಸಾದಿ ಕೆಲಸ ಹಿತಪ್ರದ. ಹಸ್ತಾದ ಕೊನೆಯ ೩ ಮತ್ತು ಚಿತ್ರಾದ ೧ ನೇ ಚರಣಕ್ಕೆ ಹೆಚ್ಚು ಅನುಕೂಲ ತಾ. ೬—೭—೧೦ ಅನುಕೂಲ.

ತುಲಾ

ಪ್ರಕೃತಿ ಮತ್ತು ಸ್ತ್ರೀ ಸುಖ ಉತ್ತಮ ಆದರೆ ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ತೊಂದರೆ ವಿಪರೀತ. ಅದಾಗಿ ಜನರ ಸಹವಾಸ ಇಲ್ಲವೆ ಅಂಥ ಜನರ ಮರ್ಜಿಯನ್ನು ಅವಲಂಬಿಸಿ ಇರಬೇಕಾದ ಪ್ರಸಂಗ. ಉದ್ಯೋಗದಲ್ಲಿ ಉತ್ತಮ ಪ್ರಗತಿ ಮತ್ತು ತುಂಬ ಲಾಭ ಆದರೆ ಪ್ರತಿಷ್ಠೆಗೆ ಬಹಳ ಕುಂದು ಬರುವ ಪ್ರಸಂಗ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಒಳ್ಳೆ ಯಶಸ್ಸು. ಮಿತ್ರತ್ವದಲ್ಲಿ ಸ್ವಲ್ಪ ವಿರೋಧ. ಅದರಂತೆ ಮಕ್ಕಳಿಂದಲೂ ಮರ್ಯಾದೆಗೆ ಕುಂದುಂಟಾಗುವಂಥ ಬಹಳ ಕೆಲಸಗಳು. ಭೆಟ್ಟಿಗಿಂತ ಪ್ರವಾಸ ಮತ್ತು ಪತ್ರವ್ಯವಹಾರ ಉತ್ತಮ. ಸ್ವಾತಿಯ ಕೊನೆಯ ೩ ಮತ್ತು ವಿಶಾಖಾದ ೧ ನೇ ಚರಣಕ್ಕೆ ತೊಂದರೆಯಿಂದಲೆ ಯಶಸ್ಸು. ತಾ. ೪, ೫, ೮, ೯, ಅನುಕೂಲ.

ವೃಶ್ಚಿಕ

ಪ್ರಕೃತಿಗೆ ಸ್ವಲ್ಪ ಕಾಯಿಲೆ. ಸ್ತ್ರೀ ಸುಖ ಉತ್ತಮ ಆದರೆ ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಸಾಮಾನ್ಯ. ಉದ್ಯೋಗದಲ್ಲಿ ಪ್ರಕೃತಿ ಮತ್ತು ಪ್ರತಿಷ್ಠೆ ಸಾಧಾರಣವೆ. ಆದರೆ ಲಾಭ ಅನುಕೂಲ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಬಹಳ ಯಶಸ್ಸು. ಶುಭ ಕಾರ್ಯದಲ್ಲಿ ವೆಚ್ಚ ಪ್ರವಾಸ ಮತ್ತು ಪತ್ರವ್ಯವಹಾರಕ್ಕಿಂತ ಭೆಟ್ಟಿ ಅನುಕೂಲ. ಅನುರಾಧಾದ ಕೊನೆಯ ೩ ಮತ್ತು ಜ್ಯೇಷ್ಠದ ೧ನೇ ಚರಣಕ್ಕೆ ತೊಂದರೆ ಹೆಚ್ಚು. ತಾ. ೬, ೭, ೧೦ ಅನುಕೂಲ.

ಧನು

ನಿಮ್ಮ ಮತ್ತು ಹೆಂಡತಿಯ ಪ್ರಕೃತಿ ಉತ್ತಮ ಆದರೆ ಸಹವಾಸಸುಖದಲ್ಲಿ ವಿರಸ. ಎಲ್ಲ ವಿಷಯಗಳಲ್ಲಿ ಪ್ರಾಪಂಚಿಕ ತೊಂದರೆ ವಿಪರೀತ ಆದರೆ ಮಕ್ಕಳಲ್ಲಿ ಒಬ್ಬರ ಬಹಳ ಉನ್ನತಿ. ಉದ್ಯೋಗದಲ್ಲಿ ಪ್ರಗತಿ ಕಡಮೆ ಆದರೆ ಪ್ರತಿಷ್ಠೆ ಮತ್ತು ಲಾಭ ಉತ್ತಮ. ಅವಚಿತ ಲಾಭದ್ದೂ ಸಂಭವ. ಪೂಜ್ಯ ವ್ಯಕ್ತಿಗಳಲ್ಲಿ ಒಬ್ಬರ ವಿಯೋಗದ ಸಂಭವ. ಪ್ರವಾಸ ಅತಿ ತೊಂದರೆಯದು. ಆದರೆ ಭೆಟ್ಟಿ ಮತ್ತು ಪತ್ರವ್ಯವಹಾರವೂ ಅನುಕೂಲ. ಮೂಲ್ಯದ ಕೊನೆಯ ೩ ಮತ್ತು ಪೂರ್ವಾಷಾಢದ ೧ನೇ ಚರಣಕ್ಕೆ ತೊಂದರೆಯಿಂದಲೆ ಯಶಸ್ಸು. ತಾ. ೪, ೫, ೮, ೯ ಅನುಕೂಲ.

ಮಕರ

ನಿಮ್ಮ ಮತ್ತು ಹೆಂಡತಿಯ ಪ್ರಕೃತಿ ಅಲ್ಪಸ್ವಲ್ಪ ಕೆಡುವ ಸಂಭವ. ಪ್ರಾಪಂಚಿಕ ಸುಖದಲ್ಲಿಯೂ ಅತಿ ತೊಂದರೆ. ಉದ್ಯೋಗದಲ್ಲಿ ಪ್ರತಿಷ್ಠೆ ಉತ್ತಮ ಆದರೆ ಪ್ರಗತಿ ಮತ್ತು ಲಾಭ ಬಹಳ ಕಡಮೆ. ಮಿತ್ರರಿಂದ ಮತ್ಸರದ ಮಾತುಗಳು. ನಿರರ್ಥಕ ವೆಚ್ಚ ಬಹಳ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉಭಯ ಪಕ್ಷಗಳಿಗೆ ಹಾನಿ ಅಷ್ಟೆ. ಸ್ಥಾವರದಲ್ಲಿ ಸ್ವಲ್ಪ ಹೊಸ ಗೊಂದಲ ಉತ್ಪನ್ನವಾಗುವ ಅಂಜಿಕೆ. ಪ್ರವಾಸ ಮತ್ತು ಪತ್ರವ್ಯವಹಾರಕ್ಕಿಂತ ಭೆಟ್ಟಿ ಅನುಕೂಲ. ಶ್ರವಣಾದ ಕೊನೆಯ ೩ ಮತ್ತು ಧನಿಷ್ಠಾದ ೧ ನೇ ಚರಣಕ್ಕೆ ತೊಂದರೆ ಕಡಮೆ. ತಾ. ೪, ೫, ೧೦ ಅನುಕೂಲ.

ಕುಂಭ

ಪ್ರಕೃತಿ ಸಾಧಾರಣವೆ. ಸ್ತ್ರೀ ಸುಖದಲ್ಲಿ ವಿರಸ. ಅಪ್ತರು ಮತ್ತು ನೆರೆಯವರಿಂದ ದೊಡ್ಡ ಉಪದ್ರವ. ಸ್ಥಾವರದಲ್ಲಿ ಬಹಳ ಹಾನಿ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಕಡಮೆ. ಆದರೆ ಲಾಭ ಅನುಕೂಲ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉಭಯ ಪಕ್ಷಗಳಲ್ಲಿ ಸಮಾನ ಸ್ಥಿತಿ. ಪ್ರವಾಸಕ್ಕಿಂತ ಭೆಟ್ಟಿ ಮತ್ತು ಪತ್ರವ್ಯವಹಾರ ಅನುಕೂಲ. ಶತತಾರಿಕೆಯ ಕೊನೆಯ ೩ ಮತ್ತು ಪೂರ್ವಾಭಾದ್ರಪದದ ೧ ನೇ ಚರಣಕ್ಕೆ ತೊಂದರೆ ಹೆಚ್ಚು. ತಾ. ೬, ೭, ೮, ೯ ಅನುಕೂಲ.

ಮೀನ

ಪ್ರಕೃತಿ ಸಾಧಾರಣವೆ ಆದರೆ ಹೆಂಡತಿ ಮತ್ತು ಪ್ರಾಪಂಚಿಕ ಸುಖ ಉತ್ತಮ. ಉದ್ಯೋಗದಲ್ಲಿ ಪ್ರತಿಷ್ಠೆ ಕಡಮೆ ಆದರೆ ಪ್ರಗತಿ ಮತ್ತು ಲಾಭ ಉತ್ತಮ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉಭಯ ಪಕ್ಷಗಳಲ್ಲಿ ಸಮಾನ ಸ್ಥಿತಿ. ಮಿತ್ರತ್ವದಲ್ಲಿ ವಿರೋಧ ಪ್ರವಾಸ ಮತ್ತು ಭೆಟ್ಟಿಗಿಂತ ಪತ್ರವ್ಯವಹಾರ ಹೆಚ್ಚು ಅನುಕೂಲ. ಉತ್ತರಾಭಾದ್ರಪದದ ಕೊನೆಯ ೩ ಮತ್ತು ರೇವತಿಯ ೧ ನೇ ಚರಣಕ್ಕೆ ತೊಂದರೆಯಿಂದಲೆ ಯಶಸ್ಸು. ತಾ. ೬, ೭, ೮, ೯ ಅನುಕೂಲ.

ಮೊರಬದ ಪ್ರಸಿದ್ಧ ಕಾಂಗ್ರೆಸ ಕಾರ್ಯಕರರಾದ ಶ್ರೀ ಮಹಮ್ಮದಗೌಸ ಮೋದೀನಸಾಹೇಬ ಭಾರವಾಡ ಇವರು ೨೫ ನೇ ತಾರೀಕು ರಾತ್ರಿ ಕರುಳು ಬೇನೆಯಿಂದ ಪೈಗಂಬರವಾಸಿಗಳಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರು ೧೯೩೦ ರಿಂದ ದೇಶಸೇವೆಗಾಗಿ ತಮ್ಮ ಜೀವನ ಸವೆಸಿದ್ದರು.

ಈ ಪತ್ರಿಕೆಯು ಹುಬ್ಬಳ್ಳಿಯ ಸಂಯುಕ್ತ—ಕರ್ನಾಟಕ ಮುದ್ರಣಾಲಯದಲ್ಲಿ 'ಲೋಕಶಿಕ್ಷಣ ಟ್ರಸ್ಟ' ದ ಪರವಾಗಿ ಹ. ರಾ. ಪುರೋಹಿತರಿಂದ ಮುದ್ರಿತವಾಗಿ ಪ್ರಕಟವಾಯಿತು.

ಭಾರತಕ್ಕೊಂದು ಪಂಚವಾರ್ಷಿಕ ಯೋಜನೆ ಅಗತ್ಯ

(ಮೊದಲನೆ ಪುಟದಿಂದ ಬಂದದ್ದು)

ಹತ್ತಿಯ ಬಟ್ಟೆ—	೬೦ ಕೋಟಿಗಜ ಕೋಟಿ ಗಜ
ಹತ್ತಿಯ ನೂಲು—	೨೦ ಕೋಟಿರತ್ತಲು
ಉಕ್ಕು—	೩೦ ಸಾವಿರ ಟನ್
ಸಿಮೆಂಟ್—	೨ ಲಕ್ಷ ಟನ್
ಕಾಗದ—	೮೪ ಸಾವಿರ ಟನ್

ಎಲ್ಲ ಬಾಬಿನಲ್ಲೂ ಬಹಳ ಕೊರತೆಯಿರುವಾಗ ಭಾರತ ರಾಷ್ಟ್ರೀಯ ಕಾಂಗ್ರೆಸ್ಸು ಕೆಲಸ ತಿಂಗಳು ಹೀಗೆ ನಷ್ಟವಾಗುವುದನ್ನು ಗಮನಿಸದೆ ಸುಮ್ಮನೆ ಕುಳ್ಳಿರಲಾರದು.

ಕಳೆದ ಅಗಸ್ಟ ೧೩ ರಲ್ಲಿ ಕಾಂ. ಕಾರ್ಯಸಮಿತಿಯು ವರ್ಧಾದಲ್ಲಿ ನಿವಾರ್ಯವಾದ ಸಂಪುಗಳು ನಡೆಯದಂತೆ ನೋಡಿಕೊಳ್ಳಬೇಕೆಂದು ಒತ್ತಿ ಹೇಳಿತು. ಸಾರ್ವಜನಿಕರಿಗೆ ಉಪಯೋಗವಾಗುವ ಕಾರ್ಯಗಳಲ್ಲಿ ನಿರತರಾದವರು ಸಂಪಿನಿಂದ ದೂರವಿದ್ದು ಎಲ್ಲ ಕಲಹಗಳನ್ನೂ ಮಧ್ಯಸ್ಥರ ನ್ಯಾಯನಿರ್ಣಯಕ್ಕೊಪ್ಪಿಸಬೇಕು. ಈ ಠರಾವಾದ ನಂತರ, ಕಾಂಗ್ರೆಸ ಮಂತ್ರಿಮಂಡಲಗಳು ಅಸಮರ್ಥವೆಂದು ಸಿದ್ಧಮಾಡುವ ಉದ್ದೇಶದಿಂದ ಸದ್ಯದ ಕೊರತೆ ಮತ್ತು ಕಷ್ಟಗಳನ್ನು ರಾಜಕೀಯ ಬಂಡವಾಳವಾಗಿ ಬಳಸಿಕೊಂಡು ಅಖಿಲಭಾರತ ಕೂಲಿಕಾರ ಸಂಘಗಳನ್ನು ಕಮ್ಯೂನಿಸ್ಟರು ತಮ್ಮ ವಶದಲ್ಲಿಟ್ಟುಕೊಂಡುದರಿಂದ ಮೇ ೪೭ ರಲ್ಲಿ ದಿಲ್ಲಿಯಲ್ಲಿ ಒಂದು ಸಮ್ಮೇಲನ ಕೂಡಿ ಹಿಂದೀ ರಾಷ್ಟ್ರೀಯ ಮಜದೂರರ ಸಂಘವೆಂಬ ಬೇರೆಯ ಕೂಲಿಕಾರ ಸಂಘವನ್ನು ಸ್ಥಾಪಿಸಿತು.

"ದೇಶದ ಇತಿಹಾಸದಲ್ಲಿ ಇದೊಂದು ಕಠಿನ ಕಾಲ. ಈ ಕಾಲದಲ್ಲಿ ಉತ್ಪಾದಕ ಸಂಸ್ಥೆಗಳನ್ನು ರುಳಿಸುವುದೆಂದರೆ ರಾಷ್ಟ್ರದ ಜೀವಿತಕ್ಕೂ ರಾಜಕೀಯ ಐಕ್ಯಕ್ಕೂ ನೇರವಾಗಿ ಪೆಟ್ಟುಕೊಟ್ಟಂತೆಯೇ ಸರಿ" ಎಂದು ಶ್ರೀ ಗುಲಜಾರಿಲಾಲರು ಅಭಿಪ್ರಾಯ ಪಡುತ್ತಾರೆ.

ಅಮೇರಿಕದ ಕೂಲಿಕಾರ ಮಹಾ ಮಂಡಲದ ಸಂಘಟಕನಾದ ಮಾರ್ಟಿನ್ಮ್ಯಾಕಿಂಟೈರನು—"ಕೂಲಿಕಾರರು ಬರಿಯ ತಮಾಷೆಗಾಗಿ ಸಂಪು ಹೂಡುವುದಿಲ್ಲ. ಸದಾ ಅತೃಪ್ತನಾಗಿರುವವನಲ್ಲದೆ ಮತ್ತಾರೂ ಸಂಪನ್ನು ಸ್ವಾಗತಿಸರು. ಸಂಘದ ಸಾಮಾನ್ಯ ಕೆಲಸಗಾರರು ಕೆಟ್ಟ ಕಜ್ಜಿನ ರ್‍ಯಾಡಿಕಲ್ಲರಲ್ಲ. ಅವರಿಗೆ ಅನ್ಯಾಯವಾಗದೆ ಅವರು ಎಂದೂ ತಮ್ಮ ಆದಾಯವನ್ನು ಕಳೆದುಕೊಂಡು ಸಂಪಿನ ಪ್ರಚಾರಕ್ಕೆ ಹೋಗುವುದಿಲ್ಲ" ಎಂದಿದ್ದಾನೆ.

ಲಾಭದಲ್ಲಿ ಪಾಲು ಕೊಡುವುದು

ದಯಾಪೂರ್ಣವಾಗಿ ನಡೆದರೆ ಬಂಡವಾಲಿಗರಿಗೂ ಕೂಲಿಕಾರರಿಗೂ ನಡುವೆ ಇರುವ ವಿರೋಧಭಾವವನ್ನು ಎಷ್ಟೋ ಪಟ್ಟು ಕಡಿಮೆ ಮಾಡಬಹುದು. ಭಾರತದಲ್ಲಿ ತಾತಾ ಕಂಪನಿಯವರು ಲಾಭದಲ್ಲಿ ಕೆಲಸಗಾರರಿಗೆ ಪಾಲು ಕೊಡುವ ಯೋಜನೆಯನ್ನು ಸ್ವೀಕರಿಸಿ ಉಳಿದವರಿಗೊಂದು ಮೇಲ್ಪಂಕ್ತಿಯನ್ನು ಹಾಕಿಕೊಟ್ಟಿದ್ದಾರೆ. ತಾತಾರವರ ಕಬ್ಬಿಣ ಮತ್ತು ಉಕ್ಕಿನ ಕಾರಖಾನೆಗಳ ಕೆಲಸಗಾರರಿಗೆ ನಷ್ಟನಿಧಿಗೆ ತೆಗೆದಿಡುವ ಹಣ, ತೆರಿಗೆಯ ಹಣ, ಪಾಲುಗಳ ಮೇಲಿನ ಬಡ್ಡಿಯ ಹಣ— ಇವೆಲ್ಲವನ್ನೂ ಕಳೆದುಳಿವ ಮೂಲ ಲಾಭದಲ್ಲಿ ನೂರಕ್ಕೆ ೨೨॥ ಯಷ್ಟು ಪಾಲು ದೊರೆಯುತ್ತದೆ. ಸಂಪು ಹೂಡುವವರಿಗೆ ಕಾಯದೆ ಕೂಡಲೆ ಸರಕಾರಗಳೂ ಮಾಲಿಕರೂ ಕೆಲಸದ ಕಾಲಾವಧಿಯ ಮೇಲೆ ಕೂಲಿಕಾರರಿಗೆ ಕೊಡಬೇಕಾದ ಬಡತಿಗಳನ್ನು ನೇರವಾಗಿ ಕೊಟ್ಟುಬಿಟ್ಟರೆ ಅನೇಕ ಸಂಪುಗಳ ಮೂಲಕಾರಣವಾದ ಕೂಲಿ ಮತ್ತು ಸಾಮಾನುಗಳ ಬೆಲೆಗಳ ನಡುವಣ ಅಂತರವನ್ನು ಕಡಿಮೆ ಮಾಡಲು ಅದು ಬಹಳಮಟ್ಟಿಗೆ ಸಹಕಾರಿಯಾಗುವುದು.

ಆದರೆ ತನ್ನ ಸಂಘದ ಬಲ ಪ್ರದರ್ಶನ ಮಾಡುವ ಅಭ್ಯಾಸವನ್ನು ಬಿಡುವುದು ಕೆಲಸಗಾರನಿಗೆ ಸೇರಿದ್ದು "ನಿವಾರ್ಯವಾದ" ಸಂಪುಗಳಿರಬಾರದು. ಮೇಲಿನ ಶಬ್ದದ ಲಕ್ಷಣ ಹೇಳುವುದೇನೋ ಕಷ್ಟವೇ. ಈಗಿನ ಕೂಲಿಕಾರ ಪ್ರಪಂಚದಲ್ಲಿ ಸಂಪುಗಳದೇ ಗುಂಪು! ಆದರೆ ಅವಾವುವೂ ಬಂಡವಾಲಿಗರ ಅನುದಾರ ವೃತ್ತಿಯಿಂದಾಗಲಿ, ಬಂಡವಾಲಶಾಹಿಯನ್ನು ಮುರಿಯಬೇಕೆಂದಾಗಲಿ, ಬಂಡವಾಲಶಾಹಿಯನ್ನು ಮುರಿಯಬೇಕೆಂದಾಗಲಿ ಪ್ರಾರಂಭಿಸಲ್ಪಟ್ಟವಲ್ಲ.